ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೨ನೇ ಸೆಪ್ಟೆಂಬರ್ ೧೯೮೫ ಭಾದ್ರಪದ ೧೧, ೧೯೦೭, ಶಕ.

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ
೧೧-೦೦ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ವಿತ್ತೀಯ ಕಾರ್ಯಕಲಾಪ

೧೯೮೫-೮೬ರ ಬೇಡಿಕೆಗಳ ಸಂ. ೪೯, ೪೩, ೫೦, ೫೧, ೫೨ ಮತ್ತು ೫೩ —ಕಂದಾಯ ಮತ್ತು ಯೋಜನಾ ಇಲಾಖೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—ಮಾನ್ಯ ಸಭಾಪತಿಗಳೇ, ಕಂದಾಯ ಮತ್ತು ಯೋಜನಾ ಇಲಾಖೆ ಬೇಡಿಕೆಗಳ ಮೇಲೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರು ಅನೇಕ ರಚನಾತ್ಮಕವಾದ ಸಲಹೆ ಸೂಚನೆಗಳನ್ನು ಕೊಟ್ಟಿರುವುದಲ್ಲದೇ, ಟೀಕೆಗಳನ್ನು ಮಾಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಎರಡು ಇಲಾಖೆಗಳ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳು ಇನ್ನೂ ಚೆನ್ನಾಗಿ ಕೆಲಸ ಮಾಡುವ ಬಗ್ಗೆ ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಮಾತನಾಡಿದ್ದಾರೆ. ನಾನು ಪ್ರಥಮದಲ್ಲಿ ಯೋಜನಾ ಇಲಾಖೆಯ ಬೇಡಿಕೆಯ ಮೇಲೆ ಮಾನ್ಯ ಸದಸ್ಯರುಗಳು ಎತ್ತಿದ ವಿಚಾರಗಳ ಬಗ್ಗೆ ಉತ್ತರ ಕೊಡಬಯಸುತ್ತೇನೆ. ಕಾರಣ ನನಗೆ ಗೊತ್ತಿಲ್ಲ, ಅನೇಕ ಜನ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದರೂ ಕೂಡ ಕೇವಲ ಮೂರು ಜನ ಸದಸ್ಯರು ಮಾತ್ರ ಯೋಜನಾ ಇಲಾಖೆಯ ಬಗ್ಗೆ ಮಾತನಾಡಿದ್ದಾರೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು, ಭೂಪತಿಯವರು ಹಾಗೂ ಆನಂದರಾಯರು ಯೋಜನಾ ಇಲಾಖೆಯ ಮೇಲೆ ಮಾತನಾಡಿದ್ದಾರೆ. ಮೂಲಭೂತವಾಗಿ ರಾಷ್ಟ್ರದ ರಾಜ್ಯದ ಸರ್ವತೋಮುಖ ಅಭಿವೃದ್ಧಿ, ಏಳಿಗೆ ಮತ್ತು ಶ್ರೀ ಸಾಮಾನ್ಯನ ಬದುಕನ್ನು ಹಸನಾಗಿ ಮಾಡಿ, ಅವನ ಜೀವನ ಮಟ್ಟವನ್ನು ಎತ್ತರಿಸತಕ್ಕಂತಹ ಅದರ ಜೊತೆಗೆ ಕಡುಬಡವರಿಂದ ಕೂಡಿದ ಈ ನಾಡಿನ ಜನಕ್ಕೆ ಉದ್ಯೋಗಾವಕಾಶ ಮಾಡಿ ಕೊಟ್ಟಂತಹ ಈ ಕಾರ್ಯ ರಾಷ್ಟ್ರದಲ್ಲಾಗಲಿ ರಾಜ್ಯ ಮಟ್ಟದಲ್ಲಾಗಲಿ ಆಗಬೇಕಾದರೆ ಮೊದಲು ಅದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದ, ಆಲೋಚನೆ ಮಾಡಬೇಕಾಗುತ್ತದೆ ಆಲೋಚನೆ ಬಂದಮೇಲೆ ಕಾರ್ಯಕ್ರಮ ರೂಪಗೊಳ್ಳಬೇಕಾಗುತ್ತದೆ. ಯಾವ ರಾಷ್ಟ್ರವೇ ಆಗಲಿ, ರಾಜ್ಯವೇ ಆಗಲಿ ತನ್ನದೇ ಆದಂತಹ ಸಂಪನ್ಮೂಲಗಳು ಅಂದರೆ ನೈಸರ್ಗಿಕ ಸಂಪತ್ತು, ಜನ ಸಂಪತ್ತು, ಎಲ್ಲವನ್ನೂ ಸರಿಯಾದ ರೀತಿಯಲ್ಲಿ ಬಳಸಿಕೊಂಡು ಉಪಯೋಗ ಮಾಡತಕ್ಕಂತಹ ಯೋಜನೆಗಳನ್ನು ಹಾಕಿಕೊಳ್ಳದೆ ಹೋದರೆ ಆ ರಾಷ್ಟ್ರ, ಆ ರಾಜ್ಯ ಎಂದೂ ಪ್ರಗತಿ ಹೊಂದುವುದಿಲ್ಲ. In my opinion the Planning is the most vital and fundamental sector which determines the future progress of the nation as well as the State. ಆ ದೃಷ್ಟಿಯಿಂದ ನೋಡಿದಾಗ, ೧೯೫೦ರಲ್ಲಿ ಮೊದಲನೇ ಯೋಜನಾ ಆಯೋಗ ರಾಷ್ಟ್ರದಲ್ಲಿ ಅಸ್ತಿತ್ವಕ್ಕೆ ಬಂದಾಗ ಅನೇಕ ಗುರಿಗಳನ್ನು ಮತ್ತು ಉದ್ದೇಶಗಳನ್ನು ಹೇಳಿದ್ದರು. ಸೋವಿಯತ್ ರಷ್ಯದಲ್ಲೂ ಕೂಡ ಕ್ರಾಂತಿಯಾದ ಮೇಲೆ ಲೇನಿನ್ ಕಾಲದಲ್ಲಿ ಪಂಚವಾರ್ಷಿಕ ಯೋಜನೆಗಳು ಪ್ರಾರಂಭವಾದವು,

ಒಂದನೇ ಯೋಜನೆಯು ನಂತರ ಮತ್ತೊಂದು ಯೋಜನೆ ಪ್ರತಿ ಯೋಜನೆಯು ಹಂತದಲ್ಲಿ ಅದರ ಹಿನ್ನೋಟವನ್ನು ಮಾಡಿ ಈ ಯೋಜನೆ ಯಾವ ರೀತಿ ಕಾರ್ಯಗತವಾಗಿದೆ, ಅದು ಗುರಿಯನ್ನು ಸಾಧಿಸಿದೆಯೇ ? ಅದರ ದೋಷಗಳು ಏನು ? ಮುಂದೆ ಯೋಜನೆಗಳ ಬಗ್ಗೆ ಮತ್ತು ಹಿನ್ನೆಲೆ ಬಗ್ಗೆ ಆಲೋಚನೆ ಮಾಡತಕ್ಕ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಂಡು ಬಂದಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಕೂಡ ಇದೇ ರೀತಿ ಆಗಿದೆ. ಮೊದಲು ಅಭಿವೃದ್ಧಿ ಮನಸ್ಸಿನಲ್ಲಿ ಮೂಡಬೇಕು. ಚಿಂತನೆಯಾಗಬೇಕು. ಈ ಚಿಂತನೆ ಜನರ ಅವಶ್ಯಕತೆ ಅದರ ಆಗುಹೋಗುಗಳನ್ನು ಅವಲಂಬಿಸಿರಬೇಕು. ಜನರ ಆಶೋತ್ತರಗಳನ್ನು ಅರಿತು ಅವುಗಳನ್ನು ಕೈಗೂಡಿಸುವ ಕ್ರಮಬದ್ಧವಾದ ಚಿಂತನೆಯೇ ಯೋಜನೆ. ಇದನ್ನು ಅರಿತುಕೊಳ್ಳಬೇಕಾದರೆ ಅದು ನಮ್ಮ ರಾಜ್ಯದ ಅಗತ್ಯಗಳ ಮೇಲೆ ನಮ್ಮ ಜನತಾ ಪ್ರತಿನಿಧಿಗಳ ಮುಖಾಂತರ ಸರ್ಕಾರ ಅದರಲ್ಲಿಯೂ ಯೋಜನಾ ಇಲಾಖೆ ತಿಳಿದುಕೊಳ್ಳಬೇಕಾಗುತ್ತದೆ. ಸರ್ವೆ ಸಾಮಾನ್ಯವಾದ ಮಾತಿನಲ್ಲಿ ಹೇಳುವುದಾದರೆ ೧೦ ಸಾವಿರ ಜನರಲ್ಲಿ ಒಬ್ಬ ಹಂತಕ ಸಿಗಬಹುದು, ಆದರೆ ಚಿಂತಕ ಸಿಗುವುದಿಲ್ಲ. ಅಂತಹ ಚಿಂತಕ್ಷರ ಫಲಪ್ರದವಾದಂತಹ ಯೋಜನೆ ಇಲಾಖೆಯ ಬಗ್ಗೆ ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಕಳೆದ ಹಲವಾರು ವರ್ಷಗಳಿಂದ ನಮ್ಮ ರಾಜ್ಯದ ಯೋಜನಾ ಇಲಾಖೆ ಬಹಳ ಉತ್ತಮ ಮಟ್ಟದಲ್ಲಿ ಮತ್ತು ಅತ್ಯಂತ ಸಮರ್ಥ ರೀತಿಯಲ್ಲಿ ಕೆಲಸ ಮಾಡುತ್ತಾ ಬಂದಿದೆ. ಇವತ್ತು ಯೋಜನಾ ಇಲಾಖೆ ರಾಜ್ಯದ ಸಮಗ್ರವಾದಂತಹ ಅಭಿವೃದ್ಧಿಗೆ ತನ್ನದೇ ಆದಂತಹ ಕೊಡುಗೆಯನ್ನು ಕೊಟ್ಟಿದೆ, ಯೋಜನಾ ಇಲಾಖೆಯ ಕಾರ್ಯಕ್ಷೇತ್ರ ಈ ಇಲಾಖೆಯಿಂದ ಆಚೆಗೆ ಹೋಗುತ್ತದೆ ಎಂದರೆ ತಪ್ಪಾಗಲಾರದು. ಒಂದೊಂದು ಇಲಾಖೆಗೆ ತನ್ನದೇ ಆದಂತಹ ರೀತಿಯಲ್ಲಿ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸತಕ್ಕಂತಹ ಕೆಲಸವನ್ನು ಮಾಡುತ್ತಿದೆ. ಲೋಕೋಪಯೋಗಿ ಇಲಾಖೆ ಇರಬಹುದು, ಕೈಗಾರಿಕಾ ಇಲಾಖೆ ಇರಬಹುದು. ಸಮಾಜ ಕಲ್ಯಾಣ ಇಲಾಖೆ ಇರಬಹುದು, ಕಂದಾಯ ಇಲಾಖೆ ಇರಬಹುದು., ಈ ಎಲ್ಲಾ ಇಲಾಖೆಗಳಿಗೂ ಪ್ರಚೋದನೆ ಮಾಡತಕ್ಕಂತಹ ಸಂಯೋಜನೆ ಮಾಡತಕ್ಕಂತಹ ಕಾರ್ಯವನ್ನು ಸಮರ್ಪಕವಾಗಿ ಮಾಡಿದೆ. ಈಗಾಗಲೇ ೭ನೇ ಪಂಚವಾರ್ಷಿಕ ಯೋಜನೆಗಳ ಬಗ್ಗೆ ಸಿದ್ಧತೆಗಳನ್ನು ಮಾಡಿ ರಾಷ್ಟ್ರ ಯೋಜನಾ ಆಯೋಗದ ಮುಂದೆ ಸಮರ್ಥವಾಗಿ ಇಟ್ಟು, ಹೆಚ್ಚಿನ ರೀತಿಯಲ್ಲಿ ಯೋಜನೆಗೆ ಹಣ ಪಡೆಯುವುದರಲ್ಲಿ ಯಶಸ್ವಿಯಾಗಿದೆ. ಇದರ ಜೊತೆಗೆ ಈ ವರ್ಷದ ಯೋಜನೆಯನ್ನು ಸಿದ್ಧ ಮಾಡಿದ್ದೇವೆ. ಆದರೆ ಇದು ಸಾಲದು. ಈ ಬಗ್ಗೆ ನಾವು ಒಂದು ಸಮಗ್ರವಾದಂಥ ಆಲೋಚನೆ ಮಾಡಬೇಕಾಗುತ್ತದೆ. ಇಲ್ಲಿ ಯಾವುದೇ ಪಕ್ಷದ ಸರ್ಕಾರ ಆಡಳಿತ ನಡೆಸುತ್ತಿರಬಹುದು, ಆದರೆ ಒಂದು ಸಮಗ್ರವಾದಂಥ ಯೋಜನೆಯ ಅವಶ್ಯಕತೆ ಇದೆ, ಈ ದೃಷ್ಟಿಯಿಂದ ಈ ಇಲಾಖೆ ಎರಡು ಸಾವಿರದ ಇಸವಿಯವರೆಗೆ ನಮ್ಮ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ನೈಸರ್ಗಿಕವಾದಂಥ ಮತ್ತು ಬೇರೆ ರೀತಿಯ ಸಂಪನ್ಮೂಲಗಳ ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕಾಗಿದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ದುಡಿಯುವಂತಹ ಜನತೆಗೆ ಕೆಲಸ ಒದಗಿಸುವಂತಹ ಗುರಿಯನ್ನು ಸಹ ನಾವು ಮುಟ್ಟಬೇಕಾಗಿದೆ. ಅಷ್ಟೇ ಅಲ್ಲ, ಬಡತನದ ರೇಖೆಗಿಂತ ಕೆಳಗಿರುವ ಎಲ್ಲ ಜನರನ್ನು ಮೇಲೆತ್ತಬೇಕಾಗಿದೆ. ಕೃಷಿ, ಕೈಗಾರಿಕೆ ಮತ್ತು ಬೇರೆ ಬೇರೆ ರಂಗಗಳಲ್ಲಿ ಯಾವ ಯಾವ ರೀತಿ ನಮ್ಮ ಯೋಜನೆಗಳನ್ನು ತಯಾರು ಮಾಡಬೇಕು ಮತ್ತು ಯಾವ ಯಾವ ಹಂತಗಳಲ್ಲಿ ಕಾರ್ಯಾಚರಣೆಯಲ್ಲಿ ತರಬೇಕು ಮತ್ತು ಅದಕ್ಕೆ ಸಂಪನ್ಮೂಲಗಳನ್ನು ಯಾವ ರೀತಿ ಕ್ರೋಢೀಕರಿಸಬೇಕು ಎಂಬ ಬಗ್ಗೆ ಬೃಹತ್ ಯೋಜನೆಯನ್ನು ಸಿದ್ಧ ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಇದನ್ನು ಆದಷ್ಟು ಬೇಗ ನಮ್ಮ ರಾಜ್ಯದ ಜನತೆಯ ಮುಂದೆ ಹಾಗೂ ಕೇಂದ್ರ ಸರ್ಕಾರದ ಮುಂದೆ ಇಡಲು ಪ್ರಯತ್ನ ಮಾಡುತ್ತೇವೆ. ಈ ಇಲಾಖೆಗೆ ಸಂಬಂಧಪಟ್ಟ ಅನೇಕ ಪ್ರಕಟಣೆಗಳನ್ನು ಈಗಾಗಲೇ ಮಾನ್ಯ ಸದಸ್ಯರ ಕೈಗೆ ಕೊಡಲಾಗಿದೆ. ಅವುಗಳನ್ನೆಲ್ಲಾ ಅಧ್ಯಯನ ಮಾಡುವುದು ಬಹಳ ಅವಶ್ಯಕವೆಂದು ನಾನು ಮಾನ್ಯ ಸದಸ್ಯರಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಒಂದೇ ಮಾತಿನಲ್ಲಿ ಹೇಳುವುದಾದರೆ, ಪ್ರತಿವರ್ಷ ಹೊರಬರುವ ಈ ಇಲಾಖೆಯ ಪ್ರಕಟಣೆಗಳು ಏನಿವೆ, ಅವು ಎಕನಾಮಿಕ್ ಸರ್ವೆ ಇರಬಹುದು, ಹಾಗೂ ಇತ್ತೀಚೆಗೆ ಹೊರ ತಂದಿರುವ "The Dawn of New Era" ಎನ್ನುವಂತಹ ಒಂದು ಪ್ರಕಟಣೆಯನ್ನು ಮಾನ್ಯ ಸದಸ್ಯರಿಗೆ ಒದಗಿಸಿದ್ದೇವೆ. ಇದರ ಜೊತೆಗೆ ಇನ್ನಿತರ ಬೇರೆ ಬೇರೆ ಸಾಹಿತ್ಯಗಳನ್ನು ತಮಗೆ ಕೊಟ್ಟಿದ್ದೇನೆ. ಇವುಗಳೆಲ್ಲಾ ತಮಗೆ ಇಡೀ ರಾಜ್ಯದ ಪ್ರಗತಿಯ ಪ್ರತಿಬಿಂಬವನ್ನು ತೋರಿಸುವಂತಹ ಒಂದು ಕೈಗನ್ನಡಿಯಂತೆ ಇವೆ. ಇವುಗಳನ್ನು ಸರ್ಕಾರ ಪ್ರತಿವರ್ಷವೂ ಮಾನ್ಯ ಸದಸ್ಯರಿಗೆ ಕೊಡುತ್ತಿದೆ.

ಇವುಗಳಲ್ಲಿ ಎಲ್ಲ ರೀತಿಯ ಅಂಕಿ ಅಂಶಗಳು ಇವೆಯೋ ಹೊರತು ಯಾವ ರೀತಿಯ ರಾಜಕೀಯವೂ ಇವುಗಳಲ್ಲಿ ಇಲ್ಲ. They are more scientific and giving the realistic picture of the entire State Economic and development in all fields. ಒಟ್ಟಿನಲ್ಲಿ ನಾವು ಈ ರಾಜ್ಯದ ನೈಜವಾದಂಥ ಚಿತ್ರವನ್ನು ತೋರಿಸಲು ನಾವು ಪ್ರಾಮಾಣಿಕವಾದಂಥ ಪ್ರಯತ್ನ ಮಾಡಿದ್ದೇವೆ. ಈ ಹಂತದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಾರದು, ಅದೇನೆಂದರೆ, ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಮತ್ತು ವಿರೋಧ ಪಕ್ಷದ ಸದಸ್ಯನಾಗಿದ್ದಾಗ ನಾನು ಇಲ್ಲಿ ಈ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಎಕನಾಮಿಕ್ ಸರ್ವೆ ರಿಪೋರ್ಟ್‌ನ್ನು ನೋಡುತ್ತಿದ್ದೆ. ಏಕೆಂದರೆ, ಇದರಲ್ಲಿ ಸರ್ಕಾರ ಯಾವ ಯಾವ ವರ್ಷಗಳಲ್ಲಿ ಏನೇನು ಕೆಲಸ ಮಾಡಿದೆ ಎಂಬುದರ ಅಂಕಿಅಂಶಗಳು ನಮಗೆ ಸಿಗುತ್ತದೆ. ಈ ಒಂದು ಕಾರಣದಿಂದ ಈ ಒಂದು ಪ್ರಕಟಣೆ ಯಾವಾಗ ಪ್ರಾರಂಭವಾಯಿತೋ ಅಲ್ಲಿಂದ ಇಲ್ಲಿಯವರೆಗೆ ಪ್ರಕಟವಾಗಿರುವಂತಹ ಎಲ್ಲ ಪ್ರಕಟಣೆಗಳನ್ನು ನಾನು ನನ್ನ ಲೈಬ್ರರಿಯಲ್ಲಿ ಕ್ರೋಢೀಕರಿಸಿ ಇಟ್ಟಿದ್ದೇನೆ. ಇದರ ಒಂದು ಆಧಾರದ ಮೇಲೆ ೧೯೬೦-೬೧ ರಿಂದ ೧೯೭೦-೭೧ ರವರೆಗೆ ಆದಂಥ ಪ್ರಗತಿಯ ಬಗ್ಗೆ ಮತ್ತು ೧೯೭೧ರಿಂದ ೧೯೮೦ ರವರೆಗೆ ಆದಂಥ ಪ್ರಗತಿಯ ಬಗ್ಗೆ ಹಾಗೂ ೧೯೮೦ ರಿಂದ ೧೯೮೫ರವರೆಗೆ ಆದಂಥ ಪ್ರಗತಿಯ ಬಗ್ಗೆ ಇಲ್ಲಿ ಮಾತನಾಡಿದ್ದೇನೆ. ಈ ಯೋಜನಾ ಇಲಾಖೆ ಕೇವಲ ಯೋಜನೆಗಳನ್ನು ತಯಾರು ಮಾಡುವುದು ಮಾತ್ರವಲ್ಲ, ಯೋಜನೆಗಳ ಸಮೀಕ್ಷೆಯನ್ನು ಸಹ ಮಾಡುತ್ತಿದೆ. ಮಾನ್ಯ ಸದಸ್ಯರ ಅನುಕೂಲಕ್ಕಾಗಿ ಈ ಇಲಾಖೆ ಮೂಲಕ ಇಂಟರ್-ಸ್ಟೇಟ್ ಎಕನಾಮಿಕ್ ಇಂಡಿಕೇಟರ್ಸ್‌ನ್ನು ಸಹ ಕೊಡುತ್ತಿದ್ದೇವೆ. ನಾವು ನಮ್ಮ ರಾಜ್ಯದ ಆರ್ಥಿಕಾಭಿವೃದ್ಧಿಯ ಎಲ್ಲ ಮಾಹಿತಿಗಳನ್ನು ಪ್ರಕಟಣೆ ಮಾಡಿ ಮಾನ್ಯ ಸದಸ್ಯರಿಗೆ ಒದಗಿಸಿದ್ದೇವೆ. ಇದರ ಜೊತೆಗೆ ಪ್ರತಿ ತಿಂಗಳೂ ಸಹ ಈ ರಾಜ್ಯದ ಯೋಜನಾ ಪ್ರಗತಿಯನ್ನು ಸಮೀಕ್ಷೆ ಮಾಡಲು ಮತ್ತು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಈ ಬಗ್ಗೆ ಬರಬಹುದಾದಂಥ ಅಡ್ಡಿ ಆತಂಕಗಳನ್ನು ನಿವಾರಿಸುವ ಸಲುವಾಗಿ ಚೀಫ್ ಸೆಕ್ರೆಟರಿ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸಹ ಮಾಡಿದ್ದೇವೆ. ಜಿಲ್ಲಾ ಮಟ್ಟದಲ್ಲಿ ಆಗುತ್ತಿರುವ ಅಭಿವೃದ್ಧಿಯ ಪ್ರಗತಿಯನ್ನು ವಿಮರ್ಶೆ ಮಾಡತಕ್ಕಂಥ ಕೆಲಸವನ್ನು ಮತ್ತು ಅಲ್ಲಿರುವಂತಹ ತೊಂದರೆಗಳನ್ನು ನಿವಾರಣೆ ಮಾಡುವಂತಹ ಕೆಲಸವನ್ನು ಹೊಸದಾಗಿ ನಾವು ಪ್ರಾರಂಭ ಮಾಡಿದ್ದೇವೆ. ಈ ರೀತಿ ಸಮೀಕ್ಷೆ ಮಾಡುವುದರ ಮುಖ್ಯ ಉದ್ದೇಶ ಏನೆಂದರೆ, ನಮ್ಮ ಯೋಜನೆಯ ಗುರಿ ಸಾಧನೆಯಾಗಿದೆಯೋ ಮತ್ತು ಇದರ ಒಂದು ಲಾಭ ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟಿದೆಯೋ ಎಂಬುದನ್ನು ನೋಡುವುದರ ಸಲುವಾಗಿ ಈಗ ಉದಾಹರಣೆಗೆ ಹೇಳಬೇಕೆಂದರೆ, ಐ.ಆರ್.ಡಿ.ಪಿ. ಯ ಒಂದು ಅನುಕೂಲ ಶೇಕಡಾ ನೂರರಷ್ಟು ಸಂಬಂಧಪಟ್ಟ ಫಲಾನುಭವಿಗಳಿಗೆ ಮುಟ್ಟಿದೆಯೆ ಎಂಬುದನ್ನು ಈ ಇಲಾಖೆ ಪರಿಶೀಲನೆ ಮಾಡುತ್ತದೆ. ಈ ಒಂದು ಕೆಲಸ ಸಾಕಷ್ಟು ವ್ಯಾಪಕವಾಗಿ ಆಗಬೇಕಾಗುತ್ತದೆ. ದಲಿತರು, ದುರ್ಬಲ ವರ್ಗದವರು, ವಿಧವೆಯರು, ಕೃಷಿ ಕಾರ್ಮಿಕರು ಹೀಗೆ ಕೆಲವೊಂದು ವರ್ಗಗಳ ಜನರಿಗೆ ನಮ್ಮ ಯೋಜನೆಯ ಲಾಭವನ್ನು ಮುಟ್ಟಿಸುವ ಸಲುವಾಗಿ ಅನೇಕ ಯೋಜನೆಗಳನ್ನು ನಾವು ಹಮ್ಮಿಕೊಂಡಿದ್ದೇವೆ. ಇದರ ಜೊತೆಗೆ ಈ ಯೋಜನೆಗಳ ಒಂದು ಪ್ರತಿಫಲ ಸಂಬಂಧಪಟ್ಟವರಿಗೆ ಮುಟ್ಟಿದೆಯೋ ಅಥವಾ ಇಲ್ಲವೋ ಎಂಬುದನ್ನು ಸಹ ವಿಮರ್ಶೆ ಮಾಡಿ ನೋಡುತ್ತಿದ್ದೇವೆ. ಇಂತಹ ಒಂದು ಕೆಲಸ ಜಿಲ್ಲಾ ಮಟ್ಟದಲ್ಲಿ ಹೆಚ್ಚಾಗಿ ಆಗಬೇಕಾಗುತ್ತದೆ. ರಾಜ್ಯಮಟ್ಟದಲ್ಲಿಯೂ ಆಗಬೇಕು. ಅದೇ ಸಮಯದಲ್ಲಿ ಜಿಲ್ಲಾ ಮಟ್ಟದಲ್ಲಿಯೂ ಆಗಬೇಕಾಗುತ್ತದೆ. ಈ ಕಾರಣದಿಂದಲೇ ಜಿಲ್ಲಾ ಪರಿಷತ್ ಮಸೂದೆಯನ್ನು ನಾವು ಪಾಸ್ ಮಾಡಿರುವುದು. ಜಿಲ್ಲಾ ಪರಿಷತ್‌ಗಳು ಅಸ್ತಿತ್ವದಲ್ಲಿ ಬಂದ ಮೇಲೆ ಅವುಗಳಿಗೆ ನಾವು ಹೆಚ್ಚಿನ ಅಧಿಕಾರ ಕೊಡುತ್ತಿದ್ದೇವೆ. ಇಂತಹ ಒಂದು ಕೆಲಸ ತಾಲ್ಲೂಕು ಮಟ್ಟದಲ್ಲಿಯೂ ಆಗಬೇಕು. ನಮ್ಮ ಯೋಜನೆಯ ಪ್ರಗತಿಯನ್ನು ವಿಮರ್ಶೆ ಮಾಡಲು ನಮಗೆ ಕಂಪ್ಯೂಟರ್‌ನ ಅವಶ್ಯಕತೆ ಇದೆ. ಅದಕ್ಕಾಗಿ ಅವುಗಳನ್ನು ನಾವು ಜೋಡಣೆ ಮಾಡುತ್ತಿದ್ದೇವೆ. ಈ ಯೋಜನಾ ಇಲಾಖೆಯ ಕೆಲಸಗಳನ್ನು ಕೇವಲ ತಾಂತ್ರಿಕ ತಜ್ಞರು ಮಾತ್ರ ನೋಡಿಕೊಳ್ಳುವುದರ ಜೊತೆಗೆ ಇದರಲ್ಲಿ ಶಾಸಕರ ಪಾತ್ರವೂ ಇರಬೇಕಾಗುತ್ತದೆ. ಇದರಲ್ಲಿ ಶ್ರೀ ಸಾಮಾನ್ಯನ ಪಾಲೂ ಸಹ ಇರಬೇಕಾಗುತ್ತದೆ. ಅದಕ್ಕಾಗಿ ನಾವು ಆ ದಿಶೆಯಲ್ಲಿ ಆಲೋಚನೆ ಮಾಡುತ್ತಿದ್ದೇವೆ. ಈ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ರಾಜ್ಯದ ಅಭಿವೃದ್ಧಿ ಕಾರ್ಯಗಳು ಮಂದಗತಿಯಲ್ಲಿ ನಡೆಯುತ್ತಿವೆ, ಎಂಬತಕ್ಕಂಥ ಮಾತು ಪದೇ ಪದೇ ಕೇಳಿಬರುತ್ತಿದೆ. ಕೆಲವರು ಈ ಕೆಲಸ ಸ್ಥಗಿತವಾಗಿದೆ ಎಂದು ಹೇಳಿದರೆ, ಮತ್ತೆ ಕೆಲವರು ಇನ್ನೂ

ಹೆಚ್ಚಿನ ಪ್ರಗತಿ ಆಗಬೇಕಾಗಿದೆ ಎಂಬ ಮಾತನ್ನು ಹೇಳುತ್ತಿದ್ದಾರೆ. ಇದಕ್ಕೆ ಈಗಾಗಲೇ ಸರ್ಕಾರದಿಂದ ಉತ್ತರ ಕೊಡಲಾಗಿದೆ. ಆದರೂ ಈಗ ಬಂದಿರುವಂತಹ ಟೀಕೆಗಳಿಗೆನಾನು ಉತ್ತರ ಕೊಡುವುದು ಅವಶ್ಯಕವಾಗಿದೆ. ನಾನು ಮೊದಲನೆಯದಾಗಿ ನೀರಾವರಿ ಬಗ್ಗೆ ಹೇಳುತ್ತೇನೆ.

ದಿ ಡಾನ್ ಆಫ್ ನ್ಯೂ ಎರಾ, ಇದರ ಪೇಜ್ ನಂ. ೩೯ರಲ್ಲಿ ಅಂಕ ಸಂಖ್ಯೆಗಳನ್ನು ಕೊಟ್ಟಿದ್ದೇವೆ. ೬ನೇ ಪಂಚವಾರ್ಷಿಕ ಯೋಜನೆಯ ಪ್ರಗತಿಯ ನೋಟವನ್ನೂ ಅಲ್ಲಿ ಕೊಟ್ಟಿದ್ದೇವೆ. ನೀರಾವರಿಗಾಗಿ ೧೯೮೦–೮೩ ಈ ಮೂರು ವರ್ಷಗಳಲ್ಲಿ ಖರ್ಚಾದಂತಹ ಹಣ ೩೬೦.೩೨ ಕೋಟಿ ರೂಪಾಯಿಗಳು. ಆಮೇಲೆ ಎರಡು ವರ್ಷಗಳಲ್ಲಿ ಅಂದರೆ ೧೯೮೩–೮೫ರಲ್ಲಿ ಹೊಸ ಸರ್ಕಾರ ಬಂದ ಮೇಲೆ ಖರ್ಚಾದಂತಹ ಹಣ ೩೪೫,೪೧ ಕೋಟಿ ರೂಪಾಯಿಗಳು. ೧೯೮೦–೮೩, ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷ ೧೨೦ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಈ ಎರಡು ವರ್ಷಗಳಲ್ಲಿ ಸರಾಸರಿ ಪ್ರತಿ ವರ್ಷ ಅಂದರೆ ೧೯೮೩–೮೫ರಲ್ಲಿ ೧೭೨–೭೦ ಕೋಟಿ ರೂಪಾಯಿಗಳು ಖರ್ಚಾಗಿವೆ. ಇದನ್ನು ಬರೀ ಎಕ್ಸ್‌ಪೆಂಡಿಚರ್ ದೃಷ್ಟಿಯಿಂದ ಮಾತ್ರ ನಾನು ಹೇಳುತ್ತಾ ಇಲ್ಲ. ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಆದಂಥದ್ದೂ ಕೂಡ ಅದರಲ್ಲಿದೆ, ೧೯೮೦–೮೩ ಈ ಮೂರು ವರ್ಷಗಳಲ್ಲಿ ೧.೪೭ ಲಕ್ಷ ಹೆಕ್ಟೇರ್ಸ್ ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಆಗಿದ್ದರೆ, ೧೯೮೩–೮೫ ಈ ಎರಡು ವರ್ಷಗಳಲ್ಲಿ ೧.೫೭ ಲಕ್ಷ ಹೆಕ್ಟೇರ್ಸ್ ಇರಿಗೇಷನ್ ಪೊಟೆನ್ಷಿಯಲ್ ಕ್ರಿಯೇಟ್ ಆಗಿದೆ. ಭೌತಿಕ ಹಾಗೂ ಆರ್ಥಿಕ ಎರಡು ಗುರಿಗಳಲ್ಲೂ ಅಷ್ಟು ಸಾಧನೆಯನ್ನು ನಾವು ಮಾಡಿದ್ದೇವೆ. ಇವೆರಡರಲ್ಲೂ ನೋಡುವುದಾದರೆ, ಹಿಂದಿನದಕ್ಕಿಂತ ಹೆಚ್ಚು ಪ್ರಗತಿ ಇರಿಗೇಷನ್‌ನಲ್ಲಿ ಆಗಿದೆ. ಅದೇ ರೀತಿ ವಿದ್ಯುಚ್ಛಕ್ತಿ. ನನಗೆ ಗೊತ್ತಿದೆ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ವಿಚಾರದಲ್ಲಿ ಬಹಳ ತೊಂದರೆಯಾಗಿದೆ, ಆ ತೊಂದರೆಗೆ ಕಾರಣಗಳೇನು ಎಂಬುದನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಇದೂ ಕೂಡ ಏನಾಗಿದೆ ಎಂಬುದನ್ನು ಪ್ರಗತಿಯ ದೃಷ್ಟಿಯಿಂದ ನೋಡುವುದಾದರೆ, ೧೯೮೦–೮೩ ಈ ಮೂರು ವರ್ಷಗಳಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಖರ್ಚಾದಂತಹ ಹಣ ೩೯೮.೧೨ ಕೋಟಿ ರೂಪಾಯಿಗಳು ಆದರೆ ಅದೇ ೧೯೮೩–೮೫ ಈ ಎರಡು ವರ್ಷಗಳಲ್ಲಿ ವಿದ್ಯುಚ್ಛಕ್ತಿಯ ಬಗ್ಗೆ ಖರ್ಚಾದಂತಹ ಹಣ ೩೪೯.೬೧ ಕೋಟಿ ರೂಪಾಯಿಗಳು. ಇದರ ಸರಾಸರಿ ಪ್ರತಿ ವರ್ಷ ಖರ್ಚಾದಂತಹದ್ದು ೧೯೮೦–೮೩ರಲ್ಲಿ ೧೩೨.೭೧ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ಈ ಎರಡು ವರ್ಷಗಳಲ್ಲಿ ಅಂದರೆ ೧೯೮೩–೮೫ರಲ್ಲಿ ಪ್ರತಿ ವರ್ಷ ಸರಾಸರಿ ೧೭೪.೮೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಆದರೂ ವಿದ್ಯುಚ್ಛಕ್ತಿ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೈಸನ್ಸ್ ಕೊಟ್ಟುಬಿಟ್ಟಿದ್ದಾರೆ. ಯಾವುದನ್ನು ಮಾಡಬಾರದೋ ಅದೆಲ್ಲಾ ಆಗಿ ಹೋಗಿದೆ. ವಿದ್ಯುಚ್ಛಕ್ತಿಯ ಬಗ್ಗೆ ಹೇಳುತ್ತಿದ್ದೇನೆ. ಹಿಂದಿನ ಸರ್ಕಾರ ಇದ್ದಂತಹ ಕಾಲದಲ್ಲಿ ಆ ಮೂರು ವರ್ಷಗಳಲ್ಲಿ ೩೯೮.೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ನಾವೂ ಈ ಎರಡು ವರ್ಷಗಳಲ್ಲಿ ೩೪೯.೬೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಂತರ ಉತ್ಪತ್ತಿಯಾಗಿರುವಂತಹ ವಿದ್ಯುಚ್ಛಕ್ತಿಯನ್ನೂ ಕೂಡ ಲೆಕ್ಕ ಹಾಕುವುದಾದರೆ, ೧೯೮೦–೮೩ ಈ ಮೂರು ವರ್ಷಗಳಲ್ಲಿ ೧೦೬೬ ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗಿದ್ದರೆ, ಈ ಈ ಎರಡು ವರ್ಷಗಳಲ್ಲಿ ಅಂದರೆ ೧೯೮೩–೮೫ರಲ್ಲಿ ೨೧೧೫ ಮೆಗಾವ್ಯಾಟ್ಸ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗಿದೆ. ಇದನ್ನೂ ಕೂಡ "ದಿ ಡಾನ್ ಆಫ್ ನ್ಯೂ ಎರಾ"ದ ಪೇಜ್ ನಂಬರ್ ೪೧ರಲ್ಲಿ ಇದರ ಪ್ರಗತಿಯನ್ನೂ ಕೂಡ ಕೊಟ್ಟಿದ್ದೇವೆ. ರೆವಿನ್ಯೂ ವಿಲೇಜಸ್ ಎಲೆಕ್ಟ್ರಿಫೈಡ್ ಮಾಡಿರುವಂತಹದ್ದು, ೧೯೮೦–೮೩ ಆ ಮೂರು ವರ್ಷಗಳಲ್ಲಿ ೭೦೫ ಹಳ್ಳಿಗಳಿಗಿದ್ದರೆ, ೧೯೮೩–೮೫ ಈ ಎರಡು ವರ್ಷಗಳಲ್ಲಿ ೧೧೭೬ ರೆವಿನ್ಯೂ ವಿಲೇಜಸ್‌ಗಳಲ್ಲಿ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದೇವೆ. ಅಡಿಷನಲ್ ಪಂಪುಸೆಟ್ಟುಗಳಿಗೆ ನಾವು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿದ್ದು ೧೯೮೦–೮೩ ಆ ಮೂರು ವರ್ಷಗಳಲ್ಲಿ ೨೩,೦೦೦ ಆಗಿದ್ದರೆ, ೧೯೮೩–೮೫ ಈ ಎರಡು ವರ್ಷಗಳಲ್ಲಿ ೪೨,೦೦೦ ಅಡಿಷನಲ್ ಪಂಪ್ ಸೆಟ್ಟುಗಳಿಗೆ ನಾವು ವಿದ್ಯುಚ್ಛಕ್ತಿ ಸರಬರಾಜನ್ನು ಮಾಡಿದ್ದೇವೆ ಅದೇ ರೀತಿ ಸೆಕ್ಟಾರ್‌ವೈಸ್ ಕೂಡ ನಮೂದು ಮಾಡಿದ್ದೇವೆ. ಕೈಗಾರಿಕಾ ಇಲಾಖೆಯ ವಿಚಾರದಲ್ಲೂ ಕೂಡ ಒಂದೆರಡು ವಿಷಯಗಳನ್ನು ಹೇಳಬೇಕಾಗುತ್ತದೆ. ನಂಬರ್ ಆಫ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಯೂನಿಟ್ಸ್ ಸೆಟ್ ಅಫ್ ೧೯೮೦–೮೩ ಆ ಮೂರು ವರ್ಷಗಳಲ್ಲಿ ೧೨,೨೬೮ ಆಗಿದ್ದರೆ, ೧೯೮೩–೮೫ ಈ ಎರಡು ವರ್ಷಗಳಲ್ಲಿ

೧೯,೧೮೪ ಎಸ್.ಎಸ್.ಐ. ಯೂನಿಟ್ಸ್‌ಗಳನ್ನು ಸೆಟ್ ಅಫ್ ಮಾಡಿದ್ದೇವೆ. ಇದನ್ನೂ ಕೂಡ ಪೇಜ್ ನಂಬರ್ ೫೯ರಲ್ಲಿ ಕೊಡಲಾಗಿದೆ. ಇದೇ ರೀತಿ ಇಂಡಸ್ಟ್ರಿಯಲ್ ಷೆಡ್ಸ್ ಕನ್ಸ್ಟ್ರಕ್ಷನ್ ಮಾಡಿರುವಂತಹದ್ದು ೧೯೮೦–೮೩ ಆ ಮೂರು ವರ್ಷಗಳಲ್ಲಿ ೭೨೦ ಆಗಿದ್ದರೆ, ೧೯೮೩–೮೫ ಈ ಎರಡು ವರ್ಷಗಳಲ್ಲಿ ೭೫೯ ಇಂಡಸ್ಟ್ರಿಯಲ್ ಷೆಡ್ಸ್‌ಗಳನ್ನು ಕನ್ಸ್ಟ್ರಕ್ಷನ್ ಮಾಡಿದ್ದೇವೆ. ಇದರಲ್ಲಿ ಈ ೬ ತಿಂಗಳ ವಿಚಾರವನ್ನು ಹೇಳುತ್ತಿಲ್ಲ. ಅದೇ ರೀತಿ ವ್ಯವಸಾಯ ಇಲಾಖೆ ಇದೆ. ರೇಷ್ಮೆ ಇಲಾಖೆ ಇದೆ. ಅದರ ವಿವರಗಳಿಗೆ ನಾನು ಹೋಗುತ್ತಿಲ್ಲ. ಇದನ್ನು ತಮಗೆ ಒದಗಿಸಿದ್ದೇವೆ. ಪ್ರಗತಿಯ ದೃಷ್ಟಿಯಿಂದ ಈ ಯೋಜನಾ ಇಲಾಖೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಕಳೆದ ಹಲವಾರು ವರ್ಷಗಳಿಂದ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಬೇರೆ ಬೇರೆ ರಾಜ್ಯದ ಎಲ್ಲಾ ಇಲಾಖೆಯವರು ಬಂದು ಅಧ್ಯಯನ ಮಾಡುತ್ತಿದ್ದಾರೆ. ರಾಷ್ಟ್ರದ ಯೋಜನಾ ಆಯೋಗದವರು ಈ ಇಲಾಖೆಯ ಕಾರ್ಯವನ್ನು ಮೆಚ್ಚಿಕೊಂಡು ನಮ್ಮ ಪ್ರಕಟಣೆಯನ್ನು ತರಿಸಿಕೊಂಡಿದ್ದಾರೆ. ಅಲ್ಲದೆ ಈ ಇಲಾಖೆ ತನ್ನದೆ ಆದ ರೀತಿಯಲ್ಲಿ ಬೇರೆ ಬೇರೆ ಸಂಸ್ಥೆಗಳೊಡನೆ ಸಂಪರ್ಕವನ್ನು ಬೆಳೆಸಿದೆ ಅದು ಅಗ್ರಿಕಲ್ಚರಲ್ ಯೂನಿವರ್ಸಿಟಿಯಾಗಿರಬಹುದು. ಅಥವಾ ಬೇರೆ ಬೇರೆ ಯೂನಿವರ್ಸಿಟಿಯಾಗಿರಬಹುದು. ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅನೇಕ ಸಂಸ್ಥೆಗಳು ಇವೆ. ಆ ದಿಕ್ಕಿನಲ್ಲಿ ಚಿಂತನೆ ಮಾಡತಕ್ಕ ಸಂಸ್ಥೆಗಳ ಜೊತೆ ಸಹಕಾರದಿಂದ ತಮ್ಮ ಕಾರ್ಯಕ್ರಮವನ್ನು ಮಾಡತಕ್ಕಂತಹ ಒಂದು ಪ್ರಯತ್ನವನ್ನು ಇದು ಮಾಡಿದೆ. ಬರುವ ವರ್ಷಗಳಲ್ಲಿ ನಾವು ಪ್ರೀ ಬಜೆಟ್ ಸ್ಕ್ರೂಟಿನಿ ಮಾಡಬೇಕೆಂದಿದ್ದೇವೆ. ಎಲ್ಲಾ ಇಲಾಖೆಯ ಯೋಜನಾ ಕಾರ್ಯಕ್ರಮಗಳ ಬಗ್ಗೆ ಅವುಗಳು ಬಜೆಟ್‌ನಲ್ಲಿ ಬರುವುದಕ್ಕೆ ಪೂರ್ವದಲ್ಲಿ ಅವುಗಳ ಬಗ್ಗೆ ಸ್ಕ್ರೂಟಿನಿ ಮಾಡುವುದು ಬಹಳ ಅವಶ್ಯವಾದುದು. ಕೆಲವು ಇಲಾಖೆಯಲ್ಲಿ ಪ್ರೀ-ಬಜೆಟ್ ಸ್ಕ್ರೂಟಿನಿ ಮಾಡುವಂತದ್ದು ಮಾನ್ಯ ಮೊಯ್ಲಿಯವರ ಕಾಲದಲ್ಲೇ ಪ್ರಾರಂಭವಾಗಿದೆ. ಆದರೆ ಇದನ್ನು ಎಲ್ಲ ಇಲಾಖೆಗಳ ಯೋಜನೆಯ ಬಗ್ಗೆ ಸ್ಕ್ರೂಟಿನಿ ಮಾಡತಕ್ಕ ನಿಯಮವನ್ನು ತೆಗೆದುಕೊಂಡಿದ್ದೇವೆ. ನಾನೇ ಪಿ.ಎ.ಸಿ.ಯ ಛೇರ್ಮನ್ ಆಗಿದ್ದಾಗ ಒಂದು ವರದಿಯನ್ನು ಸಲ್ಲಿಸಿದ್ದೆ. ಪ್ರೀ-ಬಜೆಟ್ ಸ್ಕ್ರೂಟನಿ ಮಾಡುವಂತಹದ್ದು ಬಹಳ ಅವಶ್ಯಕ. ಕಾರಣ ಇಷ್ಟೆ, ಅನೇಕ ಸದಸ್ಯರಿಗೆ ಅನುಭವ ಇದೆ. ಇರತಕ್ಕಂತಹ ಕೆಲವು ತೊಂದರೆಗಳನ್ನು ಸರಿಪಡಿಸುತ್ತೇವೆ. ಸರ್ಕಾರ ಯಾವುದೇ ಇರಲಿ ಮಾಡುತ್ತಾ ಬಂದಿದೆ. ನಮ್ಮ ಸರ್ಕಾರ ಅಷ್ಟೆ ಮಾಡಿದೆ ಅಂತ ಅಲ್ಲ. ಮಾಡಬೇಕೆಂಬ ಆಸೆ ಇರುತ್ತದೆ. ಹಣಕಾಸು ಮುಂದೆ ಬರಬಹುದೆಂದು ಆಸೆ ಇರುತ್ತದೆ. ಇದರ ಜೊತೆಗೆ ಒತ್ತಡ ಕೂಡ ಇರುತ್ತದೆ. ಆ ಒಂದು ಕಾರ್ಯಕ್ರಮ ಬಜೆಟ್‌ನಲ್ಲಿ ಬಂದರೂ ಯಾವುದೋ ಕಾರಣದಿಂದ ಆ ವರ್ಷ ಅದು ಆಗುವುದಿಲ್ಲ. ಹಿಂದೆ ಅನೇಕ ಸಲ ಆಗಿದ್ದು ಇದೆ. ನಾಮಿನಲ್ ಪ್ರಾವಿಜನ್ ಮಾಡಿರುತ್ತಾರೆ. ಒಂದು ವೇಳೆ ಪ್ರಾವಿಜನ್ ಮಾಡಿದ್ದರೂ ಕೂಡ ಅದು ಖರ್ಚಾಗದೆ ಇರತಕ್ಕ ಅನೇಕ ವಿಚಾರಗಳು ನಮಗೂ ಗೊತ್ತಿವೆ ನಿಮಗೂ ಗೊತ್ತಿದೆ. ಅದು ಲ್ಯಾಪ್ಸ್ ಆಗುತ್ತದೆ. ಬೇರೆ ಬೇರೆ ಕಾರಣಗಳಿಂದ. ಅದಕ್ಕಾಗಿ ನಾವು ಏನೊಂದು ನಿರ್ಣಯವನ್ನು ತೆಗೆದುಕೊಂಡಿದ್ದೇವೆಂದರೆ, ಯಾವುದೇ ಒಂದು ಕಾರ್ಯಕ್ರಮ ಬಜೆಟ್‌ನಲ್ಲಿ ಸೇರಿಸಬೇಕಾದರೆ ಆ ಸ್ಕೀಮಿನ ಅಂದಾಜಿನ ಮೂರನೆ ಒಂದು ಭಾಗದಷ್ಟು ಹಣವನ್ನು ಬಜೆಟ್‌ನಲ್ಲಿ ಒದಗಿಸಬೇಕು. ಆ ಒಂದು ಕಾರ್ಯಕ್ರಮ ಮುಂದಿನ ಮೂರು ವರ್ಷಗಳಲ್ಲಿ ಮುಕ್ತಾಯವಾಗಬೇಕು. ಇದರ ಜೊತೆಗೆ ಪ್ರೀ ಬಜೆಟ್ ಸ್ಕ್ರೂಟನಿ ಮಾಡಿ, ಒಂದು ಸಾರಿ ಬಜೆಟ್‌ನಲ್ಲಿ ಬಂದ ಮೇಲೆ ಆ ಇಲಾಖೆಯವರು ಯೋಜನಾ ಇಲಾಖೆಗೆ ಕಳುಹಿಸಿ, ಅಲ್ಲಿಂದ ಹಣಕಾಸಿನ ಇಲಾಖೆಗೆ ಕಳುಹಿಸಿ, ಅಲ್ಲಿ ಅವರು ಅದನ್ನು ಮಂಜೂರು ಮಾಡಿ, ಹಣವನ್ನು ಬಿಡುಗಡೆ ಮಾಡುವುದರಲ್ಲಿ ೬ ತಿಂಗಳು ಮುಗಿದು ಹೋಗಿರುತ್ತದೆ. ಅನೇಕ ಸಂದರ್ಭಗಳಲ್ಲಿ ಸೆಪ್ಟೆಂಬರ್ ಹಾಗೂ ಡಿಸೆಂಬರ್ ತಿಂಗಳುಗಳಲ್ಲಿ ಹಣವನ್ನು ಬಿಡುಗಡೆ ಮಾಡುತ್ತಾರೆ. ಇದು ಆಗಕೂಡದು. ಅದಕ್ಕಾಗಿ ಪ್ರೀ ಬಜೆಟ್ ಸ್ಕ್ರೂಟನಿ ಎಂಬುದನ್ನು ಪ್ರಾರಂಭ ಮಾಡಿದ್ದೇವೆ. ಮೊದಲೇ ಈ ಯೋಜನೆಗಳ ಅಂದಾಜು ಏನಿದೆ ಅದರ ಬಗ್ಗೆ ನಿಷ್ಕರ್ಷೆ ಆಗಬೇಕು, ನಂತರ ಅದು ಯೋಜನೆಯಲ್ಲಿ ಬರಬೇಕು. ನಂತರ ಬಜೆಟ್‌ನಲ್ಲಿ ಬರಬೇಕು. ಒಂದು ಸಾರಿ ಅದು ಬಜೆಟ್‌ನಲ್ಲಿ ಬಂದ ಮೇಲೆ ಆದಷ್ಟು ಬೇಗ ಪ್ರತಿಯೊಂದು ಇಲಾಖೆಯವರೂ ತಮ್ಮ ತಮ್ಮ ಕಾರ್ಯಕ್ರಮವನ್ನು ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಇದನ್ನು ಮುಂದಿನ ವರ್ಷದಿಂದ ಪ್ರಾರಂಭ ಮಾಡುತ್ತಿದ್ದೇವೆ. ಪ್ಲಾನಿಂಗ್ ಫ್ರಂ ಬಿಲೋ ಇದು ಹೋಗುವುದಕ್ಕಿಂತ ಮೊದಲೇ ಇನ್ನೊಂದು ನಿರ್ಣಯವನ್ನು ನಾವು ಮಾಡಿದ್ದೇವೆ.

ಒಂದು ಕೋಟಿ ರೂಪಾಯಿ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಯೋಜನಾ ಮಂತ್ರಿಗಳು ಪರಿಶೀಲಿಸುವ ಉದ್ದೇಶ ಹೊಂದಿರುವ ಕಾರಣ ವಿಳಂಬವನ್ನು ತಡೆಯಲು ಪಿ. ಇ. ಆರ್. ಟಿ. ವಿಧಾನವನ್ನು ಎಲ್ಲಾ ದೊಡ್ಡ ಮತ್ತು ಮಧ್ಯಮ ಕಾಮಗಾರಿಗಳಿಗೂ ಅನ್ವಯಿಸಲಾಗುವುದು. ಪ್ರೋಗ್ರಾಂ ಎವಾಲ್ಯುಯೇಷನ್ ರಿವ್ಯೂ ಟೆಕ್ನಿಕ್ ಪ್ರಕಾರ ಪ್ರತಿ ತಿಂಗಳು ಪ್ರತಿಯೊಂದು ಯೋಜನೆಯನ್ನು ರಿವ್ಯೂ ಮಾಡುತ್ತಾ ಹೋಗಬೇಕು. ಆಗ ಅದು ಯಾವ ಹಂತದಲ್ಲಿದೆ ಎಷ್ಟು ಹಣ ಖರ್ಚಾಗಿದೆ, ಮುಂದೆ ಏನು ಮಾಡಬೇಕಾಗಿದೆ ಅದಕ್ಕೆ ಮೆಟೀರಿಯಲ್ಸ್ ಏನು ಬೇಕಾಗಿದೆ, ಅದಕ್ಕೆ ಆರ್ಡರ್ ಕೊಟ್ಟಿದ್ದಾರೋ ಇಲ್ಲವೋ, ಸಮಯಕ್ಕೆ ಸರಿಯಾಗಿ ಸರಬರಾಜು ಆಗುತ್ತದೋ ಇಲ್ಲವೋ ಎಂಬುದನ್ನು ರಿವ್ಯೂ ಮಾಡುವುದರ ಬಗ್ಗೆ ಆಲೋಚಿಸುತ್ತಿದ್ದೇವೆ. ಮುಂದಿನ ವರ್ಷದಿಂದ ಇದನ್ನು ಪ್ರಾರಂಭಿಸುತ್ತೇವೆ. ಪ್ಲಾನಿಂಗ್ ಫ್ರಂ ಬಿಲೋ ಅಂದರೆ ಜಿಲ್ಲಾ ಮಟ್ಟದಲ್ಲಿ ಯೋಜನಾ ಇಲಾಖೆಯನ್ನು ಬಲಗೊಳಿಸತಕ್ಕದ್ದು ಮತ್ತು ಜಿಲ್ಲಾ ಮಟ್ಟದಲ್ಲಿ ಯೋಜನೆಗಳ ಸಿದ್ಧತೆ ಮಾಡುವ ಬಗ್ಗೆ ಮುಂದಿನ ವರ್ಷ ಪ್ರಯತ್ನಿಸುತ್ತೇವೆ. ಅಷ್ಟರಲ್ಲಿ ಜಿಲ್ಲಾ ಪರಿಷತ್ತಿನ ಮಸೂದೆ ಪಾಸ್ ಆಗಿ ಜಿಲ್ಲಾ ಪರಿಷತ್ತು ಪ್ರಾರಂಭವಾಗಬಹುದು. ಯೋಜನಾ ಇಲಾಖೆ ಮತ್ತು ಜಿಲ್ಲಾ ಪರಿಷತ್ತಿನ ನಡುವೆ ಹೊಂದಾಣಿಕೆ ಮಾಡುವುದರ ಬಗ್ಗೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ರಿಮೂವಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಕೆಲವರು ಆತಂಕ ವ್ಯಕ್ತ ಮಾಡುತ್ತಿದ್ದಾರೆ. ಹೈದರಾಬಾದ್ ಹಾಗೂ ಬೇರೆ ಬೇರೆ ಪ್ರದೇಶದ ಗೆಳೆಯರು ಈಗ ಒದಗಿಸಿರತಕ್ಕ ಹಣ ಹಿಂದುಳಿದ ಪ್ರದೇಶಗಳಿಗೆ ಸಾಲದಾಗಿದೆ. ಕೊಡಬೇಕಾದುದನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಕೆಲವರು ಕಾವೇರಿ ಬೇಸಿನ್‌ಗೆ ಹೆಚ್ಚಾಗಿದೆ, ಕೃಷ್ಣಾ ಬೇಸಿನ್‌ಗೆ ಕಡಿಮೆಯಾಗಿದೆ ಎಂಬ ವಾದವನ್ನು ಮಾಡಿದ್ದಾರೆ. ಈ ವಾದ ಏನಿದೆ ಇದು ಪ್ರತಿಯೊಬ್ಬರೂ ಆ ಭಾಗದ ಪ್ರಗತಿಯ ದೃಷ್ಟಿಯಿಂದ ಒತ್ತಡ ಹೇರುತ್ತಿದ್ದಾರೆ ಮತ್ತು ಟೀಕೆ ಕೂಡ ಮಾಡುತ್ತಿದ್ದಾರೆ. ಹಣವನ್ನು ನಾವು ಎಲ್ಲಾ ಭಾಗಗಳಿಗೆ ಸರಿಯಾಗಿ ಮಾಡಿದ್ದೇವೆ. ಮತ್ತು ಅದನ್ನು ರಿವ್ಯೂ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಳ್ಳುತ್ತೇವೆ. Policy formulation to achieve the land objectives ಈ ಬಗ್ಗೆ ಮೊದಲೇ ಹೇಳಿದಂತೆ ಯೋಜನೆ ಗುರಿ ಸಾಧನೆಯಾಗಿದೆಯೋ ಇಲ್ಲವೇ ಎಂಬುದನ್ನು ನೋಡುವುದಕ್ಕೆ ಇದನ್ನು ಕೂಡ ಪ್ರಾರಂಭಿಸುತ್ತೇವೆ. ಇಂಪ್ರೂವ್‌ಮೆಂಟ್ ಡಾಟಾ ಅಂದರೆ ಅಂಕಿ ಸಂಖ್ಯೆಗಳನ್ನು ಕಲೆ ಹಾಕುವುದು ಏನಿದೆ ಅದು ಶಾಸ್ತ್ರೀಯವಾಗಿ ಆಗಬೇಕೆಂಬ ದೃಷ್ಟಿಯಿಂದ ಈ ಇಲಾಖೆಯನ್ನು ಬಲಪಡಿಸುವುದರ ಜೊತೆಗೆ ತಜ್ಞರನ್ನು ಸೇರಿಸಿಕೊಳ್ಳತಕ್ಕ ಪ್ರಯತ್ನವನ್ನು ಮಾಡುತ್ತೇವೆ. ಜಿಲ್ಲಾ ಮಟ್ಟದಲ್ಲಿ ಕಂಪ್ಯೂಟರೈಸೇಷನ್ ಮಾಡುತ್ತೇವೆ. ಇದು ಬಹಳ ಅವಶ್ಯಕವಿದೆ. ಇವತ್ತು ಅನೇಕ ಸಲ ನಾವು ನಮ್ಮ ಜಿಲ್ಲಾ ಮಟ್ಟದಲ್ಲಿ ನಡೆಯುತಕ್ಕ ಸಭೆಗಳಲ್ಲಿ ಅಂದರೆ 20 ಅಂಶಗಳ ಕಾರ್ಯಕ್ರಮ ಇರಬಹುದು, ಅಭಿವೃದ್ಧಿ ಕಾರ್ಯಕ್ರಮವನ್ನು ವನ್ನು ಪರಿಶೀಲನೆ ಮಾಡತಕ್ಕ ವಿಚಾರ ಇರಬಹುದು, ಬೇರೆ ಬೇರೆ, ಅಭಿವೃದ್ಧಿ ಕಾರ್ಯಗಳನ್ನು ನೋಡುವಾಗ ಅಂಕಿಸಂಖ್ಯೆಗಳು ಸರಿಯಾಗಿ ಸಿಗುವುದಿಲ್ಲ. ಅವುಗಳ ಕ್ರೋಢೀಕರಣ ವ್ಯವಸ್ಥೆ ಇಲ್ಲ. ಸ್ಕೇರ್ಸಿಟಿ ರಿಲೀಫ್ ವರ್ಕ್ಸ್‌ನಲ್ಲಿ ರಸ್ತೆ ತೆಗೆದುಕೊಂಡಿರುತ್ತಾರೆ. ಹಿಂದೆ ಅದೇ ರಸ್ತೆಗಳ ಮೇಲೆ ಹಣ ಖರ್ಚು ಮಾಡಿರುತ್ತಾರೆ. ಲೋಕೋಪಯೋಗಿ ಇಲಾಖೆಯು ಆಯವ್ಯಯದಲ್ಲಿ ಏನು ಹಣ ಒದಗಿಸಿರುತ್ತಾರೆ ಅದೇ ರಸ್ತೆಯನ್ನು ಸ್ಕೇರ್ಸಿಟಿ ಲೆಕ್ಕದಲ್ಲಿ ತೆಗೆದುಕೊಂಡು ಕೆಲಸ ಮಾಡುತ್ತಾರೆ. ಇಂಥ ಅನೇಕ ಉದಾಹರಣೆಗಳು ಬಂದಿವೆ. ಹಣ ಖರ್ಚು ಮಾಡುವುದರ ಮೇಲೆ ಪುನಃ ಮಾಡತಕ್ಕದ್ದು ಅಂದರೆ ರಿಲೀಫ್ ಮತ್ತು ಬಜೆಟ್‌ನಲ್ಲಿ ಮಾಡತಕ್ಕ ಪ್ರಕರಣಗಳು ಕಂಡು ಬಂದಿವೆ. ಅದೇ ರೀತಿ ಐ. ಆರ್. ಡಿ. ಪಿ. ಮತ್ತಿತರ ಸಂದರ್ಭಗಳಲ್ಲಿ ಅಂಕಿ ಸಂಖ್ಯೆಗಳು ಕ್ರೋಢೀಕೃತವಾಗಿ ಸಿಕ್ಕುತ್ತಿಲ್ಲ. ಯಾವುದೋ ಹಳ್ಳಿಗೆ ಹೋಗಿ ಅಲ್ಲಿ ಫಲಾನುಭವಿ ಯಾರಿದ್ದಾನೆ, ಆ ಗ್ರಾಮಕ್ಕೆ ಎಷ್ಟು ಎಮ್ಮೆಗಳನ್ನು ಕೊಟ್ಟಿದ್ದಾರೆ, ಎಷ್ಟು ಜನರಿಗೆ ಸಹಾಯ ಮಾಡಿದ್ದಾರೆಂಬುದನ್ನು ಪರಿಶೀಲಿಸುವುದಕ್ಕೆ ಅಂಕಿ ಸಂಖ್ಯೆಗಳು ಸಿಗುವುದಿಲ್ಲ. ಅದೇ ಕಂಪ್ಯೂಟರೈಸೇಷನ್ ಇದ್ದರೆ ಅಧಿಕಾರಿಗಳು, ಮಂತ್ರಿಗಳು, ಶಾಸಕರು ಯಾರು ಬೇಕಾದರೂ ನೋಡಬಹುದು. ಆದ್ದರಿಂದ ಇದು ಬಹಳ ಅವಶ್ಯಕವೆಂದು ಭಾವಿಸಿ ಜಿಲ್ಲಾ ಮಟ್ಟದಲ್ಲಿ ಇದನ್ನು ತರುತ್ತಿದ್ದೇವೆ. ಇದರ ಜೊತೆಗೆ ಯೋಜನಾ ಇಲಾಖೆ ಅನೇಕ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿದೆ. ಯೋಜನಾ ಆಯೋಗ ಯಾವುದನ್ನು ಮಾಡಿದೆ ಅಂಥದ್ದನ್ನು ಬಿಟ್ಟು ಉಳಿದಂದನ್ನು ಬಜೆಟ್ಟಿನಲ್ಲಿ ತಂದಿದ್ದೇವೆ. ಅದಕ್ಕಾಗಿ ಸಾಂಕೇತಿಕವಾಗಿ ಹಣ ಕೊಟ್ಟಿದ್ದೇವೆ. ನಮ್ಮ ಪ್ರಯತ್ನ ಸಾಧ್ಯವಾದಷ್ಟು ಕೇಂದ್ರ ಸರ್ಕಾರದಿಂದ ಹಣ ಪಡೆಯತಕ್ಕದ್ದು, ಇಲ್ಲದಿದ್ದರೆ ವಿಶ್ವಬ್ಯಾಂಕಿನಿಂದ ಹೊರ ರಾಷ್ಟ್ರದಿಂದ ಪಡೆಯತಕ್ಕ ಪ್ರಯತ್ನ ಕೂಡ ಮಾಡುತ್ತಿದ್ದೇವೆ. ಈಗಾಗಲೇ ಹೇಳಿದಂತೆ ಎರಡು ಸಾವಿರ ವರ್ಷ

ದವರೆಗೆ ಒಂದು ಕಾಂಪ್ರಹೆನ್‌ಸೀವ್ ಪ್ಲಾನ್ ಅನ್ನು ರಾಜ್ಯದ ಅವಶ್ಯಕತೆಗಳನ್ನು ಆಧರಿಸಿ ಮಾಡತಕ್ಕ ಕಾರ್ಯವನ್ನು ಪ್ರಾರಂಭಿಸಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತಮಗೆ ಒದಗಿಸಿಕೊಡುತ್ತೇವೆ. ಈ ರೀತಿ ಯೋಜನಾ ಇಲಾಖೆ ತನ್ನದೇ ಆದ ರೀತಿಯಲ್ಲಿ ರಾಜ್ಯದಲ್ಲಿ ಕೆಲಸ ಮಾಡಿದೆ. ಇನ್ನೂ ಒಂದೆರಡು ಟೀಕೆ ಬಂದವು. ಅಂಕಿ ಸಂಖ್ಯೆಗಳನ್ನು ಒದಗಿಸುವುದರ ಬಗ್ಗೆ ಮತ್ತು ಅನ್ಯುಯಲ್ ರಿಪೋರ್ಟ್‌ನಲ್ಲಿ ಅಂಕಿ ಸಂಖ್ಯೆಗಳು ಇಲ್ಲವೆಂದು ಟೀಕಿಸಿದರು. ಇಕನಾಮಿಕ್ ಸರ್ವೆಯಲ್ಲಿ ಬೇರೆ ಬೇರೆ ಕಡೆಯಲ್ಲಿ ಅದನ್ನು ಕೊಟ್ಟಿರುವುದರಿಂದ ಅನ್ಯುಯಲ್ ರಿಪೋರ್ಟಿನಲ್ಲಿ ಅಂಕಿ ಸಂಖ್ಯೆಗಳನ್ನು ಕೊಟ್ಟಿಲ್ಲ, ಯೋಜನಾ ಇಲಾಖೆ ಬಗ್ಗೆ ಇಷ್ಟು ಮಾತ್ರ ಹೇಳಿ ಯೋಜನೆ ಸರಿಯಾಗಿ ಆಗದೇ ಹೋದರೆ ಅಭಿವೃದ್ಧಿ ಕಾರ್ಯ ಸರಿಯಾದ ದಿಕ್ಕಿನಲ್ಲಿ ಹೋಗುವುದಿಲ್ಲ. ನಾನು ಮಾತನ್ನು ಮುಗಿಸುವುದಕ್ಕೆ ಮೊದಲು ಒಂದು ಮಾತು ಹೇಳಬಯಸುತ್ತೇನೆ ನಮ್ಮ ರಾಷ್ಟ್ರ ಕೃಷಿ ಪ್ರಧಾನ ರಾಷ್ಟ್ರವಾದರೂ ಕೂಡ ಪ್ರಥಮ ನಾಲ್ಕು ಯೋಜನೆಗಳಲ್ಲಿ ಕೃಷಿಗೆ ಪ್ರಥಮ ಪ್ರಾಶಸ್ತ್ಯ ಕೊಟ್ಟಿಲ್ಲ. ಆದ್ದರಿಂದ. ಈಗ ನಾವು ಕೆಲವು ಕಾರ್ಯಮಗಳನ್ನು ಹಾಕಿಕೊಂಡು ಮಾಡುತ್ತಿದ್ದೇವೆ. ಯೋಜನೆ ಮಾಡುವಾಗ ಸಮಗ್ರವಾಗಿ ನಮ್ಮ ಸಂಪನ್ಮೂಲಗಳನ್ನು ಮತ್ತು ಅವಶ್ಯಕತೆಗಳನ್ನು ಗಣನೆಗೆ ತೆಗೆದುಕೊಂಡು ಮುಂದಾಲೋಚನೆಯಿಂದ ಮಾಡಿದರೆ ಯೋಜನೆಗಳು ಫಲಪ್ರದವಾಗುತ್ತವೆಂದು ಹೇಳುತ್ತೇನೆ. Priorities are to be fixed in the proper perspective Planning process must start in that way. ಆ ದೃಷ್ಟಿಯಿಂದ ಎರಡು ವರ್ಷಗಳ ಅವಧಿಯಲ್ಲಿ ಈ ಇಲಾಖೆ ಕಾರ್ಯವನ್ನು ಮಾಡಿದೆ, ಮುಂದೆ ಇನ್ನೂ ಮಾಡುವ ಆಲೋಚನೆಯನ್ನು ಇಟ್ಟುಕೊಂಡಿದೆ. ಕಂದಾಯ ಇಲಾಖೆಯ ಬಗ್ಗೆ ಜನ ಏನು ಹೇಳುತ್ತಾರೆಂದರೆ, Revenue department is the mother of all departments. ನನ್ನ ದೃಷ್ಟಿಯಲ್ಲಿ Revenue department is the grand grand old motherr of all departments ಕಂದಾಯ ಇಲಾಖೆಯಲ್ಲಿರತಕ್ಕ ಕಛೇರಿಗಳಿಗೆ ಹೋಗಿ ನೋಡಿದರೆ ಅಲ್ಲಿರತಕ್ಕ ಟೇಬಲ್, ಖುರ್ಚಿಗಳೆಲ್ಲ ಮುತ್ತಜ್ಜನ ಹಾಗೆ ಆಗಿವೆ. ತಹಶೀಲ್ದಾರರ ಕಛೇರಿಗೆ ಹೋದರೆ ಅಲ್ಲಿನ ಪರಿಸ್ಥಿತಿ ಗೊತ್ತಾಗುತ್ತದೆ. ಇದು ನಮ್ಮ ನಿಮ್ಮ ಅನುಭವಕ್ಕೆ ಬಂದಿದೆ ತಹಶೀಲ್ದಾರರಾಗಲಿ, ಜಿಲ್ಲಾಧಿಕಾರಿಗಳಾಗಲಿ, ಅಸಿಸ್ಟೆಂಟ್ ಕಮೀಷನರಾಗಲಿ ಕೆಲಸ ಮಾಡಬೇಕಾದರೆ ಎಲ್ಲದಕ್ಕೂ ಕಂದಾಯ ಇಲಾಖೆ ಬೇಕು. ೨೦ ಅಂಶಗಳ ಕಾರ್ಯಕ್ರಮ ಇರಲಿ, ಐ. ಆರ್. ಡಿ.ಪಿ. ಇರಲಿ, ರೆಕಾರ್ಡ್ ಕೊಡತಕ್ಕದು ಇರಲಿ, ತಾಳಿ ಹಂಚುವುದು ಇರಲಿ, ಹೀಗೆ ಯಾವುದೇ ಕಾರ್ಯಕ್ರಮವನ್ನಾದರೂ ತಹಶೀಲ್ದಾರರು, ಅಸಿಸ್ಟೆಂಟ್ ಕಮೀಷನರ್, ಜಿಲ್ಲಾಧಿಕಾರಿಗಳು ನೋಡಬೇಕು. Deputy Commissioner is called the Leader of the District.

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ಮಾತನ್ನು ಪಕ್ಕದವರೇ ಒಪ್ಪುತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಕ್ಕದವರೂ ಒಪ್ಪಬೇಕಾಗುತ್ತದೆ. ಅಭಿಪ್ರಾಯ ಭಿನ್ನ ಇರಬಹುದು. ಇಲಾಖೆಯಲ್ಲಿರತಕ್ಕ ಕೆಲಸ ನಮಗೆ ನಿಮಗೆ ಗೊತ್ತು. ಅನೇಕ ಸದಸ್ಯರು ಹೇಳಿದಂತೆ ಈ ಇಲಾಖೆ ಶ್ರೀ ಸಾಮಾನ್ಯನ ಇಲಾಖೆ ಎಂದರೆ ಸಲ್ಲುತ್ತದೆ. ಪ್ರತಿಯೊಬ್ಬರೂ ಹೋಗಬೇಕಾಗುತ್ತದೆ. ಪ್ರತಿಯೊಬ್ಬರೂ ಸಂಪರ್ಕಕ್ಕೆ ಬರಬೇಕಾಗುತ್ತದೆ. ಕಂದಾಯ ಇಲಾಖೆ ಎಲ್ಲಿಯವರೆಗೆ ಚೆನ್ನಾಗಿ ಕೆಲಸ ಮಾಡುವುದಿಲ್ಲವೋ ಅಲ್ಲಿಯವರೆಗೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಇದು ಸ್ಪಷ್ಟವಾದ ಮಾತು. ಆರ್‌ಟಿಸಿಡಿ ಕೊಡತಕ್ಕಂಥಾದ್ದು ಇರಲಿ. ಇನ್‌ಕಂಟ್ಯಾಕ್ಸ್ ಕೊಡತಕ್ಕಂಥಾದ್ದು ಇರಲಿ, ಅದು ಯಾವುದೇ ಕೆಲಸವಿರಲಿ ಇವತ್ತು ಶ್ರೀಸಾಮಾನ್ಯನಿಗೆ ಮುಟ್ಟತಕ್ಕಂಥ ಯೋಜನೆಯ ಲಾಭ, ಸರ್ಕಾರದ ಕಾರ್ಯಕ್ರಮಗಳ ಲಾಭ ಈ ಇಲಾಖೆಯ ಮುಖಾಂತರ ಹೆಚ್ಚಾಗಿ ಆಗುತ್ತದೆ. ಹೆಚ್ಚಿಗೆ ಸಂಪರ್ಕ ಇಲ್ಲಿ ಆಗುವುದರಿಂದ ಇಲ್ಲಿ ನಡೆಯತಕ್ಕಂಥ ದೋಷಗಳೂ ಹೆಚ್ಚಿಗೇ ಕಾಣುತ್ತವೆ ದೋಷಗಳು ನಿಲ್ ಎಂದು ನಾನು ಹೇಳುವುದಿಲ್ಲ. ಈ ಇಲಾಖೆ ಚುರುಕುಗೊಳ್ಳಬೇಕಾಗುತ್ತದೆ. ನಿಗದಿತ ಅವಧಿಯಲ್ಲಿ ಸಾರ್ವಜನಿಕರ ಅರ್ಜಿಗಳನ್ನು ವಿಲೇವಾರಿ ಮಾಡಬೇಕಾಗುತ್ತದೆ. ಸೌಜನ್ಯಪೂರ್ವಕವಾಗಿ ನಡೆಯಬೇಕಾಗುತ್ತದೆ. ಕಟ್ಟುನಿಟ್ಟಾಗಿ ಕೆಲಸ ಮಾಡದೇಹೋದರೆ ಶ್ರೀಸಾಮಾನ್ಯನಿಗೆ ಬಹಳ ತೊಂದರೆಯಾಗುತ್ತದೆ. ಈ ವಿಚಾರದಲ್ಲಿ ಮಾತನಾಡುವಾಗ ಮುಖ್ಯವಾಗಿ ಈ ಲ್ಯಾಂಡ್ ರಿಫಾರ್ಮ್ಸ್ ವಿಚಾರವಾಗಿ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಶ್ರೀಮಾನ್ ಖರ್ಗೆಯವರು, ಬಸವಲಿಂಗಪ್ಪನವರು ಈ ವಿಚಾರ ಹೇಳಿ ಟ್ರಿಬ್ಯುನಲ್‌ಗಳ ಕೆಲಸ ಹೆಚ್ಚಿನ ರೀತಿಯಲ್ಲಿ ಆಗಿಲ್ಲವೆಂದು ಹೇಳಿದ್ದಾರೆ, ಸರ್ಪ್ಲಸ್ ಲ್ಯಾಂಡ್ ಹಂಚುವ ವಿಚಾರದಲ್ಲಿ ಕೂಡ ಕೆಲವು ಟೀಕೆಗಳನ್ನು ಮಾಡಿದ್ದಾರೆ.

ಮೊದಲನೆಯದಾಗಿ ಈ ಕಾನೂನು ಜಾರಿಗೆ ಬಂದಿದ್ದು ೧೯೭೪ರಲ್ಲಿ ಬಂದ ಮೇಲೆ ಟ್ರಿಬ್ಯುನಲ್‌ಗಳ ರಚನೆಯಾಗಿ ಹೆಚ್ಚಿನ ಕಾರ್ಯ ೧೯೭೫ರ ಅಂತ್ಯದಲ್ಲಿ ಮುಂಕ್ತಾಯ ಹಂತದಲ್ಲಿತ್ತು. ಹೆಚ್ಚುವರಿ ಭೂಮಿಯನ್ನು ಹಂಚಿಲ್ಲ ಎನ್ನುವ ಮಾತನ್ನು ಬಹಳ ಕಡಿಮೆ ಹಂತದಲ್ಲಿ ಟೀಕೆ ಮಾಡಿದರು. ನಮ್ಮ ರಾಜ್ಯದಲ್ಲಿ ಒಟ್ಟು ಹೆಚ್ಚುವರಿ ಭೂಮಿ ಇದ್ದುದು ೨ ಲಕ್ಷ ೯೬ ಸಾವಿರದ ೪೪ ಎಕರೆ ಮಾತ್ರ. ದಿನಾಂಕ ೩೧-೩-೧೯೮೩ರ ಅಂತ್ಯದ ವೇಳೆಗೆ ೧,೦೪.೧೧೩ ಎಕರೆ ಹಂಚಿಕೆಯಾಗಿತ್ತು. ಆ ಮೇಲೆ ಕೋರ್ಟಿನಲ್ಲಿ ಸ್ಟೇ ಆಗಿದ್ದಾರೆ. ಕೋರ್ಟಿಗೆ ಮಾಲೀಕರು ಹೋಗಿದ್ದಾರೆ. ಹಾಲಿ ೧,೮೩.೦೦೦ ಎಕರೆ ಕೋರ್ಟಿನ ಮುಂದಿದೆ ಉಳಿದ ೨೩೩೧ ಎಕರೆ ಮಾತ್ರ ಉಳಿದಿದೆ. ಆ ಮೇಲೆ ಕೆಲವು ರಿಮ್ಯಾಂಡ್ ಆಗಿ ಟ್ರಿಬ್ಯುನಲ್‌ಗಳಿಗೆ ಕಳಿಸಿ ನಿರ್ಣಯವಾಗಿದೆ ಒಟ್ಟು ಎರಡು ವರ್ಷಗಳಲ್ಲಿ ಹಂಚಿಕೆಯಾಗಿ ಉಳಿದಂತಹ ಭೂಮಿ ೯,೫೫೦ ಎಕರೆ ಮಾತ್ರ ವಿಲೇವಾರಿಯಲ್ಲಿ ಹಂಚಿಕೆಯಾಗಿದೆ. ಇವತ್ತು ಒಂದೆಕರೆ ಕೂಡ ಇಲ್ಲ. ಉಳಿದವು ಕೋರ್ಟಿನ ಮುಂದಿವೆ. ಅವುಗಳನ್ನು ಆದಷ್ಟು ಬೇಗನೆ ವಿಲೇವಾರಿ ಮಾಡಿ ಕೊಡುವಂತೆ ಅಡ್ವೊಕೇಟ್ ಜನರಲ್ ಅವರನ್ನು ವಿನಂತಿ ಮಾಡಿಕೊಂಡಿದ್ದೇವೆ. ಅವು ಬಂದ ಮೇಲೆ ಕಾರ್ಯ ಮಾಡುತ್ತೇವೆ.

ಇನ್ನು ಲ್ಯಾಂಡ್ ಟ್ರಿಬ್ಯುನಲ್ ಕೇಸಸ್ ಬಗ್ಗೆ ಟೀಕೆ ಮಾಡಿದರು. ೩ ಸಾವಿರ ಕೇಸ್ ಹೆಚ್ಚಾಗಿವೆ ಎಂದು ಹೇಳಿದ್ದಾರೆ. ಕೇಸ್‌ಗಳು ಹೆಚ್ಚಾಗಿಲ್ಲ. ಆಗಿರುವುದೇನೆಂದರೆ ಕೆಲವು ಅರ್ಜಿಗಳು ಕ್ಲಬ್ಬಾಗಿವೆ. ಒಬ್ಬನೇ ಲ್ಯಾಂಡ್‌ಲಾರ್ಡ್ ಇದ್ದು ಬೇರೆ ಬೇರೆ ಟೆನೆಂಟ್ಸ್ ಇರುತ್ತಾರೆ. ಹೀಗಾಗಿ ಕ್ಲಬ್ಬಾದ ಅರ್ಜಿಗಳಿಗೆಲ್ಲ ಬೇರೆ ಬೇರೆ ನಂಬರ್ ಕೊಟ್ಟಿರುವುದರಿಂದ ಅಂಕಿ ಹೆಚ್ಚಾಗಿ ತೋರಿಸುತ್ತಿದೆ. ಹೊರತು ಹೆಚ್ಚಿನ ಅರ್ಜಿಗಳೇನೂ ಬಂದಿಲ್ಲ. ಅವನ್ನೆಲ್ಲ ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ವಿಲೇವಾರಿ ಮಾಡುತ್ತಿದ್ದಾರೆ. ಈಗಾಗಲೇ ಲ್ಯಾಂಡ್‌ಗಳನ್ನು ರಚನೆ ಮಾಡುತ್ತಿದ್ದೇವೆ. ಇನ್ನು ಕೇವಲ ೨೦ ಮಾತ್ರ ಉಳಿದಿವೆ. ಒಂದೆರಡು ದಿವಸಗಳಲ್ಲಿ ರಚನೆ ಮಾಡಿಬಿಡುತ್ತೇವೆ. ವಿಳಂಬವಾಗಿರುವುದು ನಿಜ. ಇಲ್ಲವೆಂದು ಹೇಳುತ್ತಿಲ್ಲ. ಕಾರಣಗಳೇನೆಂದರೆ ಲೋಕಸಭೆಯ ಚುನಾವಣೆಗಿಂತ ಮುಂಚೆ ಅಸೆಂಬ್ಲಿಯ ಚುನಾವಣೆಗಿಂತ ಮುಂಚೆ ಅನೇಕ ವಿರೋಧ ಪಕ್ಷದವರು ಟ್ರಿಬ್ಯುನಲ್‌ಗಳನ್ನು ನಡೆಸಕೂಡದೆಂದು ಹೇಳಿದ್ದರು. ಆದ್ದರಿಂದ ನಡೆಸಬಾರದೆಂದು ಆಜ್ಞೆ ಮಾಡಿದ್ದೆವು. ಆ ಮೇಲೆ ಶಾಸಕ ಮಿತ್ರರು ಅನೇಕ ಸಲ ಶಾಸನಸಭೆ ನಡೆದಾಗ ನಡೆಸಬಾರದೆಂದು ಹೇಳಿದ್ದರು. ಅವರು ಹೇಳಿರುವುದೇನೋ ಒಳ್ಳೆಯದು. ಕಾನೂನು ಪ್ರಕಾರ ಮುಂದೆ ಹಾಕುವುದಕ್ಕೆ ಸಾಧ್ಯವಿಲ್ಲದೇ ಇದ್ದರೂ ಸದನ ನಡೆಯುವ ಸಮಯದಲ್ಲಿ ನಡೆಸುಲ್ಲ. ಆದರೆ ಅವುಗಳ ಪೈಕಿ ಕೆಲವು ಹೈಕೋರ್ಟಿನಿಂದ ರಿಮ್ಯಾಂಡ್ ಬಂದಂತಹ ಕೇಸ್‌ಗಳನ್ನು ತೀರ್ಮಾನ ಮಾಡಲು ಸೂಚನೆ ಕೊಡುತ್ತಿದ್ದೇವೆ.

ಎಲ್ಲಕ್ಕೂ ದೊಡ್ಡ ಟೀಕೆ ಮಾನ್ಯ ಬಸವಲಿಂಗಪ್ಪನವರಿಂದ ಮತ್ತು ಖರ್ಗೆಯವರಿಂದ ಬಂದಿದೆ. ಲ್ಯಾಂಡ್ ಗ್ರ್ಯಾಂಟ್ಸ್ ಬಗ್ಗೆ ಮತ್ತು ಪಿಟಿಸಿಎಲ್ ಆಕ್ಟ್ ಬಗ್ಗೆ. ಈ ಪಿಟಿಸಿಎಲ್ ಆಕ್ಟ್ ಜಾರಿಗೆ ಬಂದ ಮೇಲೆ ಅಂದು ನಾನು ಆ ಕಮಿಟಿಗೆ ಅಧ್ಯಕ್ಷನಾಗಿದ್ದೆ. ವಿರೋಧ ಪಕ್ಷದಲ್ಲಿದ್ದುದರಿಂದ ಅದರ ಚೇರ್ಮನ್ ಆಗಿದ್ದೆ. ನಾನು ರಿಪೋರ್ಟ್ ಕೊಡುವುದಕ್ಕೆ ಏನೇನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂಬುದೆಲ್ಲ ಯೋಚಿಸಿ ಡೆಪ್ಯುಟಿ ಕಮಿಷನರ್‌ಗಳಿಗೆ ಪತ್ರ ಬರೆದು ಈ ಪಿಟಿಸಿಎಲ್ ಬಗ್ಗೆ ಕೇಳಿದಾಗ ಅವರಿಂದ ನಿಲ್ ಏಲಿನೇಷನ್ ಎಂದು ಉತ್ತರ ಬಂತು. ಅಂದು ಚೀಫ್ ಸೆಕ್ರೆಟರಿಯವರಿಂದ ಬೇರೆ ಬೇರೆ ಅಧಿಕಾರಿಗಳಿಂದ ಡೈರೆಕ್ಷನ್ ಕೊಡಿಸಬೇಕಾದ ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಇವತ್ತು ಡಿವಿಜನಲ್ ಕಮೀಷನರ್‌ಗಳಿಗೆ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ಸೂಚನೆ ಕೊಟ್ಟಿದ್ದೇನೆ. ಹಳ್ಳಿಗಳಲ್ಲಿ ಅರ್ಜಿ ಕೊಡಲು ಯಾರೂ ಮುಂದೆ ಬರುತ್ತಿಲ್ಲ. ಹಾಸನ ಜಿಲ್ಲೆಯಲ್ಲಿ ಮಾತ್ರ ಅರ್ಜಿಗಳು ಬಂದಿವೆ. ಅವನ್ನು ಪೂರ್ಣವಾಗಿ ಮುಗಿಸಿದ್ದೇವೆ. ಅಲ್ಲಿ ಈಗಾಗಲೇ ೫ ಸಾವಿರ ಎಕರೆ ಜಮೀನು ವಾಪಸ್ಸು ಕೊಡಿಸಿದ್ದೇವೆ. ಇದಿಷ್ಟನ್ನೂ ನನ್ನ ಕಮಿಟಿ ರಿಪೋರ್ಟ್ ಕೊಡುವುದರೊಳಗೇ ಮಾಡಿಸಿದ್ದೆವು.

ನಾನು ಹೇಳತಕ್ಕಂಥದ್ದೇನೆಂದರೆ ಸುಪ್ರೀಮ್ ಕೋರ್ಟಿನಿಂದ ನಿರ್ಣಯ ಬಂದ ಮೇಲೆ ಅಪೀಲ್ ಮಾಡತಕ್ಕಂಥ ಪ್ರಾವಿಷನ್ ಅನ್ನು ಸುಪ್ರೀಮ್ ಕೋರ್ಟ್ ಆದೇಶದ ಮೇರೆಗೆ ಮಾಡಿದ್ದೇವೆ. ಕೊನೆಯ ನಿರ್ಣಯ ಬರುವ ಮೊದಲು ಅಪೀಲ್‌ಗೆ ಪ್ರಾವಿಷನ್ ಇರಲಿಲ್ಲ. ಇನ್ನು ನಿರ್ಣಯ ಬಂದ ಮೇಲೆ ನಾವು ೧೬-೮-೮೫ ರಂದು ಒಂದು ಅಫಿಶಿಯಲ್ ಮೆಮೋರ್ಯಾಂಡಮ್ ಕೊಟ್ಟಿದ್ದೇವೆ. ಅಧಿಕಾರಿಗಳೆಲ್ಲರಿಗೂ ಸೂಚನೆ ಕೊಟ್ಟಿದ್ದೇವೆ. ಇದನ್ನು ಪ್ರಾಸಂಗಿಕವಾಗಿ ಓದುವುದು ಅವಶ್ಯಕವಾದ್ದರಿಂದ ಓದುತ್ತೇನೆ. I will read the relevant portion.

The Authorities under the Act have therefore to decided in each case whether prior to 1-1-1979, the Transfered therein has perfected his title in the granted lands by adverse possession or his title is profitable, i.e, under the lands which is defeatable in character, it is clear from the Judgment of the Supreme Court that the perfection of the title by adverse possession by a Transferee will have to be exercised with reference to the right of the Government to resume the lands and not with reference to the right of the grantee who forfeits the grant in favour of the Government, if he violates the terms of grant. Government has therefore not transferred all its rights, title and interest under the property while making the grant in favour of the Grantees. Therefore perfection of title by adverse possession by a Transferee can only be with reference to the right of the Government and not with reference to right of the Grantees. According to Article 112 read with Section 30 of the Limitation Act of 1973, the Transferee of a granted land would have perfected his title in the granted land by a prescription of long tenancy enjoyment of this adverse possession, if the transfer is on or before 1-1-1949.

We have made it very clear. Therefore, where granted lands have been transferred on or prior to 1. 1. 49 in violation of the conditions regarding prohibition of such transfer must be held to be outside the purview of the provisions of the Act All other transfers ie., transfers of granted land made after 1.1.49 in violations of the conditions regarding prohibition of such transfer fall within the purview of the Act as the titled transferee of such lands was divisible and voidable on the date of coming into force of the Act,

ದಿನಾಂಕ ೧೬-೮-೮೫ರಲ್ಲಿನ ಅಫಿಷಿಯಲ್ ಮೆಮೊರ್ಯಾಂಡಮ್‌ನಲ್ಲಿ ಈ ತರಹ ಕ್ಲಾರಿಫಿಕೇಷನ್ ಕೊಟ್ಟಿತ್ತು. ಸುಪ್ರೀಂ ಕೋರ್ಟ್ ಆಜ್ಞೆ ಬಂದಮೇಲೆ ಕೆಲವು ಅಧಿಕಾರಿಗಳು ಇದನ್ನು ಬೇರೆ ರೀತಿ ಅರ್ಥ ಮಾಡುತ್ತಿದ್ದರು. ಅದಕ್ಕಾಗಿ ಕ್ಲಾರಿಫೈ ಮಾಡಿದ್ದೇವೆ. ಸುಪ್ರೀಂ ಕೋರ್ಟಿನಲ್ಲಿ ರೆವ್ಯೂ ಮಾಡುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಅವಶ್ಯ ಬಿದ್ದರೆ ಕಾನೂನು ತಿದ್ದುಪಡಿ ಮಾಡುವ ಬಗ್ಗೆಯೂ ಕೂಡ ಆಲೋಚನೆ ಮಾಡುತ್ತೇವೆ. ಈ ವಿಚಾರದಲ್ಲಿ the Government has made it very clear the legal position and asked the authorities to act accordingly .

ಶ್ರೀ ಬಿ. ಬಸವಲಿಂಗಪ್ಪ.—ಮಾಡಬೇಕಾಗುತ್ತದೆ...

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಪಾಯಿಂಟ್...

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ತಾವು ಈ ರೀತಿ ಮಧ್ಯೆ ಕೇಳಬೇಡಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಯಾರು ಬಡವರಿದ್ದಾರೆ ಅವರ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆ ಇದು. ಏತಕ್ಕೆ ತಾವು ಇಷ್ಟು ಅವಸರ ಮಾಡುತ್ತೀರಿ? ನನಗರ್ಥವಾಗಲಿಲ್ಲ. ಈ

ಸಂದರ್ಭದಲ್ಲಿ ನಾವು ಹೇಳಲೇಬೇಕಾಗುತ್ತದೆ, ಅದಕ್ಕೋಸ್ಕರ ಹೇಳುತ್ತೇನೆ. ಅವರು ಹೇಳುವ ವರೆಗೂ ಸುಮ್ಮನಿರಬೇಕೆ? ನಾನು ತಮಗೆ ಕೈಮುಗಿಯುತ್ತೇನೆ. ಇನ್ನೊಂದು ಸಾರಿ ಮುಗಿಯಲೇ? ದಯಮಾಡಿ ಸುಮ್ಮನಿರಿ.

ಅಧ್ಯಕ್ಷರು.--ನಾನು ಏತಕ್ಕೆ ಹೇಳಿದೆ ಎಂದರೆ ಎಲ್ಲರೂ ನಡುನಡುವೆ ಕೇಳಿದರೆ ಕಷ್ಟವಾಗುತ್ತದೆ ಎಂದು ಹೇಳಿದೆ.

ಶ್ರೀ ಬಿ. ಬಸವಲಿಂಗಪ್ಪ.--ಇದು ಮುಖ್ಯವಾದ ವಿಷಯ.

ಅಧ್ಯಕ್ಷರು.--ನಾನು ಒಪ್ಪಿಕೊಂಡೆ. ಆದರೂ ಇದು ಒಳ್ಳೆಯ ಸಂಪ್ರದಾಯ ಅಲ್ಲ.

ಶ್ರೀ ಬಿ. ಬಸವಲಿಂಗಪ್ಪ.--ಇದು ಒಳ್ಳೆಯ ಸಂಪ್ರದಾಯ ನಾನು ಕೇಳುತ್ತಿರುವುದು. ೧-೧-೧೯೭೯ರಲ್ಲಿ ಈ ಆಕ್ಟ್ ಮಾಡಿದ್ದೇವೆ. ಹದಿನೈದು ವರ್ಷದೊಳಗೆ ಯಾವಾಗ ಮಾಡಿದ್ದರೂ ಕೂಡ ಅದು ನಲ್ ಅಂಡ್ ವಾಯಿಡ್ ಆಗುತ್ತದೆ. ಏಕೆಂದರೆ ಅದು ಸರ್ಕಾರಿ ಜಮೀನು. ೧೫ ವರ್ಷ ಪೂರೈಸುವ ಮುಂಚೆ ಪರಭಾರೆ ಮಾಡಿದ್ದರೆ ಅದು ಗೌರ್ನಮೆಂಟ್ ಲ್ಯಾಂಡಾಗುತ್ತದೆ. ೧೫ ವರ್ಷ ಮುಗಿದಮೇಲೆ ಅವರ ಜಮೀನಾಗುತ್ತದೆ. ಆದ್ದರಿಂದ ಮಾಡಿರುವುದು ಸರಿಯಾಗಿದೆ. ಆದರೆ ಪ್ರತಿಯೊಬ್ಬ ಅಧಿಕಾರಿಗಳಿಗೂ ತಾವು ಹೇಳಬೇಕು ಇದರ ಬಗ್ಗೆ. ನಾನು ಅವತ್ತೂ ಹೇಳಿದ್ದೇನೆ, ಇವತ್ತೂ ಹೇಳುತ್ತೇನೆ; ಬಡವರಿಗೆ ಈ ಅಧಿಕಾರಿಗಳು ಸಹಾಯ ಮಾಡುವುದಿಲ್ಲ ಸುಪ್ರೀಂ ಕೋರ್ಟಿನವರು ತೀರ್ಮಾನ ಕೊಟ್ಟಮೇಲೆ ಎಲ್ಲರೂ ಹಾಗೇ ಇಟ್ಟಿದ್ದಾರೆ. ಯಾರುಯಾರು ಖರೀದಿ ಮಾಡಿದ್ದಾರೆ ಅವರ ಹೆಸರಿಗೆ ಖಾಯಂ ಮಾಡುವುದಕ್ಕೆ ಪ್ರಯತ್ನಗಳು ನಡೆದಿವೆ. ದಯಮಾಡಿ ಪುನಃ ಸ್ಪೆಷಲ್ ಡೆಪ್ಯುಟಿ ಕಮಿಷನರ್‌ಗಳಿಗೆ, ಡೆಪ್ಯುಟಿ ಕಮಿಷನರ್‌ಗಳಿಗೆ ಸೂಚನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ನಾವು ಆದೇಶ ಕೊಟ್ಟಿದ್ದೇವೆ. ಸ್ಪೆಷಲ್ ಡೆಪ್ಯುಟಿ ಕಮಿಷನರ್‌ಗೆ, ಡೆಪ್ಯುಟಿ ಕಮಿಷನರ್‌ಗೆ ಮತ್ತು ಅಸಿಸ್ಟೆಂಟ್ ಕಮಿಷನರ್‌ಗೆ ಹೇಳಿದ್ದೇವೆ. ಮತ್ತೆ ಈ ಬಗ್ಗೆ ಸೂಕ್ತ ಆದೇಶ ಕೊಡುತ್ತೇನೆ. ಇನ್ನು ಲ್ಯಾಂಡ್ ಗ್ರಾಂಟ್ ವಿಚಾರ. ಬಸವಲಿಂಗಪ್ಪನವರು ಇನ್ನೂ ಗತಕಾಲದ ವೈಭವದಲ್ಲಿಯೇ ಕನಸುಗಳನ್ನು ಕಾಣುತ್ತಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾವು ಮಾಡಿದ್ದನ್ನು ಹೇಳಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಮಾಡಿದ್ದರ ಬಗ್ಗೆಯೂ ಹೇಳಿದೆ. ನಾವು ಮಾಡಿದ್ದೂ ಹೇಳಿದೆ. ನೀವು ಅಷ್ಟೆ, ನಾವು ಅಷ್ಟೆ. ತಾವು ಮಾಡಿದ್ದೇ ಯಾವಾಗಲೂ ಹಿರಿದಾದುದು ಎಂದು ಹೆಗ್ಗಳಿಕೆ ಇರುತ್ತದೆ. ಲ್ಯಾಂಡ್ ಗ್ರಾಂಟ್ ವಿಚಾರದಲ್ಲಿ...

ಶ್ರೀ ಬಿ. ಬಸವಲಿಂಗಪ್ಪ.—ನೀವು ಮಾಡಿದ್ದು ಹೇಳಿ.

ಅಧ್ಯಕ್ಷರು.—ಬಸವಲಿಂಗಪ್ಪನವರೇ, ನೀವು ನಡುವೆ ಇಂಟರ್‌ಫಿಯರ್ ಮಾಡಿದ್ದರೆ ಹೇಗೆ? ಕ್ಲಾರಿಫಿಕೇಷನ್‌ಗೆ ಎಲ್ಲರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಲ್ಯಾಂಡ್ ಗ್ರಾಂಟ್ ರೂಲ್ಸ್ ಪ್ರಕಾರ ಈ ಭೂಮಿಯನ್ನು ಕೊಟ್ಟಿದ್ದು ೧೯೭೦ ರಲ್ಲಿ. ಆಗ ೧೫, ೭೪೯ ಎಕರೆ ಕೊಟ್ಟಿದ್ದಾರೆ. ೧೯೭೧ರಲ್ಲಿ ೧೫,೭೦೯ ಎಕರೆ ಕೊಟ್ಟಿದ್ದಾರೆ. ೧೯೭೨ರಲ್ಲಿ ೨೭,೬೬೫ ಎಕರೆ, ೧೯೭೩ರಲ್ಲಿ ೨೨, ೮೯ ಎಕರೆ, ೧೯೭೪ರಲ್ಲಿ ೧೭,೩೮೭ ಎಕರೆ, ೧೯೭೫ ರಲ್ಲಿ ೧೫,೩೪೦ ಎಕರೆ, ೧೯೭೬ರಲ್ಲಿ ೧೬,೪೪೨ ಎಕರೆ, ೧೯೭೭ರಲ್ಲಿ ೧೯,೬೩೩ ಎಕರೆ, ೧೯೭೮ರಲ್ಲಿ ೨೭ ೪೪೪ ಎಕರೆ, ೧೯೭೯ರಲ್ಲಿ ೧೪,೩೮೨ ಎಕರೆ, ೧೯೮೦ರಲ್ಲಿ ೧೫,೭೫೮ ಎಕರೆ, ೧೯೮೧ರಲ್ಲಿ ೧೧,೭೨೨ ಎಕರೆ, ೧೯೮೨ರಲ್ಲಿ ೨೩,೬೫೪ ಎಕರೆ, ೧೯೮೩ರಲ್ಲಿ ೯,೬೮೨ ಎಕರೆ, ೧೯೮೪ರಲ್ಲಿ ೧೯,೮೬೫ ಸರ್ಕಾರಿ ಜಮೀನು ಹಂಚಿಕೊಂಡುಬಂದಿದ್ದಾರೆ. ಮಾನ್ಯ ಖರ್ಗೆಯವರು ಹರಿಜನರಿಗೆ ಶೇಕಡ ೬೦ ರಷ್ಟು ಸಿಕ್ಕಿಲ್ಲ ಎಂದು ಹೇಳಿದರು ಪ್ರತಿವರ್ಷದಲ್ಲಿ ೬೦ ಪರ್ಸೆಂಟ್ ಕೊಟ್ಟಿದ್ದೇವೆ. ಈ ವರ್ಷದಲ್ಲೂ ಕೊಟ್ಟಿದ್ದೇವೆ. ೧೯೮೩ರಲ್ಲಿ ೯,೬೮೨ ಎಕರೆ ಹಂಚಿದ್ದಾರೆ. ಅದರಲ್ಲಿ ೩,೯೯೩ ಎಕರೆ ಜಮೀನನ್ನು ಹರಿಜನರಿಗೆ ಕೊಟ್ಟಿದ್ದೇವೆ. ೧೯೮೪ರಲ್ಲಿ ೮೦೪೫ ಎಕರೆಯನ್ನು ಹರಿಜನರಿಗೆ ಕೊಟ್ಟಿದ್ದೇವೆ. ಈ ಸರ್ಕಾರ ಬಂದಮೇಲೆ ಹರಿಜನರಿಗೆ ಜಮೀನು ಕೊಟ್ಟಿಲ್ಲ ಎಂದು ಟೀಕೆ ಮಾಡುತ್ತಿದ್ದರಲ್ಲ...

ಶ್ರೀ ಬಿ. ಬಸವಲಿಂಗಪ್ಪ.—ನೀವು ಏನು ಮಾಡಿದ್ದೀರಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವೂ ಹಂಚಿಕೆ ಮಾಡಿದ್ದೇವೆ. ಇವೊತ್ತಿನಿಂದ ಮಾತ್ರ ಹರಿಜನರಿಗೆ ಜಮೀನನ್ನು ಹಂಚುತ್ತಿದ್ದೇವೆ ಎಂದು ತಿಳಿದ್ದು ಕೊಳ್ಳಬೇಡಿ. ನಾವು ನೀವು ಶಾಸಕರಾಗುವುದಕ್ಕಿಂತ ಮೊದಲಿನಿಂದಲೂ ಹರಿಜನಗಿರಿಜನರಿಗೆ ಭೂಮಿ ಹಂಚಿಕೆಯಾಗುತ್ತಿದೆ. ಇದೇನೂ ಹೊಸದಲ್ಲ ಅವೈಲಬಲಿಟಿ ಆಫ್ ಲ್ಯಾಂಡ್ ಮೇಲೆ ಮಾಡಿಕೊಂಡುಬಂದಿದ್ದಾರೆ. ಇದು ಕಂಟಿನ್ಯೂಯಸ್ ಪ್ರೋಸೆಸ್. ಇದನ್ನು ನಿಲ್ಲಿಸಿಲ್ಲ ಎಂದು ಹೇಳಿದೆ. ರೆಗ್ಯುಲರೈಸೇಷನ್ ಬಗ್ಗೆ, ಎನ್‌ಕ್ರೋಚ್‌ಮೆಂಟ್ ಬಗ್ಗೆ ಹೇಳಿದ್ದೀರಿ, ಅದೂ ಕೂಡ ೧೯೭೭ರಲ್ಲಿ ೫೪,೭೮೦ ಎಕರೆ ಆಗಿದೆ. ೧೯೭೮ರಲ್ಲಿ ೫೨,೪೮೨ ಎಕರೆ ಆಗಿದೆ. ೧೯೭೯ರಲ್ಲಿ ೨೬,೭೭೮ ಎಕರೆ. ೧೯೮೦ರಲ್ಲಿ ೯೦೩೫ ಎಕರೆ, ೧೯೮೧ರಲ್ಲಿ ೧೯,೪೨೪ ಎಕರೆ. ೧೯೮೨ರಲ್ಲಿ ೧೪,೮೯೯ ಎಕರೆ, ೧೯೮೩ರಲ್ಲಿ ೧೦,೮೪೬ ಎಕರೆ, ೧೯೮೪ರಲ್ಲಿ ೧೨,೫೦೪ ಎಕರೆ. ೧೯೮೫ರಲ್ಲಿ ಅರ್ಜಿಗಳುಬಂದಿವೆ. ಆದರಲ್ಲಿ ಸ್ವಲ್ಪ ಅರ್ಜಿಗಳು ಉಳಿದಿವೆ. ಆದಷ್ಟು ಜಾಗ್ರತೆ ಅವುಗಳನ್ನು ವಿಲೇವಾರಿ ಮಾಡುವುದಕ್ಕೆ ತಿಳಿಸಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲಾ ಸಾಹುಕಾರರಿಗೆ ರೆಗ್ಯುಲರೈಸ್ ಮಾಡಿದ್ದೀರಿ ಎಂದು ನಾನು ಹೇಳಿದ್ದುದು,

ಶ್ರೀ ಎಸ್. ಆರ್ ಬೊಮ್ಮಾಯಿ.—ಇಲ್ಲಿ ಬ್ರೇಕಪ್ ಫಿಗರ್ಸ್ ಇದೆ. ಅರ್ಜಿ ಹಾಕುವುದಕ್ಕೆ ಪುನಃ ಅವಕಾಶ ಮಾಡಿಕೊಟ್ಟಿದ್ದೇವೆ. ೨೩-೩-೧೯೮೧ರಲ್ಲಿ ಸೆಕೆಂಡ್ ಆರ್ಡರ್ ಆಗಿದೆ. ಅದರ ಪ್ರಕಾರ ೧೯೮೧ರಲ್ಲಿ ಹರಿಜನಗಿರಿಜನರಿಗೆ ೧೬,೯೫೫ ಎಕರೆ ಕೊಟ್ಟಿದೆ, ೧೯೮೨ರಲ್ಲಿ ೨೬,೫೯೧ ಎಕರೆ, ೧೯೮೩ರಲ್ಲಿ ೧೬,೬೩೩ ಎಕರೆ, ೧೯೮೪ರಲ್ಲಿ ೧೧,೭೬೫ ಎಕರೆ ಹಂಚಿಕೆಯಾಗಿದೆ. ಅಪ್ಲಿಕೇಷನ್ ಬಂದಿದ್ದೆಲ್ಲಾ ರೆಗ್ಯುಲರೈಸ್ ಮಾಡಿದ್ದೇವೆ. ಇನ್ನೊಂದು ವಿಚಾರ ಇದೆ. ಇತ್ತೀಚೆಗೆ ಕೆಲವು ಜಮೀನುಗಳು ಅತಿಕ್ರಮಣ ಆಗಿದೆ, ಅವುಗಳ ಬಗ್ಗೆ ನಿರ್ಣಯ ಏನು ಮಾಡುತ್ತೀರಿ, ಕಾಫಿ ಪ್ಲಾಂಟರ್ಸ್ ಮುಂತಾದವರು ಮಾಡಿದ್ದಾರೆ ಎಂಬ ವಿಚಾರದಲ್ಲಿ ಬಂಗಾರಪ್ಪನವರು ಮತ್ತು ಬೇರೆ ಬೇರೆ ಸದಸ್ಯರು ಮಾತನಾಡಿದ್ದಾರೆ. ಈ ಬಗ್ಗೆ ಸರ್ಕಾರ ಅಂತಿಮ ನಿರ್ಣಯ ತೆಗೆದುಕೊಂಡಿಲ್ಲ. ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮೊದಲು ವಿರೋಧಪಕ್ಷದ ನಾಯಕರನ್ನು ಮತ್ತು ಬೇರೆ ಬೇರೆ ಪಕ್ಷದ ನಾಯಕರನ್ನು ಕರೆದು ಸಮಾಲೋಚನೆ ಮಾಡುತ್ತೇವೆ. ಇದರಲ್ಲಿ ಕೆಲವು ತೊಡಕುಗಳಿವೆ. ಅವುಗಳನ್ನೆಲ್ಲಾ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಇಚ್ಛಿಪಡುವುದಿಲ್ಲ. ಒಂದು ಸಭೆ ಕರೆದು ಸಲಹೆ ಪಡೆದು ನಿರ್ಣಯ ಮಾಡುತ್ತೇವೆ. ಸಿ ಅಂಡ್ ಡಿ ಕ್ಲಾಸ್ ಜಮೀನುಗಳ ಅತಿಕ್ರಮಣದ ಬಗ್ಗೆ ಹೇಳುವುದಾದರೆ ನಾನು ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗೆ ಹೋಗಿದ್ದಾಗ ನನಗೆ ಮನವಿಗಳುಬಂದಿವೆ, ಅದರಲ್ಲಿ ಹೇಳಿದ್ದಾರೆ ೧೦-೧೫ ವರ್ಷಗಳಿಂದ ನಾವೇ ಆ ಜಮೀನುಗಳನ್ನು ಸಾಗು ಮಾಡುತ್ತಿದ್ದೇವೆ, ೮-೧೦ವರ್ಷದ ತೆಂಗಿನಮರಗಳಿವೆ, ಮನೆಗಳಿವೆ. ಆದ್ದರಿಂದ ಇವುಗಳ ಬಗ್ಗೆ ಪುನರ್ ಆಲೋಚನೆ ಮಾಡಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ. ಆದರೆ ಏನಾಗಿದೆಯೆಂದರೆ ೧೩-೩-೧೯೮೨ರಲ್ಲಿ ಒಂದು ಆಜ್ಞೆ ಆಗಿದೆ. ಆಗ ಮಾನ್ಯ ಮೊಯ್ಲಿಯವರ ಸರ್ಕಾರ ಇತ್ತು ೧೫-೩-೧೯೮೨ರ ಸರ್ಕಾರಿ ಆಜ್ಞೆ ಪ್ರಕಾರ ಸಿ ಅಂಡ್ ಡಿ ಲ್ಯಾಂಡ್ ೨೩ ಲಕ್ಷ ಎಕರೆಯನ್ನು ಫಾರೆಸ್ಟ್‌ಗಾಗಿ ಕೊಟ್ಟಿದ್ದಾರೆ. ಅಡವಿ ಹೆಚ್ಚು ಮಾಡಬೇಕೆಂದು ಕೊಟ್ಟಿದ್ದಾರೆ. ಉದ್ದೇಶ ಏನೋ ಒಳ್ಳೆಯದು ಇದೆ. ಆದರೆ ಅದು ತೊಡಕು ಆಗಿದೆ. ಅದನ್ನು ಅನೇಕ ಜನ ಸಾಗು ಮಾಡಿದ್ದಾರೆ. ಅಲ್ಲಿ ಮನೆ ಇದೆ, ಮರಗಳು ಇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಕೂಡಾ ಮರು ಆಲೋಚನೆ ಮಾಡುತ್ತೇವೆ. ಇಂತಹ ಪ್ರಕರಣಗಳನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗುತ್ತದೆ. ಅವರ ಹಕ್ಕುಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ.

SRI B. BASAVALIANPPA,—You Please don't generalise.

ಶ್ರೀ ಎಸ್. ಆರ್. ಬೊಮ್ಮಾಯಿ.—ಬಸವಲಿಂಗಪ್ಪನವರೇ, ನಾನು ಹೋದದ್ದೆಲ್ಲಾ ನೋಡಿದ್ದೇನೆ. ಅಲ್ಲಿ ೮ ವರ್ಷಗಳ ತೆಂಗಿನ ಮರಗಳು ಇವೆ. ಅಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಹೋಗಿ ನಾವು ಗಿಡ ಹಾಕುತ್ತೇವೆಂದು ಹೇಳುತ್ತಿದ್ದಾರೆ. ಇವತ್ತು ದೊಡ್ಡ ದೊಡ್ಡ ಕಾಫಿ ಪ್ಲಾಂಟರ್ಸ್ ವಿಷಯ ಬೇರೆ. ಆದರೆ ಲ್ಯಾಂಡ್‌ಲೆಸ್ ಲೇಬರರ್ಸ್ ಯಾರು ಎನ್‌ಕ್ರೋಚ್ ಮಾಡಿದ್ದಾರೆ ಅವರ ಬಗ್ಗೆ ಸರ್ಕಾರ ಆಲೋಚನೆ ಮಾಡಬೇಕಾಗುತ್ತದೆ, ಅದನ್ನು ನಾನು ಪರಿಶೀಲನೆ ಮಾಡುತ್ತೇನೆ,

SRI B. BASAVALINGAPPA.—Regularisation order by the Government was there.

ಅಧ್ಯಕ್ಷರು.—೧ ಗಂಟೆ ಆಯಿತು ಸ್ವಾಮಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮುಕ್ತಾಯದ ಹಂತಕ್ಕೆ ಬರುತ್ತಿದ್ದೇನೆ. ಇನ್ನು ಸರ್ವೇ ಸೆಟಲ್‌ಮೆಂಟ್ ಬಗ್ಗೆ ಮಾನ್ಯ ಸದಸ್ಯರು ಅನೇಕ ಟೀಕೆಗಳನ್ನು ಮಾಡಿದ್ದಾರೆ. ನಾನು ಕೆಲವು ವಿಚಾರಗಳಲ್ಲಿ ಅವರ ಟೀಕೆಗಳನ್ನು ಒಪ್ಪುತ್ತೇನೆ. ಇವತ್ತು ಆ ಇಲಾಖೆಯಲ್ಲಿ ಹೆಚ್ಚಿನ ಸಿಬ್ಬಂದಿ ಅವಶ್ಯಕ ಇದೆ. ಈ ಇಲಾಖೆಯಲ್ಲಿ ಅನೇಕ ಕಡೆ ಸ್ಥಾನಗಳು ಖಾಲಿ ಇವೆ. ಇವನ್ನು ಆದಷ್ಟು ಬೇಗ ತುಂಬಬೇಕಾಗುತ್ತದೆ. ಈಗಾಗಲೇ ೧೫೦ ಜನರನ್ನು ಆಯ್ಕೆ ಮಾಡಿ ಅವರಿಗೆ ತರಬೇತಿ ಕೊಡಲಾಗುತ್ತಿದೆ. ಅವರು ಇನ್ನು ೧೫ ದಿವಸಗಳಲ್ಲಿ ಬರುವವರಿದ್ದು ಖಾಲಿ ಇರುವ ಜಾಗಗಳಿಗೆ ಅವರನ್ನು ಕಳುಹಿಸಲಾಗುವುದು. ಹಾಗೂ ಇನ್ನೂ ಹೆಚ್ಚಿನ ಜನರನ್ನು ನೇಮಿಸಿಕೊಳ್ಳತಕ್ಕ ಕೆಲಸ ವನ್ನು ಸರ್ಕಾರ ಮಾಡುತ್ತದೆ. ಈ ಇಲಾಖೆ ಅಳತೆ ಮಾಡುವ ವಿಷಯದಲ್ಲಿ ಓಬೀರಾಯನ ಕಾಲದ ಪದ್ಧತಿಯನ್ನೇ ಅನುಸರಿಸುತ್ತಾ ಇದೆ, ಇದು ಸರಿಯಲ್ಲ. ಈ ಬಗ್ಗೆ ನಾನು ಚರ್ಚೆಕೂಡಾ ಮಾಡಿ ದ್ದೇನೆ. ಇವತ್ತು ಸರ್ವೇ ಮಾಡಬೇಕಾದರೆ, ಅದೇ ದಾರ ತೆಗೆದುಕೊಂಡು ಹೋಗುವುದು, ಹಗ್ಗ ಹಿಡಿದು ಅಳತೆ ಮಾಡತಕ್ಕದ್ದು, ಸೆಂಚ್ಯುರಿ ಓಲ್ಡ್ ಮೆಥೆಡ್. ಇದು ಸರಿಯಲ್ಲ. ಇದು ಬದಲಾ ವಣೆ ಆಗಬೇಕು. ಸರ್ವೇ ಆಫ್ ಇಂಡಿಯಾ ಡಿಪಾರ್ಟ್‌ಮೆಂಟ್‌ನವರು ಈಗಾಗಲೇ ಅಳತೆ ಮಾಡುವ ಬಗ್ಗೆ ಮಾಡ್ರನೈಸ್ ಮಾಡಿದ್ದಾರೆ ಇವತ್ತು ಹೊಸ ಹೊಸ ಇನ್‌ಸ್ಟ್ರುಮೆಂಟ್ಸ್ ಬಂದಿದೆ. ಅದನ್ನು ತೆಗೆದುಕೊಂಡು ಬೇಗಬೇಗ ಬೆಟ್ಟ ಗುಡ್ಡಗಳನ್ನು ಭೂಮಿಯನ್ನು ಅಳತೆ ಮಾಡತಕ್ಕ ಬಗ್ಗೆ ನಮ್ಮ ದೇಶದಲ್ಲಿ ಪ್ರಗತಿಯಾಗಿದೆ. ಆ ಒಂದು ವ್ಯವಸ್ಥೆ ಈ ಇಲಾಖೆಯಲ್ಲಿ ಆಗಿಲ್ಲ. ಹಿಂದೆಯೇ ಈ ಬಗ್ಗೆ ಯೋಚನೆ ಮಾಡಬೇಕಾಗಿತ್ತು ಆದರೆ ಮಾಡಿಲ್ಲ. ಈ ಬಗ್ಗೆ ಸರ್ಕಾರ ಆಲೋಚನೆ ಮಾಡಿದೆ. ಹೊಸ ಹೊಸ ವಿಚಾರಗಳನ್ನು ತಂದು ಹೊಸ ಹೊಸ ಉಪಕರಣಗಳನ್ನು ಉಪಯೋಗ ಮಾಡಿ, ಹೆಚ್ಚು ಸಿಬ್ಬಂದಿಯನ್ನು ಕೊಟ್ಟು ಈ ಇಲಾಖೆಯಿಂದ ಒಳ್ಳೆಯ ಕೆಲಸವನ್ನು ಮಾಡಿಸಬೇಕಾಗಿದೆ. ಇವತ್ತು ಲ್ಯಾಂಡ್ ರಿಫಾರ್ಮ್ಸ್‌ನಿಂದ ಜಾಗ ಹಂಚಿಕೆಯಾಗಿದೆ, ಖಾತೆ ಬದಲಾವಣೆ ಆಗಿದೆ, ಕೆಲವು ಕಡೆ ಕೈಗಾರಿಕೆಗಳು ಬಂದಿವೆ, ಹೀಗಾಗಿ ರಾಜ್ಯದಲ್ಲಿ ಅನೇಕ ಬದಲಾವಣೆಗಳು ಆಗಿವೆ. ಭೂಮಿಯ ನಕೆ ಬದಲಾವಣೆಯಾಗಿದೆ. ಆದ್ದರಿಂದ ಇದನ್ನು ತೋರಿಸತಕ್ಕ ನಕ್ಷೆಯನ್ನು ತಯಾರು ಮಾಡಬೇಕಾಗಿದೆ. ಎಷ್ಟೋ ನಗರಗಳಲ್ಲಿ ಸಿಟಿ ಸರ್ವೇಯೇ ಆಗಿಲ್ಲ. ಪಂಚಾಯಿತಿಗಳಲ್ಲಿ ಸರ್ವೇ ಆಗಿಲ್ಲ, ಜಮೀನುಗಳಲ್ಲಿ ಸರ್ವೇ ಆಗಿಲ್ಲ. ಇದರಿಂದಾಗಿ ಜನರಲ್ಲಿ ತಿಕ್ಕಾಟಕ್ಕೆ ಕಾರಣವಾಗಿದೆ. ಆದಷ್ಟು ಬೇಗ ಇದನ್ನು ಸುಧಾರಣೆ ಮಾಡತಕ್ಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮಾನ್ಯ ಯಡಿಯೂರಪ್ಪನವರು, ಕೊಡಗಿನ ವಿಚಾರದಲ್ಲಿ ಟೀಕೆ ಮಾಡಿದ್ದಾರೆ. ಅವರು ಹೇಳತಕ್ಕಂತಹದ್ದರಲ್ಲಿ ಸತ್ಯಾಂಶ ಇದೆ. ಅಲ್ಲಿ ಸರ್ವೇ ಕೆಲಸ ಪ್ರಾರಂಭವಾದುದು ೧೯೭೮ರಲ್ಲಿ ಸೋಮವಾರಪೇಟೆ ತಾಲ್ಲೂಕಿನಲ್ಲಿ ೩೧೬, ವೀರಾಜ ಪೇಟೆಯಲ್ಲಿ ೧೨೦, ಮಡಿಕೇರಿಯಲ್ಲಿ ೫೬ ಹಳ್ಳಿಗಳು ಇವೆ. ಸೋಮವಾರಪೇಟೆಯಲ್ಲಿ ೭೦ ಹಳ್ಳಿಗಳ ಸರ್ವೇ ಮುಗಿದಿದ್ದು, ೬೯ ಹಳ್ಳಿಗಳಲ್ಲಿ ಸರ್ವೇ ಮುಗಿಯುವ ಹಂತದಲ್ಲಿ ಇವೆ. ಹಾಗೂ ಬೇರೆ ಬೇರೆ ತಾಲ್ಲೂಕುಗಳಲ್ಲಿ ಸರ್ವೇ ಕೆಲಸ ಪ್ರಗತಿಯಲ್ಲಿದೆ. ಈಗ ಅಲ್ಲಿ ಇರುವ ತೊಂದರೆ ಏನೆಂದರೆ, ಅಲ್ಲಿ ವರ್ಷದಲ್ಲಿ ಆರು ತಿಂಗಳು ಮಳೆಯಾಗುತ್ತದೆ. ಆ ಸಮಯದಲ್ಲಿ ಅಲ್ಲೇ ಸರ್ವೇ ಕೆಲಸ ಮಾಡು ವುದಕ್ಕಾಗುವುದಿಲ್ಲ. ಹಾಗೂ ಅಲ್ಲಿ ಗುಡ್ಡ, ಅಡವಿ ಎಲ್ಲಾ ಇರುವುದರಿಂದ ಸರ್ವೇ ಕೆಲಸ ಸ್ವಲ್ಪ ನಿಧಾನವಾಗುತ್ತದೆ. ಮತ್ತೆ ನಾನು ಹೇಳಿದಹಾಗೆ ಓಬೀರಾಯನ ಕಾಲದ ಪದ್ಧತಿಯನ್ನೇ ಅನುಸರಿ ಸುತ್ತಾ ಹೋದರೆ ಇನ್ನೂ ೮-೧೦ ವರ್ಷಗಳಾದರೂ ಬೇಕಾಗುತ್ತದೆ. ಇದು ಆಗಬಾರದು. ಅಲ್ಲಿಗೆ ಹೆಚ್ಚು ಅಧಿಕಾರಿಗಳನ್ನು ಕೊಟ್ಟು ಆಧುನಿಕ ಉಪಕರಣಗಳನ್ನು ಒದಗಿಸಿ, ಹೆಚ್ಚು ಪರಿಣತಿಯನ್ನು ಹೊಂದಿದ ಅಧಿಕಾರಿಗಳನ್ನು ಅಲ್ಲಿಗೆ ಪೋಸ್ಟ್ ಮಾಡಬೇಕಾಗುತ್ತದೆ. ಇವತ್ತು ಬಯಲು ಸೀಮೆ ಯವರನ್ನು ಆ ಕಡೆಗೆ ಟ್ರಾನ್ಸ್‌ಫರ್ ಮಾಡಿದರೆ ಅವರು ಮಲೆನಾಡು ಕಡೆಗೆ ಹೋಗುವುದಿಲ್ಲ. ಆ ಗುಡ್ಡ ಗಾಡುಗಳಲ್ಲಿ...

ಶ್ರೀ ಬಿ. ಬಸವಲಿಂಗಪ್ಪ.—ನಾನೇ ಅದನ್ನು ಸ್ಯಾಂಕ್ಷನ್ ಮಾಡಿದ್ದು. ಒಂದು ವರ್ಷದಲ್ಲಿ ಅಲ್ಲಿ ಸರ್ವೇ ಕೆಲಸ ಪೂರೈಸಬೇಕೆಂದು ಮಾಡಿದ್ದೆ. ಅಲ್ಲಿ ವರ್ಷದಲ್ಲಿ ೬ ತಿಂಗಳ ಕಾಲ ಮಳೆ ಬರುತ್ತದೆ.

ನಾನು ಸ್ವಲ್ಪ ಆಗ ತಪ್ಪು ಮಾಡಿದೆ. ನಾನು ೧ ವರ್ಷ ಇದ್ದು ನಂತರ ರಾಜೀನಾಮೆ ಕೊಟ್ಟೆ. ಈಗ ಅಲ್ಲಿಗೆ ವರ್ಗ ಮಾಡಿದವರು ಹೋಗುವುದಿಲ್ಲವೆಂದು ತಾವು ಹೇಳುತ್ತಿದ್ದೀರಿ. ಈಗ ಯಾರ, ಒಳ್ಳೆ ಪರಿಣತಿ ಹೊಂದಿದ ಅಧಿಕಾರಿಗಳು ಬಯಲು ಸೀಮೆಯಲ್ಲಿ ಇದ್ದಾರೆ ಅವರನ್ನು ಅಲ್ಲಿಗೆ ವರ್ಗ ಮಾಡಿ ೬ ತಿಂಗಳಲ್ಲಿ ಎಂದರೆ ಮಳೆಗಾಲ ಪ್ರಾರಂಭವಾಗುವುದರೊಳಗೆ ಕೆಲಸ ಮುಗಿಸಬೇಕೆಂದು ಹೇಳಿ. ಅಲ್ಲಿ ಮಳೆಗಾಲದಲ್ಲಿ ಕೆಲಸ ಮಾಡತಕ್ಕದ್ದು ಬಹಳ ವಿರಳ. ಆ ಆರು ತಿಂಗಳು ಅವರು ಏಕೆ ಅಲ್ಲಿ ಇರಬೇಕು ? ಅವರು ಅಲ್ಲಿ ಇರತಕ್ಕದ್ದು ಅನಾವಶ್ಯಕ ಆದುದರಿಂದ......

ಶ್ರೀ ಬಿ. ಎಸ್. ಯಡಿಯೂರಪ್ಪ.--ಈ ರೀತಿ ಮಾಡುವುದಾದರೆ ಮಲಗುವವರಿಗೆ ಹಾಸಿಗೆ ಕೊಟ್ಟ ಹಾಗೆ ಆಗುತ್ತದೆ, ಸೋಮವಾರಪೇಟೆಯಲ್ಲಿ ಒಟ್ಟು ಸರ್ವೆ ಆಗಿರುವುದು ೬೦ ಗ್ರಾಮಗಳು ಮಾತ್ರ.

ಶ್ರೀ ಎಸ್. ಆರ್. ಬೊಮ್ಮಾಯಿ.--೧ ಕೋಟಿ ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೇನೆ,

ಶ್ರೀ ಬಿ. ಎಸ್. ಯಡಿಯೂರಪ್ಪ.--ಇದುವರೆವಿಗೂ ೨ ಕೋಟಿ ರೂ. ಖರ್ಚು ಆಗಿದೆ. ಆದರೆ ಈಗ ಸರ್ವೆ ಆಗಿರುವುದು ೬೦ ಗ್ರಾಮಗಳು ಮಾತ್ರ ಇವತ್ತು ಉಳಿದ ಗ್ರಾಮಗಳ ಸರ್ವೇ ಮುಗಿಸುವುದಕ್ಕೆ ಇನ್ನೂ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಎಸ್. ಆರ್. ಬೊಮ್ಮಾಯಿ .--ಈ ಸರ್ವೇ ಕೆಲಸ ಎಂದರೆ, ಅದು ಆತುರದಲ್ಲಿ ಮಾಡತಕ್ಕ ಕೆಲಸ ಅಲ್ಲ. ಭೂಮಿಯ ಒಂದೊಂದು ಇಂಚನ್ನೂ ನೋಡಬೇಕಾಗುತ್ತದೆ, ಇದರ ಬಗ್ಗೆ ಮಾನ್ಯ ಸದಸ್ಯರು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾನು ಕೈಮುಗಿದು ಹೇಳುತ್ತೇನೆ. ಇದಕ್ಕೆ ಸಾಕಷ್ಟು ಸಿಬ್ಬಂದಿ ಬೇಕಾಗುತ್ತದೆ. ಇವತ್ತು ಯಾರನ್ನು ಪೋಸ್ಟ್ ಮಾಡುತ್ತೇವೆ, ಆದರಲ್ಲಿ ಅರ್ಧ ಜನ ವರ್ಗಾವಣೆಗೆ ಓಡಾಡುತ್ತಾರೆ. ಇವತ್ತು ಈ ಇಲಾಖೆಯಲ್ಲಿ ೫೩–೫೫ ವರ್ಷ ವಯಸ್ಸು ಆದ ವರು ಇದ್ದಾರೆ. ನಿವೃತ್ತಿ ವಯಸ್ಸು ೫೮ ವರ್ಷ ಆದಮೇಲಂತೂ ಕೆಲವರು ಅಲ್ಲಿ ಉಳಿದುಕೊಂಡಿ ದ್ದಾರೆ. ಕೆಲವರು ೬–೭ ವರ್ಷಗಳಿಂದ ಒಂದೇ ಕಡೆ ಉಳಿದುಕೊಂಡಿದ್ದಾರೆ. ಇಂತಹವರನ್ನು ಟ್ರಾನ್ಸ್‌ಫರ್ ಮಾಡಿದಾಗ ಅವರು ಅದನ್ನು ಕ್ಯಾನ್ಸಲ್ ಮಾಡಿಸಿಕೊಳ್ಳಲು ಶಾಸಕರುಗಳಿಂದ ಮನವಿ ತರುತ್ತಾರೆ. ಆಗ ಶಾಸಕರು ಈ ಬಗ್ಗೆ......

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.--ನಮ್ಮ ಕಡೆಯಿಂದ ಯಾರೂ ಬಂದಿಲ್ಲ, ಅವರ ಕಡೆ ಯಿಂದ...

ಶ್ರೀ ಎಸ್. ಆರ್. ಬೊಮ್ಮಾಯಿ.--ಅವರ ಕಡೆ ಇವರ ಕಡೆ ಎಂದು ನಾನು ಹೇಳಿಲ್ಲ. ಮಾನ್ಯ ಯಡಿಯೂರಪ್ಪನವರು ಹೇಳಿದಹಾಗೆ ಅಷ್ಟು ದೂರ ಹೋಗುವುದು ಸಾಧುವಲ್ಲ. ಆದಷ್ಟು ಜಾಗ್ರತೆ ಎಲ್ಲಾ ಜಾಗಗಳನ್ನು ಭರ್ತಿ ಮಾಡಿ ಹೊಸ ಹೊಸ ತಂತ್ರಜ್ಞಾನವನ್ನು ಬಳಸಿ ಬೇಗ ಮುಗಿಸತಕ್ಕ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ. ಇನ್ನು ಮುಜರಾಯಿ ಇಲಾಖೆ ಬಗ್ಗೆ ಹೆಚ್ಚು ಹೇಳುವುದು ಅವಶ್ಯಕ ಇಲ್ಲ. ಮುಜರಾಯಿ ಇಲಾಖೆ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಒಂದು ಮಾತನ್ನು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಇವತ್ತು ಇದೆಲ್ಲಾ ಜನರಿಂದ ಬರಬೇಕು. ಇವತ್ತು ಜನ ಗುಡಿ ಗೋಪುರಗಳನ್ನು ಕಟ್ಟಬೇಕು. ಅವನ್ನು ಅವರು ಉಳಿಸಿಕೊಂಡು ಹೋಗ ಬೇಕು. ಇವುಗಳನ್ನು ಜನರು ಉಸ್ತುವಾರಿ ಮಾಡಿ ಬೆಳಸಬೇಕಾಗುತ್ತದೆ. ಹಾಗೂ ಉಳಿಸಿ ಕೊಂಡು ಹೋಗಬೇಕು, ಇದರಲ್ಲಿ ನಂಬಿಕೆ ಇರುವ ಜನ ಇದನ್ನು ಮಾಡಬೇಕು. ಮುಜರಾಯಿ ಇಲಾಖೆ ಈ ವ್ಯವಸ್ಥೆ ಬಗ್ಗೆ ಆಲೋಚನೆ ಮಾಡುತ್ತಾ ಬಂದಿದೆ. ಒಂದು ವಿಚಾರವನ್ನು ಈ ವೇದಿಕೆ ಯಲ್ಲಿ ಹೇಳಿದರೆ ತಪ್ಪಾಗಲಾರದು. ಇದನ್ನು ಮಾನ್ಯ ಕೆ. ಎಚ್. ಪಾಟೀಲರೂ ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಉದಾಹರಣೆ ಕೊಟ್ಟಿರಿ. ನಮ್ಮಲ್ಲಿ ಕ್ರಿಶ್ಚಿಯನ್ ಧರ್ಮ ದವರು ಇದ್ದಾರೆ. ಮುಸಲ್ಮಾನ್ ಧರ್ಮದವರೂ ಇದ್ದಾರೆ. ಅವರುಗಳು ಹೇಗೆ ತಮ್ಮ ದೇವರ ಮಂದಿರಗಳನ್ನು ಕಟ್ಟುತ್ತಾರೋ ಅದೇ ರೀತಿ ಹಿಂದೂಗಳೂ ಮಾಡಬೇಕೆನ್ನುವುದು ತಮ್ಮ ಅಭಿಪ್ರಾಯ ಇದು ಒಪ್ಪತಕ್ಕ ಮಾತು. ಇದರಲ್ಲಿ ಯಾವುದೇ ವಿವಾದ ಇಲ್ಲ. ಆದರೆ ಒಂದು ವಿಚಾರ ಇದೆ ಅದನ್ನು ಇಲ್ಲಿ ಹೇಳಿದರೆ ತಪ್ಪು ಇಲ್ಲವೆಂದು ನಾನು ಹೇಳುತ್ತೇನೆ, ಈ ಎರಡೂ ಧರ್ಮಗಳ ಸಂಸ್ಥೆ ಗಳಿಗೆ ಪರದೇಶಗಳಿಂದ ಹಣ ಬರುತ್ತದೆ. ಆದರೆ ಹಿಂದೂಗಳಿಗೆ ಹಿಂದೂಸ್ಥಾನ ಬಿಟ್ಟರೆ ಬೇರೆ

ರಾಷ್ಟ್ರ ಇಲ್ಲ. ಆ ಎರಡೂ ಧರ್ಮಗಳಿಗೆ ಬೇರೆ ದೇಶಗಳಿಂದ ಹಣ ಬರುತ್ತದೆ. ಈ ಒಂದು ವಿಚಾರವನ್ನು ತಾವು ಆಲೋಚನೆ ಮಾಡಬೇಕು. ಇವತ್ತು ಸರ್ಕಾರದ ದೃಷ್ಟಿಯಲ್ಲಿ It is a secular Government. ಈ ಸಿಸ್ಟಮ್‌ನಲ್ಲಿ ದೇವರು ಇಲ್ಲ ಎನ್ನುವವರು, ದೇವರಲ್ಲಿ ನಂಬಿಕೆ ಇರುವವರು ಇಬ್ಬರೂ ಇದ್ದಾರೆ. ಇವತ್ತು ದೇವರು ಇದ್ದಾನೆ ಎನ್ನುವವರು ಅದನ್ನು ಪೂಜೆ ಮಾಡಲಿ ಅಧ್ಯಕ್ಷರೇ, ಈ ಮುಜರಾಯಿ ಇಲಾಖೆ ಇನ್ನಷ್ಟು ಚುರುಕುಗೊಳ್ಳಬೇಕು. ಈ ಸಂಸ್ಥೆಗೆ ಕೋಟ್ಯಾಂತರ ರೂಪಾಯಿ ಆಸ್ತಿ ಇದೆ. ಆ ಆಸ್ತಿಯನ್ನು ಧರ್ಮದರ್ಶಿಗಳ ಹೆಸರಿನಲ್ಲಿ ಬೇರೆ ಬೇರೆ ಮಠಾಧಿಪತಿಗಳ ಹೆಸರಿನಲ್ಲಿ ಕೆಲವು ಪಟ್ಟಭದ್ರ ಹಿತಗಳು ಅನುಭವಿಸುತ್ತಿವೆ. ಇವರ ಕೈಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕ ಆಸ್ತಿ ಇದೆ. ಇದನ್ನು ಮಾರಾಟ ಮಾಡತಕ್ಕ ವಿಚಾರದಲ್ಲಿ ಬಾಡಿಗೆ ಕೊಡತಕ್ಕ ವಿಚಾರದಲ್ಲಿ, ಅಲ್ಪ ಹಣಕ್ಕೆ ಕೊಟ್ಟ ಅನೇಕ ಉದಾಹರಣೆಗಳು ಇವೆ. ಇದನ್ನು ಸರಿಪಡಿಸಿದರೆ ದೇವಸ್ಥಾನಕ್ಕೆ ಬೇಕಾದಷ್ಟು ಹಣ ಸಿಗುತ್ತದೆ. ಇದು ಸರ್ಕಾರದ ಆಲೋಚನೆಯಲ್ಲಿ ಇದೆ. ಇವತ್ತು ಈ ಬಗ್ಗೆ ಮುಂಬೈ ಭಾಗದಲ್ಲಿ, ಮದ್ರಾಸ್ ಭಾಗದಲ್ಲಿ, ಹಳೇ ಮೈಸೂರು ಭಾಗದಲ್ಲಿ ಬೇರೆ ಬೇರೆ ಕಾನೂನುಗಳು ಇವೆ. ಇದನ್ನೆಲ್ಲಾ ಕ್ರೋಢೀಕರಿಸಿ ಒಂದೇ ಕಾನೂನು ಮಾಡತಕ್ಕದ್ದು ಸರ್ಕಾರದ ವಿಚಾರವಾಗಿದೆ. ಇದರ ಜೊತೆಗೆ ಒಂದು ಕಾರ್ಪೊರೇಷನ್ ಮಾಡತಕ್ಕದ್ದು ಅವಶ್ಯಕ ಇದೆ. ಈ ಬಗ್ಗೆ ಕಾರ್ಪೊರೇಷನ್ ಮಾಡಿ ಅದರ ಮುಖಾಂತರ ಈ ಸಂಸ್ಥೆಗಳನ್ನು ಅಭಿವೃದ್ಧಿ ಮಾಡತಕ್ಕದ್ದು ಸ್ವಚ್ಛ ಮಾಡತಕ್ಕದ್ದು, ಹಾಗೂ ಕಟ್ಟುನಿಟ್ಟಾಗಿ ಏನು ಪೂಜೆ ಪುನಸ್ಕಾರಗಳು ನಡೆದುಕೊಂಡು ಹೋಗುತ್ತಿವೆ. ಅದನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋಗುವ ಆಲೋಚನೆ ಸರ್ಕಾರದಲ್ಲಿ ಇದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಇವತ್ತು ಪೂಜೆ ಮಾಡುವ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ವಿಚಾರವನ್ನು ಹೇಳಿದ್ದಾರೆ. ಪೂಜೆ ಮಾಡತಕ್ಕ ಹಕ್ಕು ಯಾವುದೇ ಒಂದು ಜಾತಿಗೆ ಸಿಗುತ್ತದೆಂದು ಅಲ್ಲ. ಇದು ಎಲ್ಲರಿಗೂ ಸಮಾನತೆಯಿಂದ ಸಿಗಬೇಕಾಗುತ್ತದೆ. ಇದರ ಬಗ್ಗೆ ಮಸೂದೆ ತಂದಾಗ ಇದನ್ನು ಅದರಲ್ಲಿ ಅಳವಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಇನ್ನು ರಿಜಿಸ್ಟ್ರೇಷನ್ ಆಂಡ್ ಸ್ಟ್ಯಾಂಪ್ಸ್ ಬಗ್ಗೆ ಮಾತನಾಡಿದ್ದಾರೆ. ಇವತ್ತು ಸಬ್ ರಿಜಿಸ್ಟ್ರಾರರ್ ಕಛೇರಿಯಲ್ಲಿ ಮಾಮೂಲು ತೆಗೆದುಕೊಳ್ಳತಕ್ಕ ವಿಚಾರದ ಬಗ್ಗೆ ಎಲ್ಲರೂ ಹೇಳುತ್ತಾ ಬಂದಿದ್ದಾರೆ. ಇದನ್ನು ಹೇಳುವುದೂ ಕೂಡ ಮಾಮೂಲು ಆಗಿದೆ ಎಂದು ಒಂದು ಸಲ ಹೇಳಿದ್ದೇವೆ. ಅಲ್ಲಿ ಮಾಮೂಲು ಎಂದು ಹೇಳುವುದು ಒಂದು ಮಾಮೂಲು ಆಗಿದೆ. ಈ ರೀತಿ ನಡೆದು ಬಂದಿದೆ. ಅದು ಆಗಬಾರದು. ಮಾನ್ಯ ಬಸವಲಿಂಗಪ್ಪನವರು ತಮ್ಮ ಕಾಲದಲ್ಲಿ ಲಂಚದ ಬಗ್ಗೆ, ಲಂಚ ತೆಗೆದುಕೊಳ್ಳುವುದರ ಬಗ್ಗೆ ಹೆದರಿಕೆ ಇತ್ತು ಎಂದು ಹೇಳಿದರು. ಈ ಒಂದು ಲಂಚದ ಪ್ರಶ್ನೆ ಸಾಮಾಜಿಕ ಪ್ರಜ್ಞೆಯ ಮೇಲೆ ಅವಲಂಬಿಸಿರುತ್ತದೆ. ಈ ಲಂಚ ಎನ್ನತಕ್ಕದ್ದು ಎಲ್ಲಾ ರಾಷ್ಟ್ರದಲ್ಲೂ ಇದೆ. ಯಾವುದೇ ರಾಷ್ಟ್ರ ಇರಲಿ. ಎಂದರೆ ನಾನು ಇದನ್ನು ಸಮರ್ಥನೆ ಮಾಡುತ್ತೇನೆ ಎಂದು ಅಲ್ಲ. ಆದರೆ ಇದು ಆಡಳಿತದಲ್ಲಿ ಇರಬಾರದು. ಇವತ್ತು ಅದು ಕಡಿಮೆ ಆಗಬೇಕಾದರೆ ಸಾರ್ವಜನಿಕರ ಪ್ರಜ್ಞೆ, ರಾಜಕೀಯ ಮುಂದಾಳುತನದ ನಡತೆಯ ಮೇಲೆ ಅವಲಂಬಿಸಿರುತ್ತದೆ. ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನಡೆದಂತಹ ಅವ್ಯವಹಾರಗಳು ನಮಗೆ ಕಂಡು ಬಂದ ಮೇಲೆ ಸರ್‌ಪ್ರೈಸ್ ಚೆಕ್ ಮಾಡಿದ್ದೇವೆ. ಇದರಲ್ಲಿ ಅನೇಕ ಜನರು ಸಿಕ್ಕಿದ್ದಾರೆ. ಹಾಗೂ ಸಸ್ಪೆಂಡ್ ಕೂಡ ಮಾಡಿದ್ದೇವೆ. ಹಾಗೂ ಕೆಲವು ಪ್ರಕರಣಗಳಲ್ಲಿ ಸಿ.ಓ.ಡಿ. ಎನ್‌ಕ್ವಯರಿ ಕೂಡಾ ಮಾಡಿದ್ದೇವೆ. ಎರಡು ಪ್ರಕರಣಗಳಲ್ಲಿ ಸಿ.ಓ.ಡಿ. ಎನ್‌ಕ್ವಯರಿ ಆಗಿದ್ದು ಇನ್ನೂ ವರದಿ ಬಂದಿಲ್ಲ. ಅವರು ತಪ್ಪಿತಸ್ಥರು ಎಂದು ಕಂಡು ಬಂದರೆ ನಾವು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ...

ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು.

ಶ್ರೀ ಕೆ. ಎಚ್. ಪಾಟೀಲ್. — ತಿರುಪತಿ ವೆಂಕಟೇಶ್ವರನಲ್ಲೇ ಲಂಚ ಹೆಚ್ಚಾಗಿದೆ. ಒಬ್ಬರು ೪ ಲಕ್ಷ ರೂ. ಗಳನ್ನು ಒಂದೇ ಗಂಟೆನಲ್ಲಿ ಕೊಟ್ಟಿದ್ದಾರೆ. ಇದರಿಂದ ಆತನ ರೇಟ್ ಹೆಚ್ಚು ಆಗಿದೆ ಎಂದಮೇಲೆ ಉಳಿದವರ ರೇಟ್ ಏನು ?

ಶ್ರೀ ಎಸ್. ಆರ್. ಬೊಮ್ಮಾಯಿ — ರೇಟ್ ಹೆಚ್ಚು ಕಡಿಮೆ ಆಗುವುದರ ಬಗ್ಗೆ ಜನ ಹೇಳಬೇಕು. ಇದಕ್ಕಾಗಿ ಒಂದು ಆಜ್ಞೆ ಹೊರಡಿಸಲಾಗಿದೆ. ಅದರ ಪ್ರಕಾರ ಸಬ್ ರಿಜಿಸ್ಟ್ರಾರ್

ಕಛೇರಿಗೆ ಅಲ್ಲಿಯು ಅಧಿಕಾರಿಗಳು ಹೋದಮೇಲೆ ತಮ್ಮ ಕ್ಯಾಶ್‌ನ್ನು ಡಿಕ್ಲೇರ್ ಮಾಡತಕ್ಕದ್ದು ಮತ್ತು ಅದನ್ನು ಸೀಲ್ ಮಾಡತಕ್ಕದ್ದು ಎಂದು ಆಜ್ಞೆ ಹೊರಡಿಸಲಾಗಿದೆ. ಅವರು ಕೆಲಸಕ್ಕೆ ಹೋಗುವಾಗ ಇದನ್ನು ಅನುಸರಿಸಬೇಕಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದನ್ನು ನೋಡುವವರು ಮತ್ತು ಚೆಕ್ ಮಾಡುವವರು ಯಾರು ಸ್ವಾಮಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಬ್ ರಿಜಿಸ್ಟ್ರಾರ್ ಹತ್ತಿರ ಅವರು ಸೀಲ್ ಮಾಡಬೇಕೆಂದು ಕಾನೂನು ಇದೆ. ಈ ಆಜ್ಞೆಯನ್ನು ಮಾಡಿ ೧೫ ದಿವಸಗಳು ಆಯಿತು. ಇದನ್ನು ನಾವು ಜಾರಿ ಮಾಡೋಣ. ಅದನ್ನು ಡಿಕ್ಲೇರ್ ಮಾಡದೇ ಇದ್ದಾಗ ಆಂಟಿ ಕರಪ್ಷನ್‌ನವರು ಹೋದಾಗ, ಸರ್‌ಪ್ರೈಸ್ ಚೆಕ್‌ಗೆ ಹೋದಾಗ ಅವರೇ ಸಿಕ್ಕಿಹಾಕಿಕೊಳ್ಳುತ್ತಾರೆ. ಅವರು ಕಛೇರಿಗೆ ಹೋದಾಗ ಆ ಕೆಲಸ ಮಾಡಬೇಕೆಂದು ಈಗಾಗಲೇ ಆಜ್ಞೆ ಹೊರಡಿಸಿದ್ದೇವೆ. ಅಲ್ಲದೇ...

ಶ್ರೀ ಬಿ. ಬಸವಲಿಂಗಪ್ಪ.—ಲಂಚದ ವಿಚಾರವಾಗಿ ಮಾನ್ಯ ಬೊಮ್ಮಾಯಿಯವರು ಅವರಿಗೆ ಗೊತ್ತಿರತಕ್ಕದ್ದನ್ನು ಹೇಳಿದ್ದಾರೆ. ಈ ಲಂಚ ತೆಗೆದುಕೊಳ್ಳತಕ್ಕದ್ದು ಅನಾದಿಕಾಲದಿಂದ ನಡೆದು ಬಂದಿದೆ ಎಂದು ಅವರು ಹೇಳಿದ್ದಾರೆ. ಇದು ಅನಾದಿ ಕಾಲದಿಂದ ನಡೆದು ಬಂದಿರತಕ್ಕದ್ದು ಸತ್ಯ ಎಂದು ಅವರು ಹೇಳತಕ್ಕ ಮಾತು ಸರಿಯಲ್ಲ. ಸಾರ್ವಜನಿಕ ಆಡಳಿತದಲ್ಲಿ ಲಂಚಗುಳಿತನವನ್ನು ನಾವು ಖಂಡನೆ ಮಾಡಬೇಕಾಗುತ್ತದೆ, ಹಾಗೂ ಅದನ್ನು ನಿಗ್ರಹಿಸಬೇಕಾಗುತ್ತದೆ. ಹಾಗೂ ತೆಗೆದು ಕೊಂಡವರಿಗೆ ನಾವು ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಇದು ಇಲ್ಲದಿದ್ದರೆ ನಾವು ರಾಜ್ಯಾಡಳಿತ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಲೀಲಾಜಾಲವಾಗಿ ಮಾಮೂಲು ಎನ್ನತಕ್ಕ ಪದವನ್ನು ಉಪಯೋಗಿಸತಕ್ಕದ್ದು ಲಂಚ ಮೊದಲಿನಿಂದಾ ಬಂದಿದೆ ಎನ್ನತಕ್ಕ ಮಾತು ರಾಜ್ಯದ ಆಡಳಿತವನ್ನು ಮಾಡುತ್ತಿರುವವರ ಬಾಯಿಂದ ಬಂದದ್ದು ಸರಿಯಲ್ಲ

ಶ್ರೀ ಎಸ್. ಆರ್.—ಬೊಮ್ಮಾಯಿ.—ಮಾನ್ಯ ಬಸವಲಿಂಗಪ್ಪನವರು ನನ್ನ ಮಾತನ್ನು ಅರ್ಥ ಮಾಡಿಕೊಂಡಿಲ್ಲವೆಂದು ನನ್ನ ಭಾವನೆ. ಎಲ್ಲಿಯವರೆಗೆ ರಾಜಕೀಯ ಭ್ರಷ್ಟಾಚಾರ ಹೋಗುವುದಿಲ್ಲವೊ ಅಲ್ಲಿಯವರೆಗೆ ಆಡಳಿತದಲ್ಲಿ ಭ್ರಷ್ಟಾಚಾರ ಉಳಿಯುತ್ತದೆ. ಇದನ್ನು ಹೋಗಲಾಡಿಸುವ ಬಗ್ಗೆ ನಾವೆಲ್ಲರೂ ಪ್ರಯತ್ನ ಮಾಡಬೇಕಾಗುತ್ತದೆ. ಇದು ಹಿಂದೆ ಇತ್ತು ಈಗ ಇಲ್ಲ ಎಂದು ನಾನು ಹೇಳಲಿಲ್ಲ. ಇದನ್ನು ನಿಗ್ರಹಿಸಬೇಕೆಂದು ನಾವು ಹೆಜ್ಜೆ ಇಟ್ಟಿದ್ದೇವೆ. ಈ ಬಗ್ಗೆ ಏನು ಹೆಚ್ಚಿನ ವಿಚಾರಗಳ ಬಗ್ಗೆ ಸಲಹೆ ಕೊಟ್ಟಿದ್ದೀರಿ ! ಅದನ್ನು ಗಮನದಲ್ಲಿ ಇಟ್ಟುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಇವತ್ತು ಯಾವುದೇ ಸರ್ಕಾರ ಇರಲಿ ಲಂಚವನ್ನು ಹೋಗಲಾಡಿಸಬೇಕು. ಈ ಬಗ್ಗೆ ಸರ್ಕಾರ ಜೊತೆ ಜನತೆಗೆ ಕೂಡಾ ಸಹಕರಿಸಬೇಕಾಗುತ್ತದೆ. ಹಾಗೂ ಈ ಬಗ್ಗೆ ನಿಮ್ಮ ಸಹಕಾರವನ್ನು ಸಹಾ ಕೇಳುತ್ತಿದ್ದೇನೆ. ಹಾಗೂ ಸರ್‌ಪ್ರೈಸ್ ಚೆಕ್ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಇದರ ಬಗ್ಗೆ ತಾವು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸ್ಟಾಂಪ್ ಡ್ಯೂಟಿ ಬಗ್ಗೆ ಐದು ಸಾವಿರದವರೆವಿಗೂ ರಿಯಾಯಿತಿ ಕೊಟ್ಟಿದ್ದೇವೆ. ಐದು ಸಾವಿರದವರೆವಿಗೂ ಸ್ಟಾಂಪ್ ಡ್ಯೂಟಿ ಇಲ್ಲ. ಇಂಥವರಿಗೆ ಸ್ಟಾಂಪ್ ಡ್ಯೂಟಿ ರಿಯಾಯಿತಿ ಕೊಟ್ಟಿದ್ದೇವೆ. 25 deeds of the same property between the same parties have been executed. ೮ ವರ್ಷದಲ್ಲಿ ಬೆಂಗಳೂರು ಸುತ್ತಮುತ್ತ ಒಂದು ಲಕ್ಷ ಎಂಭತ್ತು ಸಾವಿರ ರೆವಿನ್ಯೂ ಸೈಟುಗಳೂ ರಿಜಿಸ್ಟ್ರೇಷನ್ ಆಗಿದೆ. ಅದನ್ನು ಕನ್‌ವರ್‌ಷನ್ ಮಾಡುವುದಕ್ಕೆ ದಂಡವಿಲ್ಲ. ಸ್ಟಾಂಪ್ ಇಲ್ಲ. ಇಂಥದ್ದು ಒಂದು ಲಕ್ಷ ಎಂಭತ್ತು ಸಾವಿರ ಸೈಟುಗಳು ವಿಲೇವಾರಿ ಯಾಗಿದೆ. ಇದು ನಿಮ್ಮ ಕಾಲದಲ್ಲೂ ಆಗಿದೆ. ಈಗಲೂ ಆಗಿರಬಹುದು. ಈಗ ಅದನ್ನು ನಿಲ್ಲಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾನು ಕೊಟ್ಟಿದ್ದಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಯಾರು ಕೊಟ್ಟಿದ್ದರು ಏನೋ ಗೊತ್ತಿಲ್ಲ. This is a continuity. I am not blaming any individual. I am trying to stop it. ಆಶ್ಚರ್ಯಕರ ಪರಿಶೋಧನೆ ಮಾಡಿದ್ದೇವೆ. ಸಿಬಿಡಿ ತನಿಖೆ ಮಾಡಿದ್ದೇವೆ. ಕೆಲವರನ್ನು

ಅರೆಸ್ಟ್ ಮಾಡಿದ್ದೇವೆ. ಇದು ಮಾಡತಕ್ಕ ಪ್ರಯತ್ನ. ಇನ್ನು ಸ್ಟ್ಯಾಂಪ್ ಆಕ್ಟ್ ವಿಚಾರದ ಬಗ್ಗೆ ನಾನು ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಸ್ಟ್ಯಾಂಪ್ ಡ್ಯೂಟಿ ಹೆಚ್ಚಾಗಿ ಮಾಡುವ ವಿಚಾರದಲ್ಲಿ ೧೧ ನಗರಗಳಲ್ಲಿ ಮಾತ್ರ ಈ ಭೂಮಿಯ ಬೆಲೆ ನಿಗದಿ ಮಾಡಲಾಗಿತ್ತು. ಈಗ ಈ ನಿಯಮವನ್ನು ಳಿಳ ನಗರಗಳಿಗೆ ವಿಸ್ತಾರ ಮಾಡಿದ್ದೇವೆ. ದೊಡ್ಡ ನಗರಗಳಲ್ಲಿ ಈ ವ್ಯಾಲ್ಯೂಯೇಷನ್ ಹೆಚ್ಚಿಗೆ ಮಾಡತಕ್ಕ ವಿಚಾರದಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಈ ವಿಲೇಜ್ ಅಕೌಂಟೆಂಟ್‌ಗಳ ಬಗ್ಗೆ ಶ್ರೀಮಾನ್ ಖರ್ಗೆಯವರು ಕೇಳಿದರು. ತೋಟಿ, ತಳವಾರ, ಮತ್ತು ಪಾಟೀಲರ ಬಗ್ಗೆ, ಕಾಂಪನ್‌ಸೇಷನ್ ಅಲೋಯನ್ಸ್ ವಿಚಾರದಲ್ಲಿ ಹೇಳಿದ್ದಾರೆ. ಅದನ್ನು ನಾನು ಕೊಡುತ್ತೇನೆ. ಅವರೆಲ್ಲರಿಗೂ ಕಾಂಪನ್‌ಸೇಷನ್ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಇವತ್ತು ವಿಲೇಜ್ ಅಕೌಂಟೆಂಟ್ ಬಗ್ಗೆ ಎಲ್ಲಾ ಸದಸ್ಯರು ಹೇಳಿದ್ದಾರೆ. ಅವರು ಆಧುನಿಕ ಬ್ರಹ್ಮನೆಂದು ಹೇಳಿದ್ದಾರೆ. ಅದರಲ್ಲಿ ಸತ್ಯಾಂಶ ಇದೆ. ಇವತ್ತು ಪ್ಲಾನಿಂಗ್ ಕಮೀಷನ್ ದೆಹಲಿಯಲ್ಲಾಗಲಿ, ಇಲ್ಲಾಗಲಿ ಹೆಚ್ಚಾಗಿ ಅಂಕಿಅಂಶಗಳನ್ನು ಆಧಾರಿಸುವುದು ಈ ಬ್ರಹ್ಮನ ಲಿಪಿಯ ಮೇಲೆ. ರಾಷ್ಟ್ರದ ಹಣೆಬರಹ, ವ್ಯಕ್ತಿಗಳ ಹಣೆಬಹರ ಬರೆಯತಕ್ಕವರು ಇವರೇ ಆಗಿದ್ದಾರೆ. ಇವರು ಗ್ರಾಮದಲ್ಲಿ ಇರುವುದಿಲ್ಲ. ಹೆಚ್ಚಾಗಿ ಇರತಕ್ಕದ್ದು ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ, ದೊಡ್ಡ ದೊಡ್ಡ ಷಹರುಗಳಲ್ಲಿ. ಇನ್ನು ವಿಲೇಜ್ ಅಕೌಂಟೆಂಟ್ ಹುದ್ದೆಗಳು ಬೇಕಾದಷ್ಟು ಖಾಲಿ ಇವೆ. ಅವನ್ನು ತುಂಬಬೇಕು. ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕಾಗಿದೆ. ಆದರೂ ಅವರ ಚಟುವಟಿಕೆಗಳು ಬದಲಾವಣೆಯಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇದರ ಬಗ್ಗೆ ಆಲೋಚನೆ ಮಾಡುತ್ತಿದ್ದೇನೆ ಪ್ರತಿಯೊಂದು ತಾಲ್ಲೂಕ್ ಆಫೀಸಿನಲ್ಲಿ ಎಲ್ಲಾ ರೆಕಾರ್ಡ್‌ಗಳನ್ನು ಸಂಗ್ರಹ ಮಾಡತಕ್ಕದ್ದು ನಮ್ಮ ಇಚ್ಛೆ. ಅಲ್ಲಿ ಪಹಣಿಯಿಂದ ಎಲ್ಲಾ ರೆಕಾರ್ಡ್‌ಗಳನ್ನು ಸರಿಯಾಗಿ ಇಡತಕ್ಕದ್ದನ್ನು ಆಲೋಚನೆ ಮಾಡುತ್ತಿದ್ದೇವೆ. ಎರಡನೆಯದಾಗಿ ಪ್ರತಿಯೊಂದು ಆಫೀಸಿಗೂ ಕಾಪಿಂಗ್ ಮಿಷನ್ ಕೊಡತಕ್ಕದ್ದು. ಯಾರೇ ಇವತ್ತು ಕಾಪಿಬೇಕು ಎಂದರೆ ತಾಲ್ಲೂಕ್ ಆಫೀಸಿನಲ್ಲಿ ಅರ್ಜಿ ಕೊಟ್ಟರೆ ನಿಗದಿತ ಟೈಮಿನಲ್ಲಿ ಕಾಪಿ ಸಿಗುವ ವ್ಯವಸ್ಥೆ ಮಾಡುತ್ತೇವೆ. ಅರ್ಜಿ ಕೊಟ್ಟ ಕೂಡಲೆ ಕಾಪಿ ಕೊಡುತ್ತಾರೆ. ಗುಲ್ಬರ್ಗದಲ್ಲಿ ಈ ವ್ಯವಸ್ಥೆಯನ್ನು ಪ್ರಾರಂಭ ಮಾಡಿದ ಮೇಲೆ ಮೂರು ಹಳ್ಳಿಗಳನ್ನು ಪ್ರಾಯೋಗಿಕವಾಗಿ ತೆಗೆದುಕೊಂಡಿದ್ದೇವೆ. ಯಾವುದೇ ರೆಕಾರ್ಡ್ ಬೇಕಾದರೆ ೧೫ ನಿಮಿಷದಲ್ಲಿ ಕೊಡತಕ್ಕದು ಸಾಧ್ಯ ಅದು ಇನ್ನು ಪ್ರಾಯೋಗಿಕ ಹಂತದಲ್ಲಿದೆ. ಶ್ಯಾನೋಭೋಗರಿಗೆ ಅಧಿಕಾರವನ್ನು ಕೊಡುತ್ತಿದ್ದೇವೆ. ಇದಕ್ಕೆ ಸೂಕ್ತ ತಿದ್ದುಪಡಿ ಮಾಡುತ್ತಿದ್ದೇವೆ. ತಾಲ್ಲೂಕು ಆಫೀಸಿನಲ್ಲಿ ಕಾಪಿ ಕೊಡತಕ್ಕ ವ್ಯವಸ್ಥೆ ಜಾರಿಗೆ ಬಂದರೆ ಈ ರೀತಿ ತೊಂದರೆಯಾಗುವುದು ನಿಂತು ಹೋಗುತ್ತದೆ. ಆಗ ಅವರೇ ಹೆಚ್ಚು ಅಧಿಕಾರವನ್ನು ಚಲಾಯಿಸುತ್ತಾರೆ. ಈ ವಿಚಾರದಲ್ಲಿ ಸರ್ಕಾರ ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಮತ್ತು ಸೂಕ್ತವಾದ ನಿಯಮಾವಳಿಯನ್ನು ತಿದ್ದುಪಡಿ ಮಾಡತಕ್ಕ ವಿಚಾರದಲ್ಲಿ ಆಲೋಚನೆ ಮಾಡುತ್ತಿದ್ದೇವೆ. ಜೊತೆಗೆ ಈ ಬ್ರಹ್ಮರು ನಿಯಮಾವಳಿಯಲ್ಲಿ ಬದಲಾವಣೆ ಮಾಡಿದ ನಂತರ ಅವರಿಗೆ ಯಾವುದಾದರೊಂದು ರೀತಿಯಲ್ಲಿ ಶಿಕ್ಷೆಯನ್ನು ಕೊಡುತ್ತಾರೆ. ಇದಕ್ಕೆ ಸಂಬಂಧಪಟ್ಟ ನಿಯಮಾವಳಿಯಲ್ಲಿ ತಿದ್ದುಪಡಿ ಮಾಡುತ್ತೇನೆ, ಇದರ ಜೊತೆಗೆ ಹೆಚ್ಚು ಅಧಿಕಾರವನ್ನು ಜಿಲ್ಲಾ ಪರಿಷತ್ ಆದಮೇಲೆ ಮಂಡಳಿ ಪಂಚಾಯಿತಿ ಆದಮೇಲೆ ಅವರಿಗೆ ಒದಗಿಸತಕ್ಕದು ಅವಶ್ಯಕ ಏಕೆಂದರೆ ಅಲ್ಲಿ ಜನರ ಪ್ರತಿನಿಧಿಗಳು ಇರುತ್ತಾರೆ. ಅಲ್ಲಿ ಈ ಶ್ಯಾನುಭೋಗರು ಯಾವ ಯಾವ ಕೆಲಸಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ರೆಕಾರ್ಡ್ಸ್ ಆಫ್ ರೈಟ್ಸ್ ವಿಚಾರದಲ್ಲಿ ಏನು ಹೇಳುತ್ತಿದ್ದೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದಹಾಗೆ ಒಂದು ಅರ್ಜಿಯನ್ನು ಕೊಟ್ಟರೆ ತಹಶೀಲ್ದಾರ್ ಆಫೀಸಿನಲ್ಲಿ ಕಾಪಿ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಹಿಂದೆ ಇದ್ದ ಪದ್ಧತಿ, ತಾಲ್ಲೂಕು ಆಫೀಸಿನಲ್ಲಿ ಮೊದಲು ಕೂಡ ಕಾಪಿ ಸಿಗುತ್ತಿತ್ತು, ಈಗ ನೀವು ಏನು ಮಾಡಿದ್ದೀರಿ ? ಅವರು ಕಾಪಿ ಕೇಳಿದಾಗ ಪುಸ್ತಕದಿಂದ ಕಿತ್ತು ಅದನ್ನು ಕಾಪಿ ಮಾಡಿಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ಕಾಪಿಯನ್ನು ತಾಲ್ಲೂಕು ಆಫೀಸಿನಲ್ಲಿ ಕೊಟ್ಟರೇನು ? ಅಥವಾ ವಿಲೇಜ್ ಅಕೌಂಟೆಂಟ್ ಕೊಟ್ಟರೇನು ?

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ನನಗೆ ಇದರ ಬಗ್ಗೆ ಚೆನ್ನಾಗಿ ಗೊತ್ತಿದೆ, ನಾನು ಇದರಲ್ಲಿ ಕೆಲಸ ಮಾಡಿದ್ದೇನೆ, ಇದರ ರೆಕಾರ್ಡ್ ಏನು ಇದೆ ಅದನ್ನು ನಾನು ಮೊದಲು ಹೇಳಿ ಮುಗಿಸುತ್ತೇನೆ. ನಾನು

ಮುಂಗಿಸಿದ ಮೇಲೆ ನಿಮಗೆ ಆಮೇಲೆ ಅರ್ಥವಾಗುತ್ತದೆ. ಎಲ್ಲಾ ತಾಲ್ಲೂಕಿನಲ್ಲೂ ಯಾವ ಯಾವ ಜಮೀನು ಯಾರ ಯಾರ ಹೆಸರಿನಲ್ಲಿದೆ, ಯಾರಿಗೆ ಮಂಜೂರಾಗಿದೆ ಆ ಜಮೀನು ಸರ್ಕಾರದಲ್ಲಿದೆಯೋ ? ಇಲ್ಲವೆ ಎನ್ನುವುದರ ಬಗ್ಗೆ ಆ ರೆಕಾರ್ಡ್ಸ್ ರೂಮಿಗೆ ತಹಶೀಲ್ದಾರ್ ಆಗಲಿ, ಅಸಿಸ್ಟೆಂಟ್ ಕಮೀಷನ್‌ರಾಗಲಿ, ಡೆಪ್ಯೂಟಿ ಕಮೀಷನ್‌ರಾಗಲೀ ಹೋಗಿ ನೋಡಿದ್ದಾರೆಯೆ ? ಏಕೆಂದರೆ ಈ ರೀತಿ ನೋಡಿರುವುದು ಬಹಳ ವಿರಳ. ಯಾರು ರೆವಿನ್ಯೂ ಅಧಿಕಾರಿಗಳು ಇದ್ದಾರೆ ಅವರು ರೆಕಾರ್ಡ್ಸ್ ಆಫ್ ರೈಟ್ಸ್ ಅಂದರೆ ಏನು ಎನ್ನುವ ತಿಳಿಯದಿರತಕ್ಕವರು ಬಹಳ ಜನ ಇದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ರೆಕಾರ್ಡ್ಸ್ ಯಾವ ರೀತಿ ಇಡಬೇಕು, ಯಾವ ರೀತಿ ಸಂರಕ್ಷಣೆ ಮಾಡಬೇಕು, ಮುಂತಾದ ವಿಚಾರಗಳು ಅವರಿಗೆ ತಿಳಿದಿರಬೇಕು. ಇದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಹೇಳಿದಂತೆ ಗೊತ್ತಿಲ್ಲದಿರತಕ್ಕ ಜನಗಳು ಇರಬಹುದು, ಆದರೆ, ಸಾಮಾನ್ಯವಾಗಿ ಹೆಚ್ಚಾಗಿ ಅಧಿಕಾರಿಗಳಿಗೆ ಗೊತ್ತಿದೆ. ಆದರೆ ಈ ರೀತಿ ಆ ರೆಕಾರ್ಡ್ಸ್ ರೂಮಿಗೆ ಹೋಗಿ ನೋಡುತ್ತಾರೋ, ಇಲ್ಲವೋ ಇದು ಬೇರೆ ವಿಚಾರ. ಇತ್ತೀಚೆಗೆ ನಾನು ಜನ ಸಂಪರ್ಕ ಸಭೆಗಳನ್ನು ಏರ್ಪಾಡಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಅಲ್ಲಿ ಇಂತಹ ವಿಚಾರಗಳನ್ನು ತೆಗೆದುಕೊಂಡು ಅಲ್ಲಿಯೇ ಪರಿಹಾರ ಮಾಡುತ್ತೇವೆ, ಈ ಒಂದು ವ್ಯವಸ್ಥೆ ಇದೆ.

ನಾಡ ಪದ್ಧತಿ ತಮಗೆ ಗೊತ್ತಿದೆ. ಅಲ್ಲಿ ಡೆಪ್ಯುಟಿ ತಹಸೀಲ್‌ದಾರರನ್ನು ಏರ್ಪಾಡು ಮಾಡಿದ್ದೇವೆ. ಅವರಿಗೇನೇ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆ. ರೆಕಾರ್ಡ್ ಆಫ್ ರೈಟ್ಸ್ ಮತ್ತು ಮ್ಯುಟೇಷನ್ ಎಂಟ್ರೀಸನ್ನು ಅಪ್‌ಟುಡೇಟ್ ಮಾಡತಕ್ಕಂಥ ಕೆಲಸಕ್ಕಾಗಿ ಎಂಟು ಕಡೆ ಪ್ರಾರಂಭ ಮಾಡಿದ್ದೇವೆ. ಈಗ ಗ್ರಾಮ ಸಂದರ್ಶನ ಸಭೆಗಳನ್ನು ಮಾಡುತ್ತಿದ್ದಾರೆ. ರೆಕಾರ್ಡ್ ಆಫ್ ರೈಟ್ಸ್ ವಾಲೆಂಟರಿಯಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ. ಅಲ್ಲಲ್ಲೇ ತಿಳುವಳಿಕೆಗಳನ್ನು ಕೊಟ್ಟಿದ್ದೇವೆ. ಟ್ರೈನಿಂಗ್ ಆಫ್ ಆಫೀಸರ್ಸ್ ಅದನ್ನು ಮಾಡುತ್ತಿದ್ದೇವೆ. ಕೆಲವು ಆಫೀಸರ್ಸ್‌ಗಳಿಗೆ ರೆವೆನ್ಯೂ ಆಕ್ಟ್ ಗೊತ್ತಿರಲಿಲ್ಲ. ಇದರಿಂದ ಏನಾಗಿದೆ ಎಂದರೆ ಹೈಕೋರ್ಟಿನಲ್ಲಿ ಕೇಸ್‌ಗಳು ಹೋದರೆ ರಿಮ್ಯಾಂಡ್ ಆಗಿ ವಾಪಸ್ ಬರುತ್ತಿದೆ. ಕೆಲವು ಆರ್ಡರ್ಸ್‌ಗಳನ್ನು ಸರಿಯಾಗಿ ಬರೆಯದೆ ಇರುವುದರಿಂದ ಈ ರೀತಿಯಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಆರ್. ಆರ್. ಇನ್‌ಡೆಕ್ಸ್ ೪-೫ ಹಿಂದೆ ಇದ್ದುದು ಚೆನ್ನಾಗಿ ಇರುತ್ತಿತ್ತು. ಈಗ ಕಂಬೈಂಡ್ ಫಾರ್ಮ್ ಮಾಡಿರುತ್ತೀರಿ. ಇದರಲ್ಲಿ ಏನೂ ಅರ್ಥವಾಗುವುದಿಲ್ಲಲ್ಲಿ ೯ನೇ ಕಾಲಂನಲ್ಲಿ ಎರಡು ಐಟಂ ಬರೆಯುತ್ತಿದ್ದಾರೆ. ಮೊದಲು ಆರ್. ಆರ್. ಇಂಡೆಕ್ಸ್‌ನಲ್ಲಿ ಎಲ್ಲಾ ಚರಿತ್ರೆಯನ್ನು ಬರೆಯುತ್ತಿದ್ದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮೂವತ್ತು ವರ್ಷಗಳ ಕಾಲ ರೆಕಾರ್ಡ್ ಆಫ್ ರೈಟ್ಸ್ ಮೇಲೆ ಸುಪ್ರೀಂ ಕೋರ್ಟಿನಲ್ಲಿ ವಕೀಲಿ ಮಾಡಿದ್ದೇನೆ, ರೆಕಾರ್ಡ್ ಆಫ್ ರೈಟ್ಸ್‌ನಲ್ಲಿ ಫೀನಲ್ ಪ್ರಾವಿಷನ್ ಇಲ್ಲದೆ ಇದ್ದರೆ ಬಹಳ ಕಷ್ಟವಾಗುತ್ತದೆ. ಫೀನಲ್ ಪ್ರಾವಿಷನ್ ತರುವ ಬಗ್ಗೆ ಆಲೋಚನೆ ಮಾಡಿದ್ದೇವೆ.

ಇನ್ನು ವಾಟರ್ ರೇಟ್ ಬಗ್ಗೆ ಕೆಲವು ವಿಷಯ ಹೇಳಬೇಕಾಗಿದೆ, ಇದರ ಬಗ್ಗೆ ಒಂದು ಮಹತ್ವದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ೧೯೬೪ರಲ್ಲಿ ಈ ಆಕ್ಟ್ ಬಂದಮೇಲೆ, ಮೊದಲಿಗೆ ೧೯೬೫ರ. ಇದು ರಿವೈಸ್ ಆಯಿತು. ೧೯೬೪ರಲ್ಲೂ ಬಂದರೂ ಕೂಡ ರೈತರು ಹೈಕೋರ್ಟಿಗೆ ಹೋದರು ಟ್ಯಾಂಕ್ ಇರಿಗೇಷನ್‌ಗೆ ವಾಟರ್ ರೇಟ್ ಬೇಡವೆನ್ನುವ ವಿಚಾರವನ್ನು ಹೇಳಿದ್ದಾರೆ. ೧೯೭೮ರಲ್ಲಿ ಮತ್ತೆ ಇದು ರಿವೈಸ್ ಆಯಿತು. ೧೯೮೧-೮೨ರಲ್ಲಿ ರೈತರು ನಡೆಸಿದ ಚಳುವಳಿಯಲ್ಲಿ ಮುಖ್ಯವಾದ ಬೇಡಿಕೆ ಇದರ ಬಗ್ಗೆ ಇತ್ತು. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ, ೨೪ನೇ ಜುಲೈ ೧೯೮೫ರಿಂದ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ಮೇಜರ್ ಇರಿಗೇಷನ್ ಮೀಡಿಯಂ ಇರಿಗೇಷನ್ ಮೈನರ್ ಇರಿಗೇಷನ್ ಎಂದು ಈ ರೀತಿಯಾಗಿ ಕ್ಲಾಸಿಫಿಕೇಷನ್ ಮಾಡಿದ್ದೇವೆ. ೧೯೭೮ರಲ್ಲಿ ಏನು ವಾಟರ್ ರೇಟ್ ರಿವೈಸ್ ಆಯಿತೋ ಅದರ ಮೇಲೆ ಬಾಕಿ ಮಾಡಿ ವಸೂಲು ಮಾಡಲು ಹೋಗಿದ್ದರು. ಈಗ ಹೊಸ ರೇಟ್ ಜಾರಿಗೆ ಬರುವವರೆಗೆ ೧-೭-೬೫ ಏನು ವಾಟರ್ ರೇಟ್ ಇತ್ತೋ ಅದನ್ನು ವಸೂಲು ಮಾಡಬೇಕೆಂದು ಹೇಳಿದ್ದೇವೆ. ಹಿಂದೆ ಯಾವ ಯಾವ ರೇಟ್ ಇತ್ತು ಎಂಬುದನ್ನು ಹೇಳುತ್ತೇವೆ. ೧-೭-೭೮ರಲ್ಲಿ ಕಬ್ಬಿಗೆ ೨೦೦ ರೂಪಾಯಿಗಳು, ೧೯೮೦ರಲ್ಲಿ ೨೦೦ ರೂಪಾಯಿ ಇದ್ದುದನ್ನು ಈಗ ನಾವು

೧೫೦ ರೂಪಾಯಿ ಮಾಡಿದ್ದೇವೆ. ಷುಗರ್ ಕೇನ್ ೧೨ ತಿಂಗಳಲ್ಲಿ ಬೆಳೆಯತಕ್ಕಂಥದ್ದು ಇದಕ್ಕೆ ೧೯೭೮ರಲ್ಲಿ ೩೦೦ ರೂಪಾಯಿಗಳು ಇತ್ತು, ೧೯೮೧ರಲ್ಲಿ ೨೫ ರೂಪಾಯಿಗಳು ಇತ್ತು, ೧೯೭೬ರಲ್ಲಿ ೧೨೦ ರೂಪಾಯಿ ಇತ್ತು, ಪ್ಯಾಡಿ. ೧೯೭೬ರಲ್ಲಿ ೨೦ ರೂಪಾಯಿ ೧೯೭೮ರಲ್ಲಿ ೨೫ ರೂಪಾಯಿ ೧೯೮೦ರಲ್ಲಿ ೬೪, ೧೯೮೧ರಲ್ಲಿ ೩೨ ರೂಪಾಯಿ ಈಗ ೩೫ ರೂಪಾಯಿಗಳನ್ನು ಮಾಡಿದ್ದೇವೆ. ವೀಟ್ (ರೈನ್ ಫೆಡ್) ೧೯೭೬ರಲ್ಲಿ ೩೦, ೧೯೭೮ರಲ್ಲಿ ೩೫, ೧೯೮೦ರಲ್ಲಿ ೩೨, ಈಗ ೨೨ ರೂಪಾಯಿಗಳನ್ನು ಮಾಡಿದ್ದೇವೆ. ಜವಾರ್—೧೯೭೮ರಲ್ಲಿ ೧೮ ೧೯೭೮ರಲ್ಲಿ ೨೦, ೧೯೮೦ರಲ್ಲಿ ೩೩, ೧೯೮೩ರಲ್ಲಿ ೨೦ ೧೯೮೪ರಲ್ಲಿ ೨೪ ರೂಪಾಯಿಗಳನ್ನು ಮಾಡಿದ್ದೇವೆ. ಗ್ರೌಂಡ್–ನೆಟ್–೧೮–೨೦–೬೦–೨೪–೨೪, ಟೊಬ್ಯಾಕೊ ೧೮–೩೨–೮೦ ಈಗ ೨೪ಕ್ಕೆ ಇಳಿಸಿದ್ದೇವೆ. ೧೯೭೬ಕ್ಕಿಂತ ಹೆಚ್ಚು ಮಾಡಿದ್ದೇವೆ, ೧೯೭೮–೮೦ಕ್ಕಿಂತ ಸ್ವಲ್ಪ ಕಡಿಮೆ ಮಾಡಿದ್ದೇವೆ. ಈಗ ೭ ಕೋಟಿ ರೂಪಾಯಿಗಳು ವಸೂಲಾಗಿದೆ. ಡಿಫರೆನ್ಸ್ ವಸೂಲಿ ಮಾಡತಕ್ಕಂಥದ್ದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿಯ ತನಕ ವಾಟರ್ ರೇಟ್ ಅರಿಯರ್ಸ್ ಏನು ಇದೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮಾರು ೨೦–೨೫ ಕೋಟಿ ರೂಪಾಯಿಗಳು ಇರಬಹುದು. ೧೯೭೮ರ ರೇಟಿನ ಪ್ರಕಾರ ಸರ್ಕಾರಕ್ಕೆ ೧೭ ಕೋಟಿ ರೂಪಾಯಿಗಳು ಬರುತ್ತಿತ್ತು. ಆದರೆ ಈಗಿನ ೧೯೭೬ರ ರೇಟಿನ ಪ್ರಕಾರ ೧೨ ಕೋಟಿ ರೂಪಾಯಿಗಳು ಬರುತ್ತದೆ. ಹೋದವರ್ಷ ೭ ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದೇವೆ. ನೀರು ಕೊಡದೆ ಇದ್ದರೆ ವಸೂಲು ಮಾಡುವುದಿಲ್ಲ. ಲ್ಯಾಂಡ್ ರಿಫಾರ್ಮ್ ಆಕ್ಟ್ ಬಂದಮೇಲೆ ಕೆಲವು ಪ್ರಕರಣಗಳು ಪುನ: ಪುನಃ ಹೈಕೋರ್ಟಿನಿಂದ ರಿಮ್ಯಾಂಡ್ ಆಗಿ ಬರತಕ್ಕದ್ದು ನಡೆಯುತ್ತಿದೆ. ಆದ್ದರಿಂದ ಡಿವಿಷನಲ್ ಲೆವೆಲ್ ಮತ್ತು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಒಂದು ಡಿಸ್ಟ್ರಿಕ್ಟ್ ಜಡ್ಜ್ ಟ್ರಿಬ್ಯುನಲ್ ಮಾಡಬೇಕೆಂದು ನಿರ್ಧರಿಸಿದ್ದೇವೆ. ಅವರು ಅಪೀಲ್, ಎವಿಡೆನ್ಸ್ ಇವೆಲ್ಲವನ್ನೂ ರೆಕಾರ್ಡ್ ಮಾಡಿ ನಿರ್ಣಯವನ್ನು ಬೇಗ ಕೊಡಲು ಅನುಕೂಲವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಸಂವಿಧಾನ ೨೨೬ನೆ ಕಾಲಂನ ಪ್ರಕಾರ ಹೈಕೋರ್ಟಿಗೆ ಹೋಗುವಂಥ ಅವಕಾಶ ಇದೆಯಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಕೊನೆಯ ನಿರ್ಣಯವನ್ನು ಕೊಡುವುದಿಲ್ಲ. ಇವುಗಳೆಲ್ಲ ಮೂರು ನಾಲ್ಕು ಸಲ ರಿಮ್ಯಾಂಡ್ ಆಗಿದೆ. ಟ್ರಿಬ್ಯುನಲ್‌ನಲ್ಲಿ ಅನೇಕ ಸಲ ಏನಾಗುತ್ತದೆ ಎವಿಡೆನ್ಸ್‌ನ್ನು ಸರಿಯಾಗಿ ರೆಕಾರ್ಡ್ ಮಾಡುವುದಿಲ್ಲ. ಆದ್ದರಿಂದ ಟ್ರಿಬ್ಯುನಲ್ ನಿರ್ಧಾರದ ಮೇಲೆ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಒಬ್ಬ ಜ್ಯುಡಿಷಿಯಲ್ ಆಫೀಸರ್, ಒಬ್ಬ ರೆವಿನ್ಯೂ ಆಫೀಸರ್ ಟ್ರಿಬ್ಯುನಲ್ ಮಾಡಿದರೆ ಅಡಿಷನಲ್ ಎವಿಡೆನ್ಸನ್ನು ರೆಕಾರ್ಡ್ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ರಿಮ್ಯಾಂಡೆಡ್ ಕೇಸಸ್‌ಗೆ ಈ ರೀತಿ ಮಾಡುವುದು ಅವಶ್ಯಕತೆ ಇರುತ್ತದೆ. ೧೯೮೩ರಲ್ಲಿ ಎಲ್ಲ ಟ್ರಿಬ್ಯುನಲ್‌ಗಳಿಗೂ ಫೈನಲ್ ಆರ್ಡರ್ಸ್ ಕೊಟ್ಟಿರುತ್ತಾರೆ. ಈಗ ೬೦ ಸಾವಿರ ಕೇಸಸ್‌ಗಳು ಹೈಕೋರ್ಟಿಗೆ ಹೋಗಿವೆ. ಅದರಲ್ಲಿ ೨೬ ಸಾವಿರ ರಿಮ್ಯಾಂಡ್ ಆಗಿದೆ ಇನ್ನೂ ೪೦ ಸಾವಿರ ರಿಮ್ಯಾಂಡ್ ಆಗಿ ಬರುತ್ತದೆ. ಸಿಂಗಲ್‌ವಿಂಡೋ ಸಿಸ್ಟಮ್‌ನ್ನು ಜಿಲ್ಲಾ ತಹಸೀಲ್ದಾರ್ ಮತ್ತು ಸಬ್ ಡಿವಿಜನ್ ಮಟ್ಟದಲ್ಲಿ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದೇವೆ. ಕನ್‌ವರ್ಷನ್ ಕೇಸಸ್‌ಗಳನ್ನು ಬೇಗ ಇತ್ಯರ್ಥ ಮಾಡಬೇಕೆಂದು ಪ್ರಯತ್ನ ಪಟ್ಟಿದ್ದೇವೆ. ಕೃಷಿ ಭೂಮಿಯನ್ನು ಕೃಷಿಯೇತರ ಉಪಯೋಗಕ್ಕಾಗಿ ಬಳಸಬೇಕಾದರೆ ಈಗ ಟೌನ್ ಪ್ಲಾನಿಂಗ್ ಮುನಿಸಿಪಾಲಿಟಿ ಹಾಗೂ ಬೇರೆ ಬೇರೆ ಇಲಾಖೆಗಳ ಪರ್ಮಿಷನ್ ಬೇಕಾಗುತ್ತದೆ. ಸಿಂಗಲ್ ವಿಂಡೋ ಸಿಸ್ಟಮ್‌ನಿಂದ ಇದೆಲ್ಲ ಅಧಿಕಾರಿಗಳು ಒಂದು ಕಡೆ ಸೇರಿ ಈ ಕೇಸಸ್‌ಗಳನ್ನು ವಿಲೇವಾರಿ ಮಾಡತಕ್ಕಂಥದ್ದಕ್ಕೆ ಅನುಕೂಲವಾಗುತ್ತದೆ. ಬಂದಂಥ ಅರ್ಜಿಗಳನ್ನು ನಿಗದಿಯಾದ ವೇಳೆಯಲ್ಲಿ ಉತ್ತರ ಕೊಡಬೇಕೆಂದು ಮಾಡಿದ್ದೇವೆ. ಚಿಕ್ಕಮಗಳೂರಿನಲ್ಲಿ ಈ ರೀತಿ ಪ್ರಯೋಗ ಮಾಡಿದ್ದೇವೆ.

ಈಗ ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೇವೆ. ಸಾವಿರಾರು ಅರ್ಜಿಗಳು ಬರುತ್ತವೆ. ಅವರಿಗೆ ಇಂತಿಂಥ ದಿವಸ ಬರಬೇಕು ಅಂತ ಕಾರ್ಡು ಬರುತ್ತದೆ Either affirmative or negatiive reply will be there. ಅಸಿಸ್ಟೆಂಟ್ ಕಮೀಶನರ್ ಅವರ ಕಛೇರಿಗೆ ಇಂಥಾ ದಿವಸ ಹೋಗಬೇಕೆಂದು ಹೇಳಲಾಗುತ್ತದೆ. Time bound disposal of the matters by the Deputy Commissioners, Sub-Divisional Officers and Tahasildars.

ಈ ರೀತಿ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಲ್ಯಾಂಡ್ ಅಕ್ವಿಜಿಶನ್ ವಿಚಾರವಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಒಪ್ಪಿಕೊಳ್ಳುತ್ತೇನೆ, ಇವತ್ತು ಭೂಮಿ ಕಳೆದುಕೊಂಡವರಿಗೆ ಆದಷ್ಟು ಬೇಗ ಪರಿಹಾರಧನ ಕೊಡಬೇಕು. ಇದರಲ್ಲಿ ತಡವಾಗಿದೆ. ಕೆಲವು ಪ್ರಕರಣಗಳು ಎಂಟು ಹತ್ತು ವರ್ಷಗಳಾದರೂ ಅವಾರ್ಡ್ ಆಗಿಲ್ಲ, ಕೆಲವು ಪ್ರಕರಣಗಳಲ್ಲಿ ಅವಾರ್ಡ್ ಆಗಿದ್ದೂ ಹಣ ಸಿಕ್ಕಿಲ್ಲ. ಈಗ ಹೊಸದಾಗಿ ಕೇಂದ್ರದ ಒಂದು ಕಾನೂನು ಬಂದಿದೆ. ಆದರಲ್ಲಿ ಮೂರು ವರ್ಷಕ್ಕಿಂತ ಹೆಚ್ಚು ಅವಧಿ ಇದ್ದಲ್ಲಿ ಲ್ಯಾಪ್ಸ್ ಆಗಿ ಹೋಗುತ್ತದೆ. ದೊಡ್ಡದೊಡ್ಡ ಪ್ರಾಜೆಕ್ಟ್‌ಗಳಿಗೆ ಭೂಮಿ ಖರೀದಿ ಮಾಡುವಾಗ ಮಾರ್ಕೆಟ್‌ಪ್ರೈಸ್‌ಗೆ ಹತ್ತಿರ ಹತ್ತಿರ ಬೆಲೆ ಕೊಟ್ಟರೆ ಭೂಮಿ ಕಳೆದುಕೊಂಡವರು ಒಪ್ಪಿಗೆ ಕೊಡುತ್ತಾರೆ. ಕನ್ಸೆಂಟ್ ಡಿಕ್ರಿ ಇದ್ದರೆ ಕೋರ್ಟಿಗೆ ಹೋಗಲು ಅವಕಾಶ ಇಲ್ಲ. ಇದನ್ನು ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ. ಒಂದು ಸಲ ಕನ್ಸೆಂಟ್ ಡಿಕ್ರಿ ಆದ ಮೇಲೆ ಕೋರ್ಟಿಗೆ ಹೋಗಲಿಕ್ಕೆ ಅವಕಾಶ ಇಲ್ಲ. ಅದಕ್ಕಾಗಿ ಅಮೆಂಡ್‌ಮೆಂಟ್ ಮಾಡುತ್ತಿದ್ದೇವೆ. ಕೇಂದ್ರದ ಶಾಸನಕ್ಕೆ ರಾಜ್ಯದ ತಿದ್ದುಪಡಿ ಅವಶ್ಯಕತೆ ಇದೆ. ಮಾಲ್‌ಪ್ರಾಕ್ಟೀಸ್ ಚೆಕ್ ಮಾಡಲಿಕ್ಕೆ ಸ್ಪೆಶಲ್ ಸೆಲ್ ಇದೆ. ಸರ್‌ಪ್ರೈಸ್ ಚೆಕ್ ಎಲ್ಲಾ ಮಾಡುತ್ತಿದ್ದೇವೆ. ಅಭಾವಪರಿಸ್ಥಿತಿ ಬಗ್ಗೆ ನಾನು ಹೆಚ್ಚು ವಿಚಾರ ಹೇಳುವುದಿಲ್ಲ. ಈಗಾಗಲೇ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಈ ತಿಂಗಳ ೧೫ನೇ ತಾರೀಕಿನವರೆಗೆ ಕೆಲಸ ನಡೆಯಬೇಕೆಂಬ ದೃಷ್ಟಿಯಿಂದ ೬ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಬಿಡುಗಡೆ ಮಾಡಿದ್ದೇವೆ. ಒಂದು ವಿಚಾರವನ್ನು ಈ ಮನೆಯ ಗಮನಕ್ಕೆ ತರಬೇಕಾಗಿದೆ. ಅದೇನೆಂದರೆ, ಕಳೆದ ಎರಡು ವಾರದಿಂದ ಸೆಂಟ್ರಲ್ ಟೀಮ್‌ನವರು ಬಂದು ಹೋದಮೇಲೆ ಎಲ್ಲಿಯೂ ಮಳೆಯಾಗಿಲ್ಲ. ಮಲೆನಾಡು ಪ್ರದೇಶದಲ್ಲಿ ಭತ್ತದ ಪೈರು ಒಣಗಿ ಹೋಗಿವೆ. ಯಾವ ಕೆರೆಯಲ್ಲೂ ನೀರು ಇಲ್ಲ. ಇದೇ ಪರಿಸ್ಥಿತಿ ಮುಂದುವರೆದರೆ, ಈ ರಾಜ್ಯ ಇದುವರೆಗೂ ಎದುರಿಸದೇ ಇರತಕ್ಕಂಥ ಭೀಕರ ಬರಗಾಲ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಅದಕ್ಕಾಗಿ ಸರ್ಕಾರ ಎಲ್ಲಾ ಸಿದ್ಧತೆಗಳನ್ನು ಮಾಡಿ, ಎಲ್ಲರಿಗೂ ಕೆಲಸ ಕೊಡುವುದರಲ್ಲಿ, ಕುಡಿಯುವ ನೀರಿನ ವ್ಯವಸ್ಥೆ ಆಹಾರ ಧಾನ್ಯ ಒದಗಿಸುವಂತಾದ್ದು, ದನಕರುಗಳಿಗೆ ಮೇವು, ಕೊಡತಕ್ಕದ್ದು ಎಲ್ಲಾ ವಿಚಾರಗಳ ಬಗ್ಗೆ ಗಮನ ಕೊಟ್ಟಿದ್ದೇವೆ. ಹಣ ಇದೆ. ಇವತ್ತು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಿದ್ದೇವೆ. ಈ ಮೇವಿಗಾಗಲೀ, ಹುಲ್ಲಾಗಲೀ ಕೊಂಡುಕೊಂಡು ಟ್ರಾನ್ಸ್‌ಪೋರ್ಟ್ ಮಾಡಿ ರೈತರಿಗೆ ಕೊಡಬೇಕೆಂದು ಆಜ್ಞೆ ಮಾಡಿದ್ದೇವೆ. ಆದರೆ ಜಿಲ್ಲಾಧಿಕಾರಿಗಳು ಮೇವೇ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಈಗ ಮೇವು ದೊರೆಯುತ್ತಿಲ್ಲ. ಮೊನ್ನೆ ನಾನು ಗದಗ್ ತಾಲ್ಲೂಕಿಗೆ ಹೋಗಿದ್ದೆ. ಅಲ್ಲಿ ರೈತರು ದುಡ್ಡು ಕೊಡುತ್ತೇವೆ ಮೇವು ಕೊಡಿ ಎಂದು ಹೇಳುತ್ತಿದ್ದಾರೆ. ಇದಕ್ಕೆ ಮುಂದೆ ಏನು ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದ ಫಾರ್ಮ್‌ಗಳು ಬಳ್ಳಾರಿಯಲ್ಲಿ ನಾಲ್ಕು ಸಾವಿರ ಎಕರೆ ಹಾಗೆಯೇ ಇದೆ. ಅಲ್ಲಿ ಮತ್ತು ನಮ್ಮ ಫಾರ್ಮ್‌ಗಳಲ್ಲಿ ಒಪ್ಪಿಗೆ ಪಡೆದು ಅಲ್ಲಿ ಹುಲ್ಲು ಬೆಳೆಯುವ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಈ ವರ್ಷ ಬೆಳೆಸಿದರೆ ಮುಂದಿನ ವರ್ಷ ಮೇವು ಕೊಡಬಹುದು. ಇವತ್ತು ಮೇವು ಹೊರರಾಜ್ಯಗಳಿಗೆ ಹೋಗುವುದನ್ನು ಪ್ರತಿಬಂಧ ಮಾಡಿದ್ದೇವೆ. ಬೇರೆ ರಾಜ್ಯಗಳೊಡನೆ ಸಂಪರ್ಕ ನಡೆಸಿ ಅಲ್ಲಿಂದ ಮೇವನ್ನು ಕೊಂಡುಕೊಂಡು ತರತಕ್ಕಂಥ ಪ್ರಯತ್ನ ಮಾಡುತ್ತಿದ್ದೇವೆ. ಮೇವನ್ನು ಒದಗಿಸಿಕೊಡತಕ್ಕ ಕೆಲಸ ಏನಿದೆ, ದನಕರುಗಳ ಈ ಸಂಪತ್ತನ್ನು ಉಳಿಸಿಕೊಳ್ಳಲು ಎಲ್ಲಾ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳಬಯಸುತ್ತೇನೆ. ಇನ್ನು, ಬರಗಾಲ ಪೀಡಿತ ಪ್ರದೇಶಗಳಲ್ಲಿ ಕಾಮಗಾರಿಗಳು ಮುಂದುವರೆಯುತ್ತವೆ ಎಂದು ಈಗಾಗಲೇ ಹೇಳಿದ್ದೇನೆ. ಇದಕ್ಕಾಗಿ ಆರು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಹೆಚ್ಚು ಹಣದ ಅವಶ್ಯಕತೆ ಕಂಡುಬಂದರೆ ಸರ್ಕಾರ ಹಿಂದುಮುಂದೆ ನೋಡುವುದಿಲ್ಲ. ಎಷ್ಟು ಬೇಕೋ ಅಷ್ಟು ಸಹಾಯ ಮಾಡೋಣ. ಈಗ ಬಂದ ವರದಿಪ್ರಕಾರ ನೋಡಿದರೆ ರಾಜ್ಯದ ಯಾವ ಭಾಗದಲ್ಲೂ ಹೇಳಿಕೊಳ್ಳತಕ್ಕ ಮಳೆ ಬಿದ್ದಿಲ್ಲ. ೨೫ ಪರ್ಸೆಂಟ್‌ನಷ್ಟು ಮಾತ್ರ ಮಳೆಯಾಗಿದೆ. ಕೆಲವು ಕಡೆಯಲ್ಲಂತೂ ಮಳೆಯೇ ಆಗಿಲ್ಲ. ೩೧-೮-೮೫ರ ವರೆಗೆ ಬಂದಿರುವ ಮಾಹಿತಿಯನ್ನು ತರಿಸಿ ನೋಡಿದರೆ ಬಹಳ ಕಡಿಮೆ ಮಳೆಯಾಗಿದೆ. ಒಟ್ಟು ಪೀರಿಯಡ್‌ನಲ್ಲಿ ಸರಾಸರಿ ಆದದ್ದು ಅರ್ಧ ಇಂಚು ಮಳೆ. ಬರಗಾಲ ಪರಿಸ್ಥಿತಿ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಏನೆಂದರೆ, ಇಂತಹ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ಎಲ್ಲಾ ಕ್ರಮಗಳನ್ನೂ ಕೈಗೊಳ್ಳುತ್ತಿದೆ. ಮತ್ತು ನಮ್ಮ ಶಾಸಕ ಸಮಿತಿಯ ವರದಿಯನ್ನು ಕಾಯುತ್ತಿದ್ದೇವೆ. ವರದಿ ಬಂದಮೇಲೆ ಅದರ ಆಧಾರದಮೇಲೆ ಕೂಡ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ. ಇನ್ನು, ಬೆಂಗಳೂರು ಸಿಟಿ ಡಿಸ್ಟ್ರಿಕ್ಟ್

ಮಾಡುವ ಬಗ್ಗೆ ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ತಾಲ್ಲೂಕುಗಳು ದೊಡ್ಡದಾಗಿವೆ, ಪುನರ್‌ವಿಂಗಡಣೆ ಅವಶ್ಯಕತೆ ಇದೆ. ಇದರ ಬಗ್ಗೆ ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇನ್ನು ಅನೇಕ ವಿಚಾರಗಳನ್ನು ಗೆಳೆಯರು ಹೇಳಿದ್ದಾರೆ. ಎಲ್ಲದಕ್ಕೂ ಉತ್ತರ ಕೊಡಲು ನನ್ನಿಂದ ಆಗಿಲ್ಲ. ಮುಖ್ಯ ವಿಷಯಗಳ ಬಗ್ಗೆ ಮಾತ್ರ ವಿವರಗಳನ್ನು ಕೊಟ್ಟಿದ್ದೇನೆ. ಈಗಾಗಲೇ ನಾನು ಎರಡು ಘಂಟೆಗಳನ್ನು ತೆಗೆದುಕೊಂಡಿದ್ದೇನೆ. ಸಮಯದ ಅಭಾವ ಬೇರೆ ಇದೆ. ಕೊನೆಯಲ್ಲಿ ಮಾನ್ಯ ಸದಸ್ಯರೆಲ್ಲರಿಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ನಾವು ಏಳನೇ ಯೋಜನೆಗೆ ಈ ವರ್ಷ ಕಾಲಿಡುತ್ತಿದ್ದೇವೆ. ನಾವು ನೆನೆಸಿ ಕೊಂಡಿದ್ದೆವು, ಏನೆಂದರೆ ನಮ್ಮ ಯೋಜನಾ ಸಚಿವರು ನಮ್ಮ ಕರ್ನಾಟಕ ರಾಜ್ಯದ ಏಳನೇ ಯೋಜನೆಯೇ ಅಧ್ಯತೆ. ಮತ್ತು ಅದರ ರೂಪುರೇಷೆಗಳ ಬಗ್ಗೆ ಹೇಳುತ್ತಾರೆ ಎಂದು. ಆದರೆ ಅವರು ಸ್ಪಷ್ಟವಾಗಿ ಏನೂ ಹೇಳಲಿಲ್ಲ. ಮತ್ತೊಂದು ವಿಚಾರಬೇಕು. ಅದೇನೆಂದರೆ, ತಾವು ಕರ್ನಾಟಕ ರಾಜ್ಯದ ಮಟ್ಟಿಗೆ ಯೋಜನಾ ಮಂಡಳಿಯನ್ನು ಪುನರ್ ರಚಿಸಿದ್ದೀರಾ ? ಪುನರ್ ರಚಿಸಿದ್ದರೆ ಅಪ್ರೋಚ್ ಪೇಪರ್ ಅನ್ನು, ರಾಜ್ಯಮಟ್ಟದ್ದು ಅಪ್ರೂವ್ ಮಾಡಿಸಿದ್ದೀರಾ ? ಎಷ್ಟು ಮೀಟಿಂಗ್‌ಗಳು ಈ ಸರ್ಕಾರ ಬಂದಮೇಲೆ ಆಯಿತು ? ಏಳನೇ ಪಂಚವಾರ್ಷಿಕ ಯೋಜನೆಯ ಕರಡು ಪ್ರತಿ, ರಾಜ್ಯಮಟ್ಟದ್ದು, ಯೋಜನಾ ಮಂಡಳಿಯಿಂದ ಅಪ್ರೂವ್ ಮಾಡಿಸಿದ್ದೀರಾ ? ಮತ್ತೊಂದು ನಮಗೆ ಅರ್ಥವಾಗುತ್ತಿಲ್ಲ, ಏನೆಂದರೆ ನಿಮ್ಮ ಥಿಂಕ್‌ಟ್ಯಾಂಕ್ ಈ ಯೋಜನಾ ಮಂಡಳಿಯಲ್ಲಿ ಬರುತ್ತದೆಯೆ ? ಇದು ಸೂಪರ್‌ಬಾಡಿಯೇನು ? ಏಕೆಂದರೆ ನಮಗೆ ಏನು ಅನುಭವ ಆಗಿದೆಯೆಂದರೆ, ಈ 'ಥಿಂಕ್‌ಟ್ಯಾಂಕ್' ಬಂದಮೇಲೆ ಯೋಜನಾ ಇಲಾಖೆ ಏನಿದೆ, ಅದರೊಳಗೆ ಉನ್ನತಮಟ್ಟದಲ್ಲಿ ಬಹಳಷ್ಟು ಸಡಿಲಪಡಿಸಿದ್ದೀರಿ. ಇದು ನಮಗೆ ಅನುಭವ ಆಗಿದೆ. You have a Commissioner for Planning who is one of the best economists in the nation.

ಇತ್ತೀಚಿನ ಪತ್ರಿಕೆಯನ್ನು ಓದಿದ್ದೇನೆ. "ಥಿಂಕ್‌ಟ್ಯಾಂಕ್" ಕೌನ್ಸಿಲ್‌ನ ಸೆಕ್ರೆಟರಿಯಾಗಿ ಯೋಜನಾ ಇಲಾಖೆಯ ಕಾರ್ಯದರ್ಶಿಯನ್ನು ನೇಮಕ ಮಾಡಿದ್ದೀರಿ ಎಂದು ಗೊತ್ತಾಯಿತು. You have Commissioner for Planning who is one of the best economists in the Nations ಅಂತಹವರನ್ನು ಥಿಂಕ್‌ಟ್ಯಾಂಕ್ ಕೌನ್ಸಿಲ್‌ನ ಅಧೀನದಲ್ಲಿ ಹಾಕಿ, ನಿಜವಾಗಿಯೂ ಒಬ್ಬ ಎಕಾನಮಿಸ್ಟ್‌ಗೆ ಇನ್‌ಸಲ್ಟ್ ಮಾಡುವ ರೀತಿಯಲ್ಲಿ ಮಾಡಿದ್ದೀರಿ ಎನ್ನುವುದು ನಮ್ಮ ಭಾವನೆಯಾಗಿದೆ, ಅದನ್ನು ತಾವು ಸ್ಪಷ್ಟೀಕರಿಸಬೇಕು.

ಯೋಜನೆಯಲ್ಲಿ ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಎಲ್ಲಾ ಇಲಾಖೆಗಳನ್ನು ಹೇಳುವುದು ಬೇಡ, ನೀರಾವರಿ ವಿಚಾರದಲ್ಲಿ ಮತ್ತು ಪವರ್ ಸೆಕ್ಟಾರ್ ವಿಚಾರದಲ್ಲಿ ಹೇಳುವುದಾದರೆ, ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕ, ಹಳೆಯ ಮೈಸೂರು ಮತ್ತು ಇಂಟಿಗ್ರೇಟೆಡ್ ಏರಿಯಾ ಈ ನಾಲ್ಕು ಭಾಗಗಳಿಗೆ ಯಾವ ತರಹ ಹಣವನ್ನು ವಿಂಗಡಿಸಿ ಖರ್ಚುಮಾಡಿದ್ದೀರಿ ? ರೀಜನಲ್ ಇಂಬ್ಯಾಲೆನ್ಸ್ ಮಾಡಿ ಕಳೆದರೆ ಅದು ಆಗುವುದಿಲ್ಲ. ನೀರಾವರಿ ಮತ್ತು ಪವರ್ ಈ ಎರಡು ಬಾಬುಗಳಿಗೆ ಯಾವರೀತಿ ಹಣವನ್ನು ಖರ್ಚುಮಾಡಿದ್ದೀರಿ ಎಂಬುದನ್ನು ಹೇಳಬೇಕು.

ಇನ್ನು ಭೂಸುಧಾರಣೆ ಮಸೂದೆ ಬಗ್ಗೆ ಹೇಳಿದ್ದೀರಿ. ಡಿವಿಜನಲ್ ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಭೂಸುಧಾರಣೆ ನಿಮ್ಮ ಉದ್ದೇಶಕ್ಕೆ ಬಾಧಕ ಬರುತ್ತದೆ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ತೀರ್ಮಾನವಾದ ಕೇಸುಗಳ ಬಗ್ಗೆ ಅಪೀಲ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಶೇಕಡಾ ೯೯ರಷ್ಟು ಬಡ ಗೇಣಿದಾರರು ಭೂಮಿಯನ್ನು ಕಳೆದುಕೊಳ್ಳುವ ಪ್ರಸಂಗ ಬರುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು. ಅವರಿಗೆ ಅಪೀಲ್‌ಗೆ ಅವಕಾಶ ಕೊಟ್ಟ ಮೇಲೆ ಕಟ್ ಆಫ್ ಡೇಟ್ ಕೊಡುವುದು ಒಳ್ಳೆಯದು. ಹೈಕೋರ್ಟ್‌ನಲ್ಲಿ ಹಾಕತಕ್ಕ ಕೇಸುಗಳು ೬೦ ದಿವಸದೊಳಗೆ ಅಪೀಲ್ ಬರಬೇಕೆಂದು ತಾವು ಲಿಟಿಗೇಷನ್ ಹಾಕದಿದ್ದರೆ, ೫ ಲಕ್ಷ ಗೇಣಿದಾರರ ಅರ್ಜಿಗಳು ಏನಿವೆ ಅವುಗಳಿಗೆಲ್ಲಾ ಕೊನೆಯಾಗುತ್ತದೆ, ಅವರೆಲ್ಲರೂ ಭೂಮಿಯನ್ನು ಕಳೆದುಕೊಳ್ಳಬಹುದಾದ ಪ್ರಸಂಗ ಬರುತ್ತದೆ. ಅದಕ್ಕೆ ನೀವು ಏನು ಹೇಳಿದ್ದೀರಿ ಅಂದರೆ ಸೆಕ್ಷನ್ ೨(ಎ) ಪ್ರಕಾರ ಅಪ್ಲಿಕೇಶನ್ ಮಾಡಬೇಕೆಂದು ಮಾಡಿದ್ದೀರಿ. ಗುಡಿಸಲು ವಾಸಿಗಳಿಗೆ ಇದು ಹೇಗೆ ಗೊತ್ತಾಗುತ್ತದೆ ? ಇದು ಪಬ್ಲಿಷ್ ಆಗಿಲ್ಲ. ನಮ್ಮ ಜಿಲ್ಲೆಯಲ್ಲಿ ಶೇಕಡಾ ೨೦ರಷ್ಟು ಕೊಟ್ಟಿದ್ದಾರೆ. ಶೇಕಡ ೮೦ರಷ್ಟು ಜನ ಇವತ್ತು ಡಿಕ್ಲರೇಷನ್

ಕೊಟ್ಟಿಲ್ಲ. ಸೆಕ್ಷನ್ ೨(ಎ)ಯಲ್ಲಿ ಪುನಃ ಒಂದು ವರ್ಷ ಗಡುವು ಕೊಡತಕ್ಕ ತಿದ್ದುಪಡಿಯನ್ನು ಭೂ ಸುಧಾರಣೆಗೆ ತರುತ್ತೀರಾ ?

ಗ್ರಾಮ ಸಹಾಯಕರು ಬಹಳ ವರ್ಷಗಳಿಂದ ೧೨೦ ರೂಪಾಯಿ ತಿಂಗಳಿಗೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರು ದಿವಸದ ೨೪ ಗಂಟೆಗಳಲ್ಲಿ ೨೦ ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಅವರು ಎಲ್ಲಾ ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ತಿಂಗಳಿಗೆ ೧೨೦ ರೂಪಾಯಿ ಸಂಬಳ ಕೊಟ್ಟರೆ ಹೇಗೆ ಜೀವನ ಮಾಡಬೇಕು ? ಅವರಿಗೆ ನಾಲ್ಕನೆಯ ದರ್ಜೆ ನೌಕರರಿಗೆ ದೊರೆಯುವ ಸವಲತ್ತುಗಳನ್ನು ಕೊಡಬೇಕು ? ನಾಲ್ಕನೆಯ ದರ್ಜೆ ನೌಕರರಿಗೆ ದೊರೆಯುವ ಸಂಬಳವನ್ನು ಕೊಡಬೇಕು. ಅವರದು ಪಾರ್ಟ್‌ಟೈಮ್ ಅಪಾಯಿಂಟ್‌ಮೆಂಟ್ ಅಲ್ಲ. ನಮ್ಮ ಸರ್ಕಾರ ಮುಜರಾಯಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಕಾಂಪ್ರೆಹೆನ್ಸಿವ್ ಅಮೆಂಡ್‌ನ ಕರಡು ಪ್ರತಿಯನ್ನು ತಯಾರು ಮಾಡಿದೆ. ಅದು ಎರಡು ವರ್ಷಗಳಾದರೂ ಬೆಳಕು ಕಾಣಲಿಲ್ಲ. ಈ ಅಧಿವೇಶನದಲ್ಲೇ ಅದನ್ನು ಇಂಟ್ರಡ್ಯೂಸ್ ಮಾಡಿ ಅದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಅದನ್ನು ಮೂರು ತಿಂಗಳುಗಳೊಳಗೆ ಆ ಮಸೂದೆಯನ್ನು ತರಬೇಕೆಂದು ಹೇಳುತ್ತೇನೆ. ಈ ಬಗ್ಗೆ ಹಾರಿಕೆ ಉತ್ತರವನ್ನು ಕೊಟ್ಟು ತಪ್ಪಿಸಿಕೊಳ್ಳುವಂತಹ ಅಭಿಪ್ರಾಯ ಸರ್ಕಾರ ಇಟ್ಟುಕೊಂಡಿದೆಯೋ ಹೇಗೆ ಎಂಬುದನ್ನು ತಾವು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ವಾಟರ್‌ರೇಟ್ ಬಗ್ಗೆ ಹೇಳಿದ್ದಾರೆ. ಬೆಟರ್‌ಮೆಂಟ್ ಲೆವಿ ಆಕ್ಟ್ ಇದೆ, ಅದನ್ನು ನಾವು ವಜಾ ಮಾಡಿಲ್ಲ ; ಹಾಗೆಯೇ ಇದೆ. ಬೆಟರ್‌ಮೆಂಟ್ ಲೆವಿ ಆಕ್ಟ್ ಪ್ರಕಾರ ಹಣ ವಸೂಲಿ ಮಾಡಿಲ್ಲ ಅದನ್ನು ಪ್ರಸ್ತಾಪ ಮಾಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ''ಥಿಂಕ್ ಟ್ಯಾಂಕ್'' ಎಂದು ಮಾಡಿದ್ದೀರಿ. ಅದು ಯೋಚನೆ ಮಾಡುವ ಆಯೋಚಕ ಎಂದು ಕಾಣುತ್ತದೆ. ಚಿಂತನೆ ಮಾಡುವ ಜನಗಳು ಯಾರು ? ಅವರು ೨೦-೩೦ ವರ್ಷ ಸರ್ವೀಸ್ ಮಾಡಿ ರಿಟೈರ್ ಆಗಿರುತ್ತಾರೆ ಅಂತಹವರು ನಮಗೆ ಪುನಃ ಬುದ್ಧಿವಾದ ಹೇಳುವುದು. ಅವರ ಹತ್ತಿರ ಮೆರಿಟ್ ಇರಬಹುದು, ಅವರು ಎಫಿಶಿಯೆಂಟ್ ಇರಬಹುದು ಅದು ಅವರ ಹತ್ತಿರ ಇರಲಿ. ಅವರು ನಮಗೆ ಬುದ್ಧಿವಾದ ಹೇಳುವುದು ಯಾರಿಗೆ ? ಅವರ ಮೆರಿಟ್ ಎಫಿಶಿಯೆನ್ಸಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಜೀವನ ಸುಧಾರಿಸಬೇಕು. ಅವರ ಮೆರಿಟ್ ತೆಗೆದುಕೊಂಡು ಅದನ್ನು ಇಟ್ಟುಕೊಂಡು ಏನು ಮಾಡುತ್ತೀರಿ ? ಅವರ ಎಫಿಶಿಯೆನ್ಸಿ ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಉಪಕಾರ ಆಗದಿದ್ದರೆ, ಅವರ ಎಫಿಶಿಯೆನ್ಸಿ ತೆಗೆದುಕೊಂಡು ಏನು ಮಾಡಬೇಕು ? ಅವರ ಮೆರಿಟ್ ತೆಗೆದುಕೊಂಡು ಏನು ಮಾಡಬೇಕು ? ರಿಟೈರ್ಡ್ ಆದವರನ್ನು ಪ್ರೆಸಿಡೆಂಟ್, ಛೇರ್ಮನ್ ಮಾಡಿದರೆ ಅವರಿಂದ ಏನು ಉಪಕಾರ ಆಗುತ್ತದೆ ? ನೀವು ಥಿಂಕ್‌ಟ್ಯಾಂಕ್ ಮಾಡಿ ಈಗಾಗಲೇ ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಕೆಲಸ ಮಾಡುತ್ತಿದೆ, ಅವರ ಮೇಲೆ ಥಿಂಕ್‌ಟ್ಯಾಂಕ್ ಮಾಡಿ ಸೂಪರ್‌ಬಾಡಿ ಮಾಡಿದ್ದೀರಾ ? ನಾನು ಹೇಳುತ್ತಿದ್ದೇನೆ ಅದನ್ನು ತಕ್ಷಣ ವಜಾ ಮಾಡತಕ್ಕದ್ದು ಅನಿವಾರ್ಯ. ಅವರ ಬುದ್ಧಿವಾದ ಅವರ ಹರಿಕಥೆ ಬೇಡ. ಜನಗಳಿಗೆ ಉಪಕಾರ ಮಾಡುವುದು ಏನಿದೆ ಅದನ್ನು ಮಾಡಿ. ಅವರು ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದುಕೊಂಡು ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡುವುದು ಅದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಬಸವಲಿಂಗಪ್ಪನವರು ಮತ್ತು ಮೊಯಿಲಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಪ್ಲಾನಿಂಗ್ ಬಹಳ ಮುಖ್ಯವಾದುದು ಒಳ್ಳೆಯವರ ಕೈಯಲ್ಲಿ ಅಧಿಕಾರವಿದ್ದರೆ ಪ್ಲಾನಿಂಗ್ ಕೂಡ ಸರಿಯಾಗುತ್ತದೆ. ನಮ್ಮ ಸುದೈವ ನಮ್ಮ ಪ್ಲಾನಿಂಗ್ ಒಳ್ಳೆಯ ಅರ್ಥತಜ್ಞರ ಕೈಯಲ್ಲಿದೆ. ಅವರು ಆಡಳಿತದಲ್ಲಿ ಸಾಕಷ್ಟು ಅನುಭವವನ್ನು ಪಡೆದವರು ಇದ್ದಾರೆ. ಅಂತಹವರನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಥಿಂಕ್‌ಟ್ಯಾಂಕ್ ಮಾಡಿ ಅದನ್ನು ನಿಮ್ಮ ಜನತಾ ಪಾರ್ಟಿ ಆಫೀಸಿನಲ್ಲಿ ಇಟ್ಟುಕೊಳ್ಳಿ ಸರ್ಕಾರದ ದೃಷ್ಟಿಯಲ್ಲಿ ಪ್ಲಾನಿಂಗ್ ಸೆಕ್ರೆಟರಿಯವರಿಗೆ ಹೆಚ್ಚು ಅಧಿಕಾರವನ್ನು ಕೊಡುವುದು ಬಹಳ ಸಾರ್ಥಕವಾಗುತ್ತದೆಂದು ನಮ್ಮೆಲ್ಲರ ಅಭಿಪ್ರಾಯ.

ಗದಗ ವಾಟರ್ ಸಪ್ಲೈ ಸ್ಕೀಮ್‌ಗೆ ೧ ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಅದು ೯ ಕೋಟಿ ರೂಪಾಯಿ ಯೋಜನೆ ಇದೆ, ಅದು ಮೊದಲೇ ಆಗಿದ್ದರೆ ಎರಡೂವರೆ ಕೋಟಿ ರೂಪಾಯಿಗಳಲ್ಲಿ ಆಗುತ್ತಿತ್ತು. ಅದು ಯಾವುದೋ ದೃಷ್ಟಿಯಿಂದ ಮೂರ್ಖತನದಿಂದ ಅದು ಆಗಲಿಲ್ಲ. ಇವತ್ತು ಅದನ್ನು ಮಾಡದಿದ್ದರೆ ಎಷ್ಟು ಕೋಟಿ ರೂಪಾಯಿಗಳು ಖರ್ಚು ಆಗುತ್ತವೆಂದು ಹೇಳುವುದಕ್ಕೆ ಆಗುವು

ದಿಲ್ಲ. ಎಲ್. ಐ. ಸಿ. ಯಿಂದ ಹಣವನ್ನು ಪಡೆದುಕೊಂಡಿದ್ದೀರಿ, ಹಣವನ್ನು ಪಡೆದುಕೊಂಡರೂ ಸಹ ೧೦೦ ಲಕ್ಷ ರೂಪಾಯಿಗಳನ್ನು ಏತಕ್ಕೆ ಕೊಟ್ಟಿದ್ದೀರಿ ? ನಿಮಗೆ ಹೆಚ್ಚು ಹಣವನ್ನು ಕೊಡುವ ಆಸೆ ಇದೆಯೋ ಇಲ್ಲವೋ ಗೊತ್ತಿಲ್ಲ. ಗದಗ್ ವಾಟರ್ ಸಪ್ಲೈ ಸ್ಕೀಮ್‌ಗೆ ಸಾಕಷ್ಟು ಹಣವನ್ನು ಒದಗಿಸಿ ೧ ವರ್ಷದೊಳಗೆ ಆ ಯೋಜನೆಯನ್ನು ಪೂರ್ತಿಗೊಳಿಸುತ್ತೀರಾ ? ಗದಗದಲ್ಲಿ ನೀರು ಸಿಗದೆ ಪರ ಊರುಗಳಿಂದ ನೀರನ್ನು ತಂದು ಕುಡಿದು ಬದುಕುವ ಪರಿಸ್ಥಿತಿ ಉಂಟಾಗಿದೆ. ಒಂದೂವರೆ ಲಕ್ಷ ಜನ ಗದಗ ಬಿಟ್ಟು ಹೋಗುವಂತಹ ಸ್ಥಿತಿ ಬಂದಿದೆ. ಗದಗದಲ್ಲಿ ಜನಗಳಿಗೆ ನೀರು ಸಿಗುತ್ತಿಲ್ಲ. ಸರ್ಕಾರ ತಕ್ಷಣ ಮೂರು ನಾಲ್ಕು ಕೋಟಿ ರೂಪಾಯಿಗಳನ್ನು ಒದಗಿಸಿ ಕೆಲಸವನ್ನು ತೀವ್ರಗತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಸವಲಿಂಗಪ್ಪನವರು ಬೊಯಿಲಿಯವರು ಮತ್ತು ಕೆ. ಎಚ್. ಪಾಟೀಲ್‌ರವರು ಕೆಲವು ವಿವರಗಳನ್ನು ಕೇಳಿದ್ದಾರೆ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಅಪೀಲ್ ಮಾಡತಕ್ಕ ವಿಚಾರದಲ್ಲಿ ೬೦ ದಿವಸಗಳೊಳಗೆ ಅಪೀಲ್ ಮಾಡಬೇಕೆಂದು ಇದೆ. ಆಮೇಲೆ ಅಪ್ಪೆಲೇಟ್ ತೀರ್ಮಾನ ಕೊನೆಯ ತೀರ್ಮಾನವಾಗುತ್ತದೆ. ಲ್ಯಾಂಡ್ ಟ್ರಿಬ್ಯುನಲ್‌ನಲ್ಲಿ ಸರಿಯಾದ ತೀರ್ಮಾನ ಆಗದಿದ್ದರೆ ಗೇಣಿದಾರರು ಹೈಕೋರ್ಟಿಗೆ ಅಪೀಲ್ ಹೋಗುತ್ತಾರೆ. ಅದು ಪೆಂಡಿಂಗ್ ಕೇಸಸ್‌ನಲ್ಲಿ ಮಾತ್ರ ಆ ರೀತಿ ಆಗುತ್ತದೆ. ಫ್ರೆಸ್ ಕೇಸಸ್‌ನಲ್ಲಿ ಯಾವುದು ಆ ರೀತಿ ಇಲ್ಲ. ಬೆಟರ್‌ಮೆಂಟ್ ಲೆವಿ ಆಕ್ಟ್ ಅದು ೧೯೭೮ರಲ್ಲಿ ಅಬಾಲೀಸ್ ಆಗಿದೆ. ಅದರ ಬಗ್ಗೆ ಆಕ್ಟ್ ತಿದ್ದುಪಡಿ ಮಾಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ, ಕಾನೂನು ತಿದ್ದುಪಡಿ ಮಾಡಬೇಕು ಅದನ್ನು ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಮಂತ್ರಿಗಳು ಬೆಟರ್‌ಮೆಂಟ್ ಲೆವಿಯನ್ನು ಬಿಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಅದರ ಬಗ್ಗೆ ಹೇಳುತ್ತಿದ್ದೇನೆ. ಗ್ರಾಮ ಸಹಾಯಕರಿಗೆ ಮೊದಲು ೭೫ ರೂಪಾಯಿಗಳನ್ನು ತಿಂಗಳಿಗೆ ಕೊಡಲಾಗುತ್ತಿತ್ತು. ನಾವು ೬ ತಿಂಗಳುಗಳಿಂದ ತಿಂಗಳಿಗೆ ೧೨೦ ರೂಪಾಯಿ ಮಾಡಿದ್ದೇವೆ. ಅದನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ತಾವು ಹೇಳಿದ ವಿಷಯವನ್ನು ಪರಿಗಣಿಸುವುದಕ್ಕೆ ಸರ್ಕಾರದ ಆಲೋಚನೆಯಲ್ಲಿ ಆ ವಿಷಯ ಇದೆ. ಇದು ಬಹಳ ಮುಖ್ಯವಾದ ವಿಚಾರ. ಅದನ್ನು ನಾವು ಯೋಚನೆ ಮಾಡುತ್ತೇವೆ. ಇನ್ನು ಪ್ಲಾನಿಂಗ್ ವಿಚಾರವಾಗಿ ತಾವು ಕೇಳಿದ್ದೀರಿ, ಮೊದಲನೆಯದಾಗಿ ಈ ತಿಂಕ್‌ಟ್ಯಾಂಕ್ ಬಗ್ಗೆ ಅನೇಕ ಸಾರಿ ಈ ಸದನದಲ್ಲಿ ಚರ್ಚೆಗೆ ಬಂದಿದೆ. ಇದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚು ವಿವರಣೆಗಳನ್ನು ಕೊಡುವುದಕ್ಕೆ ಆವಶ್ಯಕತೆ ಇಲ್ಲ. ಈ ತರಹ "ತಿಂಕ್ ಟ್ಯಾಂಕ್"ನ್ನು ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಸಹ ಮಾಡಿದ್ದರು. ತಿಂಕ್ "ಟ್ಯಾಂಕ್"ನ್ನು ನಮ್ಮ ರಾಜ್ಯದಲ್ಲಿ ನಾವು ಮಾಡಿದ್ದೇವೆ. ದೆಹಲಿಯಲ್ಲೂ ಮಾಡಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಜನಗಳಿಗೆ ಈ ತಿಂಕ್ ಟ್ಯಾಂಕ್‌ನಿಂದ ಏನೂ ಪ್ರಯೋಜನವಾಗುವುದಿಲ್ಲ ಜನಗಳಿಗೆ ಪ್ರಯೋಜನವಾಗುವ ಕೆಲಸವನ್ನು ಮಾಡಬೇಕು. ಅದು ಬಿಟ್ಟು ಈ ತಿಂಕ್ ಟ್ಯಾಂಕ್‌ನ್ನು ಮಾಡಿದರೆ ಏನು ಪ್ರಯೋಜನ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ತಿಂಕ್ ಟ್ಯಾಂಕ್‌ನಲ್ಲಿ ಇರುವವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರನ್ನು ಮಾಡಿರುವವರು ಇದ್ದಾರೆ. ಈ ತಿಂಕ್ ಟ್ಯಾಂಕ್ ವಿಚಾರವಾಗಿ ಅನೇಕ ಸಲ ಚರ್ಚೆಯಾಗಿ ಅದಕ್ಕೆ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಇರತಕ್ಕಂತಹವರು ಒಳ್ಳೆಯ ಅನುಭವಿಗಳು, ಹಾಗೂ ತಜ್ಞರಿದ್ದಾರೆ. ಸರ್ಕಾರದ ಯೋಜನೆಗಳಿಗೆ ಇವರು ಸಲಹೆಯನ್ನು ಕೊಡುತ್ತಾರೆ. ಅಡ್ವೈಸರಿ ಕಮಿಟಿಯಾಗಿ ಸರ್ಕಾರಕ್ಕೆ ಇವರು ಕೆಲಸ ಮಾಡುತ್ತಿದ್ದಾರೆ. ಸರ್ಕಾರದ ಯಾವುದೇ ಸೆಕ್ರೆಟರಿಗಳು ಇವರ ಸಬಾರ್ಡಿನೇಟ್ ಅಲ್ಲ. ಯಾವ ಇಲಾಖೆಯು ಇವರ ಅಧೀನಕ್ಕೆ ಒಳಪಟ್ಟಿಲ್ಲ. ಇದು ಬರೀ ಅಡ್ವೈಸರಿ ಕಮಿಟಿಯಷ್ಟೇ. ಇದು ರಾಷ್ಟ್ರಕ್ಕೆ ಬೇಕು, ರಾಜ್ಯಕ್ಕೆ ಬೇಡ ಎನ್ನುವ ವಿಚಾರವಲ್ಲ

ಶ್ರೀ ಕೆ. ಹೆಚ್. ಪಾಟೀಲ್.—ನಾವು ಈ ಥಿಂಕ್ ಟ್ಯಾಂಕ್‌ನಲ್ಲಿ ಇರುವ ವ್ಯಕ್ತಿಗಳ ಬಗ್ಗೆ ಹೇಳುತ್ತಿಲ್ಲ. ಇವರುಗಳು ಮಾಡುತ್ತಿರುವುದು ಮೇಲಿನವರಿಗೆ ಯಾವ ರೀತಿ ಅನುಕೂಲವಾಗಬೇಕೆಂಬ ಬಗ್ಗೆ ಯೋಚನೆ ಮಾಡುತ್ತಾರೆ. ನಮ್ಮ ಪ್ಲಾನಿಂಗ್ ಎಲ್ಲಾ ಕೆಳಗಿನಿಂದ ಮೇಲಕ್ಕೆ ಬರಬೇಕು. ಮೇಲಿನಿಂದ ಕೆಳಕ್ಕೆ ಬರುವುದು ಬೇಡ. ಅದು ಕೇಂದ್ರದವರು ಮಾಡಿದರೂ ತಪ್ಪು, ನಾವು ಮಾಡಿದರೂ ತಪ್ಪು. ಜನರಿಗೆ ಅನುಕೂಲವಾಗುವಂತಹ ಕೆಲಸಗಳನ್ನು ಮಾಡಬೇಕೇ ಹೊರತು ಅನುಕೂಲಗಳು ಆಗದೇ ಇರುವ ಕೆಲಸಗಳನ್ನು ಮಾಡಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಥಿಂಕ್ ಟ್ಯಾಂಕ್‌ನಲ್ಲಿ ಇರುವವರು ರಾಜ್ಯದ ಅಭಿವೃದ್ಧಿಯನ್ನು ಮಾಡುವ ಬಗ್ಗೆ ಸಲಹೆಯನ್ನು ಕೊಡುತ್ತಾರೆ. ಹಾಗೂ ಇವರು ಪರಿಣಿತರು ಇದ್ದಾರೆ. ಸಮರ್ಥರಿದ್ದಾರೆ. ಅವರ ಸಹಾಯ ಅವಶ್ಯಕತೆ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನ್ನು ಬಲಪಡಿಸಬೇಕು. ಆದರೆ ಅದರ ಮೇಲೆ ಇವರ ಪ್ರಭಾವ ಇರಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದ ಯಾವುದೇ ಇಲಾಖೆಯಾಗಲೀ, ಅಥವಾ ಇಲಾಖೆಯ ಸೆಕ್ರೆಟರಿಗಳಾಗಲೀ ಇವರ ಸಬಾರ್ಡಿನೇಟ್ ಆಗಿರುವುದಿಲ್ಲ

ಶ್ರೀ ಕೆ. ಹೆಚ್. ಪಾಟೀಲ್.—ನಿಮ್ಮ ಸರ್ಕಾರ ಹೇಗಿದೆ ಎಂದರೆ, ಅಪ್ಪ ನೀನು ಜಾತ್ರೆಗೆ ಹೋಗು ಎಂದರೆ ಹೋಗುತ್ತೇನೆ, ಜಾತ್ರೆಗೆ ಹೋಗಬೇಡ ಎಂದರೂ ಹೋಗುತ್ತೇನೆ. ಈಗ ಹೇಳು ನಾನು ಹೋಗಲೋ ಬೇಡವೋ ಎಂದು ಕೇಳಿದ ಹಾಗೆ ಆಯಿತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ನಿಮ್ಮನ್ನೂ ಕೇಳುತ್ತೇವೆ. ನಿಮ್ಮ ಅಭಿಪ್ರಾಯವನ್ನೂ ನಾವು ಪರಿಗಣಿಸುತ್ತೇವೆ. ಈ ಥಿಂಕ್ ಟ್ಯಾಂಕ್‌ನಲ್ಲಿ ದೊಡ್ಡ ಎಕನಾಮಿಸ್ಟ್‌ಗಳೂ ಇದ್ದಾರೆ. ಅದರಲ್ಲಿ ಎಲ್ಲಾ ರಂಗಗಳಲ್ಲೂ ತಿಳಿದಿರುವಂತಹ ಪರಿಣಿತರು ಇದ್ದಾರೆ. ಶ್ರೀಮಾನ್ ಮೊಯ್ಲಿಯವರು ರೀಜನಲ್ ಇಂಬ್ಯಾಲನ್ಸ್ ಬಗ್ಗೆ ಕೇಳಿದ್ದಾರೆ, ಅದರ ಬಗ್ಗೆ ಸೂಕ್ಷ್ಮವಾಗಿ ಹೇಳಬೇಕಾಗಿದೆ. ಆದರೆ ಅದರ ಬಗ್ಗೆ ವಿವರಣೆಗಳು ಇಲ್ಲಿ ಇಲ್ಲ. ಇನ್ನು ಇರಿಗೇಷನ್ ಬಗ್ಗೆ ಹೇಳಬೇಕಾದರೆ ಕಾವೇರಿ ಬೇಸಿನ್ ಮತ್ತು ಅಪ್ಪರ್ ಕೃಷ್ಣ ಪ್ರಾಜೆಕ್ಟ್‌ಗಳನ್ನು ಮಾಡುತ್ತಿದ್ದೇವೆ. ಅಪ್ಪರ್ ಕೃಷ್ಣದಲ್ಲಿ ಸಂಪೂರ್ಣವಾಗಿ ನೀರನ್ನು ಎರಡು ಸಾವಿರ ವರ್ಷದೊಳಗೆ ಉಪಯೋಗ ಮಾಡಬೇಕಾಗಿದೆ. ಆದುದರಿಂದ ಅದಕ್ಕೆ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಹಾಗೂ ಈ ಯೋಜನೆಯನ್ನು ಹೆಚ್ಚು ತ್ವರಿತವಾಗಿ ಮಾಡಿ ಮುಗಿಸಬೇಕಾಗುತ್ತದೆ. ಆ ಬಗ್ಗೆ ಸರ್ಕಾರ ಆಲೋಚನೆ ಮಾಡುತ್ತಿದೆ. ೭ನೇ ಯೋಜನೆಯ ವಿವರಗಳು ಇನ್ನೂ ಫೈನಲ್ ಆಗಿಲ್ಲ. ಎನ್.ಡಿ.ಸಿ. ಮೀಟಿಂಗ್ ಆಗುವವರೆಗೂ ನಾನು ವಿವರಗಳನ್ನು ಕೊಡುವುದಕ್ಕಾಗುವುದಿಲ್ಲ. ಮಾನ್ಯ ಕೆ. ಹೆಚ್. ಪಾಟೀಲರು ಗದಗ್ ಮತ್ತು ಬೆಟಗೇರಿ ಬಗ್ಗೆ ಹೇಳಿದ್ದಾರೆ. ಗದಗ್ ಮತ್ತು ಬೆಟಗೇರಿಗೆ ನೀರಿನ ಯೋಜನೆಯನ್ನು ಪೂರ್ಣಗೊಳಿಸಲು ೭ನೇ ಯೋಜನೆಯಲ್ಲಿ ೯ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದೆ. ಈಗಾಗಲೇ ಒಂದು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಆದಷ್ಟು ತೀವ್ರ ಗತಿಯಲ್ಲಿ ಈ ಕೆಲಸವನ್ನು ಮಾಡುತ್ತೇವೆ.

ಶ್ರೀ ಕೆ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ, ನಗರಗಳು ಬೆಳೆದ ಹಾಗೆ, ಜಿಲ್ಲೆಗಳು ಬೆಳೆದ ಹಾಗೆ ಅವುಗಳನ್ನು ಪುನರ್ ವಿಂಗಡಿಸುವುದು ಮೊದಲಿನಿಂದಲೂ ಬಂದಿದೆ. ದಾವಣಗೆರೆ ನಗರ ಈಗ ವ್ಯಾಪಕವಾಗಿ ಬೆಳೆಯುತ್ತಿದೆ. ಅಲ್ಲಿನ ಜನಸಂಖ್ಯೆ ಈ ಎರಡುವರೆ ಲಕ್ಷದಷ್ಟು ಇದೆ. ಆಡಳಿತ ದೃಷ್ಟಿಯಿಂದ ಈ ದಾವಣಗೆರೆ ತಾಲ್ಲೂಕನ್ನು ವಿಂಗಡಿಸಿ ದಕ್ಷಿಣ ಮತ್ತು ಉತ್ತರ ತಾಲ್ಲೂಕುಗಳೆಂದು ಮಾಡಬೇಕು. ಈ ರೀತಿ ಮಾಡಿದರೆ ಆಡಳಿತ ದೃಷ್ಟಿಯಿಂದ ಬಹಳ ಅನುಕೂಲವಾಗುತ್ತದೆ. ಆದುದರಿಂದ ಮಾನ್ಯ ಸಚಿವರು ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಅಧ್ಯಯನ ಮಾಡಲು ಮಾನ್ಯ ಹುಂಡೇಕಾರ್ ರವರನ್ನು ನೇಮಕ ಮಾಡಲಾಗಿದೆ. ಅವರ ವರದಿ ಬಂದ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸರ್ಕಾರವು ಕೊಡಗು ಜಿಲ್ಲೆಯನ್ನು ರೀ-ಸರ್ವೆ ಮಾಡಿಸುತ್ತಿದೆ. ನಾನು ೪ ದಿವಸಗಳ ಕಾಲ ಕೊಡಗಿಗೆ ಹೋಗಿದ್ದೆ. ಸರ್ವೆ ಮಾಡುವ ಬಗ್ಗೆ ಕೆಲವು ನ್ಯೂನತೆಗಳು ಇವೆ.

ಇದುವರೆಗೆ ೧೦೪ ಗ್ರಾಮಗಳನ್ನು ಭೂ ಮಾಪನ ಮಾಡುವುದು ಪೂರ್ಣ ಗೊಂಡಿದೆ ಎಂದು ಸರ್ವೆ ಡಿಪಾರ್ಟ್‌ಮೆಂಟಿನ ಪುಸ್ತಕದಲ್ಲಿ ಇದೆ. ಇವರು ೧೩೩ ಗ್ರಾಮಗಳ ಸರ್ವೆ ಮುಗಿದಿದೆ ಎಂದು ಹೇಳು ತ್ತಾರೆ. ಇದರ ಬಗ್ಗೆ ಕೂಲಂಕಷವಾದ ಸಿ. ಒ. ಡಿ. ತನಿಖೆಯನ್ನು ಮಾಡಿಸಿ. ನಿಮ್ಮ ಅಧಿಕಾರಿಗಳು ನಿಮ್ಮ ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಅಂತಹವರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ. ನಾನು ಕೊಡಗಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಸರ್ವೆಯಾಗಿರುವುದು ಕೇವಲ ೬೦ ಗ್ರಾಮಗಳಲ್ಲಿ ಮಾತ್ರ. ಈ ಸರ್ವೆಯನ್ನು ಮುಗಿಸಲು ಒಂದುಕಾಲು ಕೋಟಿ ರೂಪಾಯಿಗಳಾದರೆ ಸಾಕು ಎಂದು ತಾವು ಹೇಳಿದ್ದೀರಿ. ಆದರೆ ಈಗ ೨ ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೂ ಸರ್ವೆ ಮಾಡುವುದು ಮುಗಿದಿಲ್ಲ. ಹೀಗೆ ಸರ್ವೆ ಮಾಡುತ್ತಾ ಹೋದರೆ ಇನ್ನೂ ೫-೬ ವರ್ಷಗಳಾದರೂ ಸರ್ವೆ ಮಾಡುವುದು ಮುಗಿಯುವುದಿಲ್ಲ. ಹಾಗೂ ಇನ್ನೂ ೧೦-೧೨ ಕೋಟಿ ರೂಪಾಯಿ ಹಣ ಬೇಕಾಗುತ್ತದೆ ಈಗಾಗಲೇ ಸರ್ವೆಯರ್‌ಗಳು ೧೨೫-೧೩೦ ಜನ ಇದ್ದಾರೆ. ಬೇಕಾದರೆ ಇನ್ನೂ ೨೦-೨೫ ಜನ ಸರ್ವೆಯರ್‌ಗಳನ್ನು ನೇಮಕ ಮಾಡಿಕೊಳ್ಳಿ. ಈ ಸರ್ವೆ ಮಾಡಿರುವ ಬಗ್ಗೆ ಕೂಲಂಕಷ ತನಿಖೆ ಯನ್ನು ಮಾಡಿಸಿ ಹಾಗು ಸರಿಯಾದಂತಹ ರಿಪೋರ್ಟ್‌ನ್ನು ತರಿಸಿಕೊಡಿ. ಇನ್ನು ಎರಡನೆಯದಾಗಿ, ರೈತರುಗಳಿಗೆ ಸಾಲವನ್ನು ಕೊಡುವುದಕ್ಕೆ ಅನುಕೂಲವಾಗಲು ಎಲ್ಲರಿಗೂ ಪಾಸ್ ಬುಕ್‌ಗಳನ್ನು ಕೊಡು ತ್ತೇವೆಂದು ಹೇಳಿದಿರಿ. ಆದರೆ ಇದುವರೆಗೂ ಯಾರಿಗೂ ಪಾಸ್ ಬುಕ್‌ನ್ನು ಕೊಟ್ಟಿಲ್ಲ. ಅದನ್ನು ಯಾವಾಗ ಕೊಡುತ್ತೀರಿ ? ಇನ್ನು ಮೂರನೆಯದಾಗಿ ಬರಗಾಲದ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಹಳ್ಳಿಗಳ ಕಡೆ ಹೆಚ್ಚಿನ ಕೆಲಸಗಳನ್ನು ಮಾಡಿಸಬೇಕು. ಈಗ ಮಳೆ ಬರದೆ ರೈತರುಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಸರ್ಕಾರ ಕೂಡಲೇ ಬರಗಾಲದ ಪರಿಸ್ಥಿತಿ ಬಗ್ಗೆ ತೀವ್ರ ಗಮನ ಹರಿಸಿ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಕೊಡಗಿನಲ್ಲಿ ಆಗಿರುವ ಕೆಲಸದ ವಿಳಂಬದ ಬಗ್ಗೆ ತನಿಖೆ ಯನ್ನು ಮಾಡಿಸುತ್ತೇನೆ. ಹಾಗೂ ಈ ಸರ್ವೆ ಆದಷ್ಟು ಬೇಗ ನಡೆಯುವ ಹಾಗೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಯಾರಿಂದ ತನಿಖೆ ಮಾಡಿಸುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಡಿಪಾರ್ಟ್‌ಮೆಂಟಿನವರಿಂದ ಮಾಡಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಈ ಕೆಲಸದ ಬಗ್ಗೆ ಏಕೆ ಕಳಕಳಿ ವ್ಯಕ್ತಪಡಿಸು ತ್ತಿದ್ದೇನೆ ಎಂದರೆ, ಈ ಕೆಲಸಕ್ಕೆ ಸರ್ಕಾರವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದುದರಿಂದ ಈ ಪ್ರಶ್ನೆ ಕೇಳುತ್ತಿದ್ದೇನೆ. ಇವತ್ತು ಅಲ್ಲಿ ಅವರಿಗೆ ಕಾಂಟ್ರಾಕ್ಟ್ ಮುಗಿದಿದ್ದರೂ ಕೂಡ, ಕಲ್ಲು ಸಪ್ಲೈ ಮಾಡುತ್ತಿದ್ದಾರೆ. ಈ ತನಿಖೆಯನ್ನು ಅಲ್ಲಿನ ಅಧಿಕಾರಿಗಳು ಮಾಡುವುದಕ್ಕೆ ಸಾಧ್ಯವಿಲ್ಲ, ಆದ್ದರಿಂದ, ಈ ತನಿಖೆಯನ್ನು ಮಾಡುವುದಕ್ಕೆ ಸಿಓಡಿ ಮುಖಾಂತರವಾದರೂ ಮಾಡಿಸಿ. ಅಥವಾ ಈ ಸದನದ ಸಮಿತಿಯನ್ನಾದರೂ ನೇಮಿಸಿ, ತನಿಖೆ ಮಾಡಿಸಿ. ಇದು ಎಂಟು ಹತ್ತು ವರ್ಷವಾದರೂ ಮುಗಿಯುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಇನ್ನೆರಡು ವರ್ಷಗಳಲ್ಲಾದರೂ ಇದನ್ನು ಮುಗಿಸುತ್ತೇವೆಂದು ಒಂದು ಸ್ಪಷ್ಟವಾದ ಉತ್ತರವನ್ನು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಗಮನಕೊಟ್ಟಿ ದ್ದೇನೆ. ಇದರ ಬಗ್ಗೆ ಯಾವರೀತಿ ತನಿಖೆ ಮಾಡಿಸಬೇಕೋ ಆ ರೀತಿ ಮಾಡಿಸುತ್ತೇನೆ. ನಾನೇ ಅಲ್ಲಿಗೆ ಖುದ್ದಾಗಿ ಹೋಗಿ ಇನ್‌ಸ್ಪೆಕ್ಷನ್ ಮಾಡುತ್ತೇನೆ. ಇನ್ನು ಅಗ್ರಿಕಲ್ಚರ್ ಪಾಸ್‌ಬುಕ್ ಬಗ್ಗೆ ಹೇಳಿದ್ದಾರೆ. ಅದಕ್ಕೆ ಇನ್ನೂ ರಾಷ್ಟ್ರಪತಿಯವರ ಅನುಮತಿ ಸಿಕ್ಕಿಲ್ಲ, ಸಿಗಬಹುದು. ಅನುಮತಿ ಬಂದಕೂಡಲೇ ಪಾಸ್‌ಬುಕ್ಕನ್ನು ಕೊಡಿಸುವ ವ್ಯವಸ್ಥೆ ಮಾಡುತ್ತೇನೆ. ಜಿಲ್ಲಾಧಿಕಾರಿಗಳ ರಿಲೀಫ್ ವರ್ಕ್ಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಅದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಸ್ಕೇರ್ಸಿಟಿ ವರ್ಕ್ಸ್ ಎಲ್ಲೆಲ್ಲಿ ಆಗುತ್ತಿದೆಯೋ ಅವಶ್ಯಕತೆ ಬಿದ್ದಾಗ ಅಲ್ಲ ಶಾಸಕರ ಸಲಹೆಯನ್ನು ತೆಗೆದು ಕೊಂಡು ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. ಆ ಪ್ರಕಾರ ಅವರು ಮಾಡುತ್ತಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಉಪಾಧ್ಯಕ್ಷರೆ, ಮುಜರಾಯಿ ಇಲಾಖೆಯಲ್ಲಿ ಜೀವವಿಲ್ಲದೆ ದೇವರಿಗೆ ಸೌಲಭ್ಯಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಆದರೆ ಅಲ್ಲಿ ಮುಜರಾಯಿ ಇಲಾಖೆ ಯಲ್ಲಿ ಕೆಲಸ ಮಾಡುತ್ತಿರುವವರಿಗೆ ಸರಿಯಾದ ಸೌಲಭ್ಯವನ್ನು ಕೊಡುತ್ತಾ ಇಲ್ಲ. ಈ ಸಂದರ್ಭದಲ್ಲಿ

ತವಂಗೆ ಹೇಳಬೇಕೆಂದರೆ ನಂಜನಗೂಡಿನಲ್ಲಿ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನವಿದೆ. ಆ ದೇವಸ್ಥಾನದ ಆದಾಯ ೧೯೮೧–೮೨ರಲ್ಲಿ ೧೧ ಲಕ್ಷ ಚಿಲ್ಲರೆ, ೧೯೮೨–೮೩ರಲ್ಲಿ ೧೧ ಲಕ್ಷ ಚಿಲ್ಲರೆ, ೧೯೮೩–೮೪ ರಲ್ಲಿ ೧೪ ಲಕ್ಷ ಚಿಲ್ಲರೆ. ಈ ಜೀವವಿಲ್ಲದೇ ಇರುವ ದೇವರಿಗೆ ಜೇನುತುಪ್ಪದ ಅಭಿಷೇಕ, ಹಾಲಿನ ಅಭಿಷೇಕ, ಪಂಚಾಮೃತದ ಅಭಿಷೇಕ, ಪಂಚಕರ್ಪೂರದ ಅಭಿಷೇಕ ಇದಕ್ಕೆಲ್ಲಾ ಖರ್ಚಾಗಿರುವುದು ೧೯೮೧–೮೨ರಲ್ಲಿ ೭ ಲಕ್ಷ ಚಿಲ್ಲರೆ, ೧೯೮೨–೮೩ರಲ್ಲಿ ೮ ಲಕ್ಷ ೨೪ ಸಾವಿರ, ೧೯೮೪–೮೫ರಲ್ಲಿ ೯ ಲಕ್ಷ ೭೫ ಸಾವಿರ. ಅಲ್ಲಿ ೪ ಜನ ಗುಮಾಸ್ತರು ಇದ್ದಾರೆ. ಜಾತ್ರೆ ನೋಡಿಕೊಳ್ಳುವುದಕ್ಕೆ, ಶಿವರಾತ್ರಿ ನೋಡಿಕೊಳ್ಳುವುದಕ್ಕೆ, ಕಲ್ಯಾಣ ಮಂಟಪ ನೋಡಿಕೊಳ್ಳುವುದಕ್ಕೆ ವಸತಿಗೃಹ ನೋಡಿಕೊಳ್ಳುವುದಕ್ಕೆ. ಇವರಿಗೆ ಸಂಬಳ ೨೫೦ ರೂ. ತಿಂಗಳಿಗೆ ಕೊಡುತ್ತಿದ್ದಾರೆ. ಇವರಿಗೆ ಸಂಬಳವನ್ನು ಜಾಸ್ತಿ ಮಾಡಬೇಕೆಂದು ವಿಶೇಷ ಜಿಲ್ಲಾಧಿಕಾರಿಗಳು ಮೊಟ್ಟಮೊದಲು ೨೭–೧–೭೭ರಲ್ಲಿ ಶಿಫಾರಸ್ಸು ಮಾಡಿದ್ದಾರೆ. ನಂತರ, ೨೬–೨–೮೪ ರಲ್ಲಿ ಶಿಫಾರಸ್ಸು ಮಾಡಿದ್ದಾರೆ. ಆನಂತರ, ೧೧–೯–೮೪ರಲ್ಲಿ ಶಿಫಾರಸ್ಸು ಮಾಡಿದ್ದಾರೆ. ಇತ್ತೀಚೆಗೆ ಲೇಟೆಸ್ಟಾಗಿ ಶಿಫಾರಸ್ಸು ಮಾಡಿ, ದಿನಾಂಕ ೨೫–೪–೮೫ ರಲ್ಲಿ ರೆವಿನ್ಯೂ ಕಮೀಷನರಿಗೆ ಡಿಸ್ಪ್ಯಾಚಾಗಿದೆ. ಜೀವಂತವಿಲ್ಲದ ದೇವರುಗಳಿಗೆ ಬಹಳ ಹಣ ಖರ್ಚು ಮಾಡುತ್ತಿದ್ದೀರಿ. ಇದನ್ನು ನೋಡಿಕೊಳ್ಳುವ ಗುಮಾಸ್ತರಿಗೆ ಎರಡು ಹೊತ್ತು ಊಟಕ್ಕಾಗುವಷ್ಟಾದರೂ ಒಂದು ವ್ಯವಸ್ಥೆಯನ್ನು ಇದುವರೆವಿಗೂ ಏತಕ್ಕೆ ಮಾಡಿಲ್ಲ ?

ಶ್ರೀ ಎಸ್, ಆರ್. ಬೊಮ್ಮಾಯಿ.—ಜೇನುತುಪ್ಪದ ಅಭಿಷೇಕ; ತುಪ್ಪದ ಅಭಿಷೇಕ ಪೂಜೆ ಮಾಡುವುದರ ಬಗ್ಗೆ ಹೇಳುವುದು ಕಷ್ಟ. ಆ ದೇವಸ್ಥಾನಕ್ಕೆ ಪರಂಪರೆಯಾಗಿ ಯಾವರೀತಿ ಪೂಜೆ ಮಾಡಬೇಕೋ ಆರೀತಿ ನಡೆಯುತ್ತಾ ಇದೆ. ಮಾನ್ಯ ಸದಸ್ಯರು ಹೇಳಿದಹಾಗೆ, ಅಲ್ಲಿರುವ ಗುಮಾಸ್ತರ ಸಂಬಳಗಳನ್ನು ಹೆಚ್ಚು ಮಾಡುವುದರ ಬಗ್ಗೆ ಸರ್ಕಾರ ಆದಷ್ಟು ಬೇಗ ಆಜ್ಞೆಯನ್ನು ಹೊರಡಿಸುತ್ತದೆ.

ಶ್ರೀ ಕೆ. ಬಿ, ಶಾಣಪ್ಪ.—೧೯೭೫ ರಿಂದ ರೈತರ ಜಮೀನನ್ನು ಪಿಡಬ್ಲ್ಯೂಡಿಯವರು ತೆಗೆದುಕೊಂಡರು. ನೂರಾರು ಕಿಲೋಮೀಟರ್ ರಸ್ತೆ ಮಾಡುವುದಕ್ಕಾಗಿ, ಅದರಲ್ಲೂ ಹೈದರಾಬಾದ್ ಕರ್ನಾಟಕಕ್ಕೆ ಸೇರಿರತಕ್ಕಂಥಾದ್ದರಲ್ಲೇ ಜಾಸ್ತಿ ತೆಗೆದುಕೊಂಡಿದ್ದಾರೆ. ಆದರೆ ಈವರೆಗೆ ಇದುವರೆಗೂ ಯಾವ ಪರಿಹಾರವನ್ನೂ ಕೊಟ್ಟಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಯಾವಯಾವ ರೆವಿನ್ಯೂ ಲ್ಯಾಂಡನ್ನು ಪಿಡಬ್ಲ್ಯೂಡಿಯವರು ತೆಗೆದುಕೊಂಡರೋ, ಅದರ ಬಗ್ಗೆ ಪರಿಹಾರ ಕೊಡುವುದಕ್ಕೆ ಒಂದು ಆರ್ಡರ್ ಇಷ್ಯೂ ಮಾಡಿದ್ದರೂ ಸಹ, ೧೫–೨೦ ವರ್ಷ ಕಳೆದಿದ್ದರೂ ಸಹ, ಈ ಸಮಸ್ಯೆ ಇನ್ನೂ ಬಗೆಹರಿದಿಲ್ಲ ಹಾಗೆ ಇದೆ. ಇದರ ಬಗ್ಗೆ ಆ ಜಮೀನಿನವರಿಗೆ ಹಣ ಕೊಡಿಸುವ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಅದರ ಬಗ್ಗೆ ವಿವರಗಳನ್ನು ಕೊಟ್ಟರೆ, ೩ ತಿಂಗಳು ಟೈಂ ತೆಗೆದುಕೊಂಡು ಅಥವಾ ಅದಕ್ಕೆ ಒಂದು ಟೈಂ ಫಿಕ್ಸ್ ಮಾಡಿ, ಕೊಡಿಸುವಹಾಗೆ ಪ್ರಯತ್ನ ಮಾಡುತ್ತೇನೆ.

SRI MOHAMMED LAIKUDDIN.—Sir, just now Hon'ble Minister has stated that the appeal provision will be made for all the remanded cases from the High Court and the cases will be dealt with after the remand of the cases. I would like to know as to whether such provision will be made for the cases pending before the Tribunals under Certain Inams Abolition Act, because there are several cases pending in the Land Tribunals in our area, namely Hyderabad Karnataka area Whether the appeal provision will be made for such cases also ? Secondly as regards water rate, in Bidar taluka, there are two lift irrigation schemes in Chillargi and Chimcola where water rate has been imposed. As a Chillargi and Chimcola where water rate has been imposed. As a matter of fact, both these lift irrigation schemes are total failure. I would request the Hon'ble

Minister to write off water rate in these areas. Thirdly, for Bidar District Water Supply scheme, a provision of Rs. 6 crores has been made in the budget, I would like to know as to how much money will be spent for implementation of water supply for Bidar this year and within what period the work will be completed ?

SRI S. R. BOMMAI.—Sir, the appeal provision will be made against the decisions of the Tribunals. I do not know as to whether the Inam Abolition Act will also came defore the Aribunal, if they claim tenancy. The Appellate Authority will be competent to hear Appeal against the decisions of the Tribunals only, let them be under any Act. But if there is claim of tenancy and the tenancy matter has been decided by the Tribunals, then there be Appeal provision. Secondly the Lift Irrigation does not come under this Water rate. They come under different category. If no water is supplied, it is not legitimate for the Government to levy water rate. So far as Water supply scheme to Bidar District is concerned Bidar is no-industry area and specifically money has been provided for water supply scheme. I do not know the schedule of the project. But the project will be completed. within the prescrided period.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಉಪಾಧ್ಯಕ್ಷರೆ, ಈ ರಾಜ್ಯದಲ್ಲಿ ಪ್ರಿವೆನ್‌ಷನ್ ಆಫ್ ಫ್ರಾಗ್‌ಮೆಂಟೇಷನ್ ಆ್ಯಕ್ಟ್ ಜಾರಿಯಲ್ಲಿರುವುದರಿಂದ, ರೈತರಿಗೆ ಅನೇಕ ವ್ಯವಹಾರಗಳಿಗೆ ಬಹಳ ತೊಂದರೆಯಾಗಿದೆ. ಅವರು ತಮ್ಮ ಜಮೀನುಗಳನ್ನು ಮಾರಾಟಮಾಡತಕ್ಕಂಥಾದ್ದರಲ್ಲಾಗಲೀ, ಅಥವಾ ಅಣ್ಣತಮ್ಮಂದಿರ ಭಾಗ ಮಾಡಿಕೊಳ್ಳುವುದಕ್ಕಾಗಲೀ ಅವುಗಳನ್ನು ರಿಜಿಸ್ಟ್ರೇಷನ್ ಮಾಡುವುದರ ಬಗ್ಗೆ ಖಾತೆ ಮಾಡಿಕೊಳ್ಳುವುದರ ಬಗ್ಗೆ ಬಹಳ ತೊಂದರೆಯಾಗಿವೆ. ಅದಲ್ಲದೆ, ಸರ್ಕಾರ ಕೊಡತಕ್ಕಂಥ ಸೌಲಭ್ಯಗಳನ್ನು ಸಹ ಅವರು ಪಡೆದುಕೊಳ್ಳುವುದಕ್ಕೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಇದನ್ನು ತೆಗೆದುಹಾಕತಕ್ಕಂಥ ವಿಚಾರದಲ್ಲಿ ಸರ್ಕಾರದವರು ಏನಾದರೂ ಯೋಚನೆ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಇನ್ನು ಇದರ ಜೊತೆಗೆ, ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ಭೂಮಿಗಳನ್ನು ಮಾರಾಟ ಮಾಡಿದಾಗ, ರಿಜಿಸ್ಟ್ರೇಷನ್ ಮಾಡುವ ವೇಳೆಯಲ್ಲಿ ಮಾರಾಟ ಮಾಡುವವನಿಗೂ ಮತ್ತು ಕೊಂಡು ಕೊಳ್ಳುವವನಿಗೂ ಬಹಳ ತೊಂದರೆಯಿದೆ. ಕಾರಣ ಒಂದು ಜಮೀನಿನ ಸರ್ವೆ ನಂಬರಿಗೆ ಸೇರಿದಹಾಗೆ, ೨೦ ಎಕರೆ ಇರುತ್ತದೆ, ೧೦೦ ಎಕರೆ ಇರುತ್ತದೆ ನಾಲ್ಕಾರು ತರಹ ಇರುತ್ತದೆ. ಒಂದು ಭೂಮಿ ಇರುವ ಹಾಗೆ ಇನ್ನೊಂದು ಭೂಮಿ ಸಾಮಾನ್ಯವಾಗಿ ಇರುವುದಿಲ್ಲ. ಒಂದು ಎಕರೆ ಭೂಮಿ ಹತ್ತು ಸಾವಿರ ರೂಪಾಯಿಯಾದರೆ ಮತ್ತೊಂದು ಭೂಮಿ ಒಂದು ಎಕರೆಗೆ ಐನೂರು ರೂಪಾಯಿ ಸಹ ಇರುತ್ತದೆ. ಯಾವುದೇ ಒಂದು ಜಮೀನನ್ನು ರಿಜಿಸ್ಟರ್ ಮಾಡುವಾಗ, ಸ್ಟ್ಯಾಂಪ್ ಡ್ಯೂಟಿ ಫಿಕ್ಸ್ ಮಾಡಬೇಕಾದರೆ. ೧೦ ವರ್ಷ ಆವರೇಜ್ ತೆಗೆದುಕೊಂಡು ನಿಗದಿ ಮಾಡಿ ರಿಜಿಸ್ಟ್ರೇಷನ್ ಮಾಡುತ್ತಾರೆ. ಒಬ್ಬ ಮನುಷ್ಯ ನ್ಯಾಯವಾಗಿ ಒಂದು ಎಕರೆಯನ್ನು ೩ ಸಾವಿರ ರೂಪಾಯಿಗೆ ತೆಗೆದುಕೊಂಡರೂ ಕೂಡ, ಅವರು ನಿಗದಿಮಾಡಿದ ದರದಂತೆ ೧೫ ಸಾವಿರ ರೂಪಾಯಿನ ಸ್ಟ್ಯಾಂಪ್ ಡ್ಯೂಟಿ ತೆಗೆದುಕೊಂಡು ರಿಜಿಸ್ಟ್ರೇಷನ್ ಮಾಡಿಕೊಳ್ಳಬೇಕಾಗುತ್ತದೆ. ಇಂಥಾ ಕೆಲವೊಂದು ಪರಿಸ್ಥಿತಿ ಇದೆ. ಇದರಲ್ಲಿ ಒಂದು ರೀತಿ ಕೊಳ್ಳತಕ್ಕಂತಹವರಿಗೆ ಹೊರೆಯಾಗುತ್ತದೆ, ಇನ್ನೊಂದು ರೀತಿಯಲ್ಲಿ ಸರ್ಕಾರಕ್ಕೆ ಲಾಭದಾಯಕವಾಗುತ್ತದೆ. ಈ ಬಗ್ಗೆ ಕೊಡತಕ್ಕಂಥ ರೈತರಿಗೆ ತೊಂದರೆಯಾಗುವುದರಿಂದ, ನಾನು ಈ ಬಗ್ಗೆ ಕೇಳುವುದೇನೆಂದರೆ, ಆ ಜಮೀನಿನ ಒಂದು ಅಸೆಸ್‌ಮೆಂಟ್ ಪ್ರಕಾರ, ರಿಜಿಸ್ಟ್ರೇಷನ್ ಮಾಡುವಂತೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ವೆ ಇಲಾಖೆಯವರು ಭೂಮಿಯನ್ನು ವಿಂಗಡಣೆ ಮಾಡಿ ರೇಟನ್ನು ಫಿಕ್ಸ್ ಮಾಡಿದ್ದಾರೆ. ಅದರ ಮೇರೆಗೆ ರಿಜಿಸ್ಟ್ರೇಷನ್ ಫೀ ಮತ್ತು ಸ್ಟ್ಯಾಂಪ್ ಡ್ಯೂಟಿಯನ್ನು. ೧೦ ಪರ್ಸೆಂಟ್. ೨೦ ಪರ್ಸೆಂಟ್, ಅಥವಾ ೧೦೦ ಪರ್ಸೆಂಟ್ ಈ ರೀತಿಯಲ್ಲಿ

ಅವುಗಳ ಸ್ಟ್ಯಾಂಪ್ ಡ್ಯೂಟಿ ಮತ್ತು ರಿಜಿಸ್ಟ್ರೇಶನ್ ಫೀಯನ್ನು ನಿರ್ಧಾರ ಮಾಡಿದರೆ, ಇದರಿಂದ ರೈತರಿಗೆ ಉಪಯೋಗವಾಗುತ್ತದೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಎಸ್. ಆರ್, ಬೊಮ್ಮಾಯಿ.—ಮೊದಲನೇಯದು ಫ್ರಾಗ್‌ಮೆಂಟೇಶನ್ ಆ್ಯಕ್ಟ್ ಅದು ಈಗ ಜಾರಿಯಲ್ಲಿದೆ. ಈಗಾಗಲೇ ನಾವು ದಕ್ಷಿಣ ಕನ್ನಡ ಜಿಲ್ಲೆ ಬಗ್ಗೆ ಮಾತ್ರ ವಿಮುಕ್ತ ಮಾಡಿದ್ದೇವೆ. ಮಾರಾಟ ಮಾಡುವುದರ ಬಗ್ಗೆ ರೈತರಿಗೆ ತೊಂದರೆಯಾಗುವುದನ್ನು ಗಮನಿಸಿ, ಈಗಾಗಲೇ ಇದರ ಬಗ್ಗೆ ತಿದ್ದುಪಡಿ ಮಾಡಿದ್ದೇವೆ. ಮಾರಾಟ ಮಾಡಬೇಕಾದರೆ, ಪಕ್ಕದ ಜಮೀನಿನವರಿಗೆ ಕೊಡಬೇಕು, ಅವರು ತೆಗೆದುಕೊಳ್ಳದಿದ್ದರೆ ಬೇರೆಯವರಿಗೆ ಕೊಡಬಹುದು ಎಂದು.

ಶ್ರೀ ಎಸ್. ಪ್ರಭಾಕರ ರಾಣೆ.—ಮಾನ್ಯ ಸಭಾಧ್ಯಕ್ಷರೇ. ಮೊನ್ನೆ ಮಾನ್ಯ ಸಚಿವರ ಉತ್ತರದಲ್ಲಿ ಪುನರ್ ವಸತಿ ಬಗ್ಗೆ ಈ ಸರಕಾರದ ಧೋರಣೆಯನ್ನು ಸ್ಪಷ್ಟಪಡಿಸಬಹುದೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಆ ಬಗ್ಗೆ ಏನನ್ನೂ ಹೇಳಲಿಲ್ಲ. ಉತ್ತರ ಕನ್ನಡ ಜಿಲ್ಲೆಯ ಬಗ್ಗೆ ಹೇಳುವುದಾದರೆ, ಅಲ್ಲಿನ ಪುನರ್ ವಸತಿ ಸಮಸ್ಯೆಯು ಅತೀ ಗಂಭೀರತೆಯನ್ನು ಪಡೆದಿದೆ. ಇದರಲ್ಲಿ ಒಂದೇ ಒಂದು ಉದಾಹರಣೆಯನ್ನು ಕೊಡಬೇಕಾದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ಹತ್ತು ಸಾವಿರಕ್ಕಿಂತಲೂ ಹೆಚ್ಚು ಜನರು ಅರೆಸಂಚಾರಿ ಜನಾಂಗದವರು ಅಂದರೆ ಗೌಳಿ ಜನಾಂಗದವರು ಇದ್ದಾರೆ. ದಟ್ಟವಾದಂತಹ ಅರಣ್ಯದಲ್ಲಿ ಅವರುಗಳು ದನಗಳನ್ನು ಮೇಯಿಸುತ್ತಾ, ಅರಣ್ಯದಲ್ಲಿಯೇ ವಾಸ ಮಾಡತಕ್ಕಂತಹ ಜನಾಂಗವು ಅದಾಗಿದೆ. ಸರಕಾರದವರು ಈ ಸಮಾಜಕ್ಕೆ ಈಗಾಗಲೇ ಪುನರ್‌ವಸತಿ ಕಟ್ಟಿಸಬೇಕೆಂದು ಹೇಳಿ, ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್ ೧೯೮೩ರಲ್ಲಿ ಇವರಿಗೆ ಸರ್ವೆ ಮಾಡಲು, ಅದರ ವರದಿ ಮಾಡಲು ಕೇಳಿಕೊಂಡಿತ್ತು. ಅದರ ಪ್ರಕಾರ ಈಗಾಗಲೇ ಸರಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ ಆದುದರಿಂದ ನಾನು ಕೇಳುವುದೇನೆಂದರೆ ಉತ್ತರ ಕನ್ನಡ ಜಿಲ್ಲೆಯ, ಹಳಿಯಾಳ, ಮುಂಡಗೋಡ, ಎಲ್ಲಾಪುರ ತಾಲ್ಲೂಕುಗಳಲ್ಲಿ ಈ ಗೌಳಿ ಜನಾಂಗ ಹೆಚ್ಚಾಗಿ ಅರಣ್ಯಗಳಲ್ಲಿ ವಾಸ ಮಾಡುತ್ತಾ ಇದೆ. ಈ ದಟ್ಟ ಅರಣ್ಯದಲ್ಲಿ ಅವರು ವಾಸ ಮಾಡುವುದರಿಂದ ಅರಣ್ಯದ ಹಾನಿ ಉಂಟಾಗುತ್ತದೆ ಎಂದು ತಿಳಿದು ಕೊಂಡು ಅರಣ್ಯ ಇಲಾಖೆಯವರು ಅವರಿಗೆ ಪುನರ್‌ವಸತಿ ಕಲ್ಪಿಸುವುದು ಆವಶ್ಯಕ ಎಂದು ತಿಳಿದು ಕೊಂಡು ಕೆಲವು ಜಮೀನನ್ನು ಈಗಾಗಲೇ ಅವರಿಗಾಗಿ ಬಿಡುಗಡೆ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಹಳಿಯಾಳ ತಾಲ್ಲೂಕಿನ ಜತಗಾ ಗ್ರಾಮದ ಸರ್ವೆ ನಂಬರ್ ೧೨.೮೦ರಲ್ಲಿ ಫಾರೆಸ್ಟ್ ಇಲಾಖೆಯವರು ರೆವಿನ್ಯೂ ಇಲಾಖೆಗೆ ಸುಮಾರು ೧೧೨ ಎಕರೆಯನ್ನು ವರ್ಗಾವಣೆ ಮಾಡಿದ್ದಾರೆ. ಮತ್ತು ಈ ವರ್ಗಾವಣೆ ಮಾಡಿದ ಮುಖ್ಯ ಉದ್ದೇಶ ಏನೆಂದರೆ ಗೌಳಿ ಜನಾಂಗದವರಿಗೆ ಪುನರ್‌ವಸತಿ ಕಲ್ಪಿಸುವುದು ಆಗಿದೆ. ಆದರೆ ಜಿಲ್ಲಾಧಿಕಾರಿಯವರು ಇದುವರೆಗೂ ಹಂಚುವ ಕ್ರಮವನ್ನು ಕೈಗೊಂಡಿಲ್ಲ. ಆದರೆ ಕೇವಲ ಅವರು ಒಂದು ಪತ್ರದಲ್ಲಿ ರೆವಿನ್ಯೂ ಕಮಿಷನರ್‌ರವರಿಗೆ ಕ್ಲಾರಿಫಿಕೇಷನ್ ಕೇಳಿದ್ದಾರೆ. ಯಾವ ರೀತಿಯಲ್ಲಿ ಅದರ ಹಂಚಿಕೆಯನ್ನು ಮಾಡಬೇಕೆಂದು ಕೇಳುವ ಮೂಲಕ ಪತ್ರ ವ್ಯವಹಾರದಲ್ಲಿ ಈ ಕಾರ್ಯಕ್ರಮ ಮುಂದೆ ಹೋಗುತ್ತಾ ಇದೆ. ಈ ಜನಾಂಗದವರಿಗೆ ಆದಷ್ಟು ಬೇಗ ಪುನರ್‌ವಸತಿ ಕಲ್ಪಿಸುವ ವ್ಯವಸ್ಥೆ ಕೂಡಲೇ ಆಗಬೇಕು, ಅದಕ್ಕೆ ಜತಗಾ ಗ್ರಾಮದ ೧೧೨ ಎಕರೆ ಜಾಗ ಏನು ಬಿಡುಗಡೆ ಮಾಡಿದ್ದಾರೆ, ಅದನ್ನು ಕೊಡಬೇಕು. ಭಾರಿ ದಟ್ಟ ಅರಣ್ಯ ಹಾಳಾಗಬಾರದು ಎನ್ನುವ ಉದ್ದೇಶದಿಂದ ಮಾಡಿದ್ದಾರೆ ಅದನ್ನು ಕೂಡಲೇ ಹಂಚುವ ವ್ಯವಸ್ಥೆ ಮಾಡುತ್ತೀರಾ ? ಈ ವಿಷಯದಲ್ಲಿ ತಮ್ಮ ನಿರ್ಧಾರವನ್ನು ಹೇಳಬೇಕು. ಇನ್ನೊಂದು, ತಾವು ಕಳೆದ ಚುನಾವಣೆ ಪೂರ್ವದಲ್ಲಿ ಕಾಳಿ ಜಲವಿದ್ಯುತ್ ಯೋಜನೆಯಿಂದ ಫಸ್ಟ್ ಸ್ಟೇಜ್, ಥರ್ಡ್ ಫೇಸ್ ಮುಳುಗಡೆಯಾಗುವಂತಹ ಜನರು ಏನಿದ್ದಾರೆ, ಅಂದರೆ ೪೫೦ಕ್ಕಿಂತ ಹೆಚ್ಚು ಕುಟುಂಬಗಳವರಿಗೆ ಪುನರ್‌ವಸತಿ ಕಲ್ಪಿಸುತ್ತೇವೆ, ಬೇರೆ ಜಮೀನನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಇವತ್ತಿನವರೆಗೂ ಯಾವ ಜಮೀನನ್ನು ಕೊಡುವ ವ್ಯವಸ್ಥೆಯನ್ನೂ ಮಾಡಲಿಲ್ಲ. ಆ ಜನರನ್ನು ಸ್ಥಳಾಂತರಗೊಳಿಸಿದ್ದಾರೆ. ಎರಡನೇ ಹಂತದಲ್ಲಿ ಕಾಳಿ ಜಲವಿದ್ಯುತ್ ಯೋಜನೆ ಸೂಪಾ ಡ್ಯಾಮ್ ಯೋಜನೆ ಏನಾಗಿದೆ ಇದರಿಂದಾಗಿ ಹಳ್ಳಿಗಳ ಮುಳುಗಡೆಯಾಗಿದೆ. ೪೫೦ಕ್ಕಿಂತಲೂ ಹೆಚ್ಚು ಕುಟುಂಬಗಳು ಯಾವುದೇ ಜಾಗ ಇಲ್ಲದೆ, ಬೇರೆಬೇರೆ ಯಾಗಿ ಅಲೆದಾಡುವಂತಹ ಪರಿಸ್ಥಿತಿ ಬಂದಿದೆ. ಅವರ ಬಗ್ಗೆ ಸದನದಲ್ಲಿ ತಾವು ಕೂಡ ಒಂದು ಹೇಳಿಕೆ ಯನ್ನು ಕೊಟ್ಟಿದ್ದೀರಿ. ಬೇರೆ ಕಡೆಯಲ್ಲಿ ಕೂಡಲೇ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೀರಿ. ಆದುದರಿಂದ ಅವರಿಗೆ ಕೂಡಲೇ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ

ಹೆಮ್ಮಡಗಾ ಬ್ಲಾಕ್‌ನಲ್ಲಿ ತಮಗೆ ಜಮೀನನ್ನು ಕೊಡಬೇಕೆಂದು ಕೇಳಿಕೊಂಡಿದ್ದರು. ಚುನಾವಣೆ ಸಮಯದಲ್ಲಿ ತಾವು ಒಂದು ಸಬ್ ಕಮಿಟಿ ಮಾಡಿದ್ದು, ಕಮಿಟಿಯು ತನ್ನ ಶಿಫಾರಸ್‌ನಲ್ಲಿ ಅಲ್ಲಿ ಜಮೀನು ಕೊಡುವುದಕ್ಕಾಗುವುದಿಲ್ಲ ಎಂದು ಮಾಡಿದ್ದಾರೆ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಅದಾದ ಮೇಲೆ, ಚಾಪೋಲಿ ಬ್ಲಾಕ್‌ನಲ್ಲಿ ಕೊಡುತ್ತೇವೆಂದು ಹೇಳಿದಾಗ ಎರಡನೇ ಹಂತದಲ್ಲಿ ಮುಳುಗಡೆಯಾಗುವಂತಹ ಜನರು ತಮ್ಮ ಪ್ರತಿಭಟನೆ ಮಾಡಿದರು. ಅದಕ್ಕೆ ಕಾರಣ ಏನೆಂದರೆ ಈಗಾಗಲೇ ಸಾವಿರಕ್ಕೂ ಹೆಚ್ಚು ಕುಟುಂಬಗಳನ್ನು ಸುಪಾ ತಾಲ್ಲೂಕು ರಾಮನಗರದ ಪಕ್ಕದಲ್ಲಿ ಪುನರ್‌ವಸತಿ ಕಲ್ಪಿಸಿದ್ದಾರೆ. ಅಲ್ಲಿ ಅವರಿಗೆ ಸರಿಯಾದಂತಹ ಸೌಕರ್ಯಗಳು, ಇನ್ನೂ ದೊರಕಿಲ್ಲ. ಅದನ್ನು ನೋಡಿ ಅದೇ ಪರಿಸ್ಥಿತಿಗೆ ತಮ್ಮನ್ನು ಹಾಕಬಾರದು ಎಂದು ಇವರ ಭಾವನೆ. ಆದುದರಿಂದ ಬೇರೆ ವ್ಯವಸ್ಥೆ ಮಾಡಬೇಕೆಂದೂ, ಪರಿಹಾರ ರೂಪದಲ್ಲಿ ನಗದು ಹಣವನ್ನಾದರೂ ಕೊಡಬೇಕೆಂದು ಕೇಳಿಕೊಂಡಿದ್ದರು. ಆದರೆ ತಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಈತನಕ ನಗದು ಹಣ ಕೊಡುವ ವ್ಯವಸ್ಥೆಯನ್ನು ಮಾಡಿಲ್ಲ. ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಪುನರ್‌ವಸತಿ ವಿಚಾರದಲ್ಲಿ ಸರಕಾರ ಆಲೋಚನೆ ಮಾಡಿ ಎಲ್ಲೆಲ್ಲಿ ಜಮೀನು ಕೊಡಲಿಕ್ಕೆ ಸಾಧ್ಯವೋ ಅಲ್ಲಿ ಜಮೀನನ್ನ ಕೊಡಬಹುದು. ಕೆಲವುಕಡೆಗಳಲ್ಲಿ ಜಮೀನು ಇಲ್ಲ ಅಂತಹವರಿಗೆ ನಗದು ಹಣವನ್ನು ಕೊಡುವಂತಹ ವಿಚಾರವೂ ಕೂಡಾ ಸರಕಾರದ ಪರಿಶೀಲನೆಯಲ್ಲಿದೆ. ಬಯಲು ಸೀಮೆಯಲ್ಲಿ ಹೋದರು ಬರೀ ಜಮೀನು ಕೊಡುವುದಾಗಲೀ, ಪುನರ್‌ವಸತಿ ಕಲ್ಪಿಸತಕ್ಕಂತಾದ್ದಾಗಲೀ ಕಷ್ಟ ಇದೆ. ಅದಕ್ಕೆ ಅವರಿಗೆ ನಗದು ಕೊಡುವುದು ಸರಕಾರದ ಪರಿಶೀಲನೆಯಲ್ಲಿದೆ. ತಾವು ಹೇಳಿದಂತಹ ಗೌಳೀ ಜನಾಂಗದ ಬಗ್ಗೆ ಕಾಳಿನದಿ ಪ್ರಾಜೆಕ್ಟ್‌ನ ವಿಚಾರದಲ್ಲಿ ತಾವು ಕೂಡಾ ಆ ಸಮಿತಿಯಲ್ಲಿ ಇದ್ದೀರಿ. ನಗದು ಹಣವನ್ನು ಕೊಡಬೇಕೋ, ಅರಣ್ಯ ಭೂಮಿಯನ್ನು ಕೊಡಬೇಕೋ ಎನ್ನುವುದರ ಬಗ್ಗೆ ಸಮಿತಿಯು ತೀರ್ಮಾನ ಮಾಡಬೇಕು, ಅದರಂತೆ ಕೊಡುತ್ತೇವೆ. ಒಟ್ಟಿನಲ್ಲಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಪ್ರಭಾಕರ ರಾಣೆ.—ಅಧ್ಯಕ್ಷರೇ, ಹಳಿಯಾಳದ ಜತಗಾ ಗ್ರಾಮದಲ್ಲಿ ಈಗಾಗಲೇ ೧೧೪ ಎಕರೆಯನ್ನು ಬಿಡುಗಡೆ ಮಾಡಿದ್ದಾರೆ. ಆ ಪೇಪರ್‌ಗಳು ಕಮಿಶನರ್ ಕಚೇರಿಯಲ್ಲಿ ಪೆಂಡಿಂಗ್ ಇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಆರ್. ಲಕ್ಷಯ್ಯ.—ಸನ್ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಗ್ರಾಮಗಳ ನಿರ್ಮಾಣವಾಗಿ ಬಹಳ ಕಾಲ ಸಂದಿದೆ. ಈ ಹಳ್ಳಿಗಳನ್ನು ಎಷ್ಟು ಗ್ರಾಮ ಠಾಣಾ ಇದೆ ಎಂಬುದನ್ನು ಸರ್ವೆ ಮಾಡಿಸುವುದಕ್ಕೆ ಅನೇಕ ಸಾರಿ ರೆವಿನ್ಯೂ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಈಗ ಈ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಾ ಇದ್ದೇನೆ. ಎಲ್ಲಾ ಗ್ರಾಮಗಳನ್ನು ಸಮಗ್ರವಾಗಿ ಸರ್ವೆ ಮಾಡಿಸಿದರೆ, ಹಳ್ಳಿಗಳ ಚೆಕ್ಕುಬಂದಿಗಳನ್ನು ನಿಗದಿ ಮಾಡಿದರೆ, ಜನಗಳಿಗೆ ತುಂಬಾ ಅನುಕೂಲ ಆಗುತ್ತದೆ. ಎರಡನೆಯದಾಗಿ ರೈತ ಸರ್ವೆಯರ್‌ಗೆ ಅರ್ಜಿ ಹಾಕಿದರೆ ಆರು ತಿಂಗಳು ಆದರೂ ಕೂಡಾ ಸರ್ವೆಯರ್ ಬಂದು ಚೆಕ್ಕು ಬಂದಿಯನ್ನು ತೋರಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಇದನ್ನು ತ್ವರಿತಗೊಳಿಸುವುದಕ್ಕೆ ಸರಕಾರದವರು ಸೂಕ್ತ ಸಿಬ್ಬಂಧಿ ನೇಮಕವನ್ನು ಮಾಡಬೇಕು. ಹಾಗೂ ಇಂತಹ ಕೆಲಸಗಳು ತ್ವರಿತವಾಗಿ ನಡೆಯುವಂತೆ ನೋಡಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ರೈತರು ರಕ್ತ ಹೀರುವಂತಹ ವಿಲೇಜ್ ಅಕೌಂಟೆಂಟ್‌ಗಳ ವಿಚಾರ ಎಲ್ಲರಿಗೂ ಗೊತ್ತಿದೆ. ಇದನ್ನು ಕೆಳಮಟ್ಟದಲ್ಲಿ ಸರಿ–ಪಡಿಸಿದರೆ ಇದನ್ನು ಸರಿಮಾಡಲು ಸಾಧ್ಯವಾಗುತ್ತದೆ. ಈ ವಿಷಯದಲ್ಲಿ ನಿಮ್ಮ ಕಾಲದಲ್ಲಿ ಇದನ್ನು ಸರಿಪಡಿಸಲು ಸಾಧ್ಯವೆಂದು ತಿಳಿದುಕೊಂಡಿದ್ದೇನೆ. ತಾವುಗಳು ದಿಟ್ಟ ಹೆಜ್ಜೆಯನ್ನು ಈ ವಿಲೇಜ್ ಅಕೌಂಟೆಂಟ್ಸ್‌ಗಳ ವಿಚಾರದಲ್ಲಿ ಇಡಬೇಕು. ಧೈರ್ಯ ಮಾಡಿ ನಾಲ್ಕೈದು ಜನರನ್ನು ತೆಗೆಯಿರಿ ಆಗ ತಾವಾಗಿಯೆ ಸರಿಯಾದ ದಾರಿಯಲ್ಲಿ ಹೋಗಲು ಪ್ರಾರಂಭಿಸುತ್ತಾರೆ. ಈಗ ಅವರು ಏನು ತಪ್ಪುಗಳನ್ನು ಮಾಡಿದ್ದರೂ ಕೂಡಾ ರಕ್ಷಣೆ ಕೊಡುತ್ತಿದ್ದಾರೆ. ಹಾಗೆ ಆಗಬಾರದು ಇನ್ನು ಈ ಗುಂಡು ತೋಪುಗಳನ್ನು ನಿರ್ದಿಷ್ಟವಾಗಿ ಸರ್ವೆ ಮಾಡಿಸಿ ಅದನ್ನು ಉಳಿಸುವುದಕ್ಕೆ ಸರಕಾರದವರು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ ಯಾವುದೋ ೨೫ ವರ್ಷಗಳಿಂದ ಆಗಿರತಕ್ಕಂತಹ ಸಾಗುವಳಿ ಆಗುತ್ತಾ ಬಂದಿದೆ. ಅದನ್ನು ಸರಿಮಾಡಿಸಿದರೆ ರೈತರಿಗೆ ಉಪಕಾರ ಮಾಡಿದಂತಾಗುತ್ತದೆ. ಸರಕಾರಕ್ಕೂ ಕೋಟ್ಯಾಂತರ ರೂಪಾಯಿಗಳ ವರಮಾನ ಬರುತ್ತದೆ. ಅದಕ್ಕೆ ಕೂಡಲೇ ದಿಟ್ಟ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್, ಆರ್. ಬೊಮ್ಮಾಯಿ.—ಮಾನ್ಯ ಲಕ್ಷ್ಮಯ್ಯನವರು ಹೇಳಿದಂತಹ ಮಾತನ್ನು ಒಪ್ಪುತ್ತೇ . ಗ್ರಾಮಗಳ ಮತ್ತು ನಗರ ಸರ್ವೆ ಕೆಲಸವನ್ನು ಹಂತ ಹಂತವಾಗಿ ಮಾಡಿಸತಕ್ಕಂತಹ ಭರವಸೆಯನ್ನು ಕೊಡುತ್ತೇನೆ. ಭಗರ್‌ಹುಕುಮ್ ಸಾಗುವಳಿ ಜಮೀನನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ಆಲೋಚನೆಯಲ್ಲಿದೆ, ಇದರ ಬಗ್ಗೆ ಕೂಡಲೇ ನಿರ್ಣಯ ತೆಗೆದುಕೊಳ್ಳಲಾಗುವುದು. ಇನ್ನು ಗ್ರಾಮಲೆಕ್ಕಿಗರ ವಿಚಾರದಲ್ಲಿ ಪೀನಲ್ ಪ್ರಾವಿಷನ್ ಮಾಡುವ ಆಲೋಚನೆ ಇದೆ.

ಶ್ರೀ ಆರ್. ವೆಂಕಟರಾಮಯ್ಯ.—ರೀಜನಲ್ ಇಮ್‌ಬ್ಯಾಲೆನ್ಸ್ ಸರಿಮಾಡುತ್ತೇವೆಂದು ಹೇಳಿದ್ದೀರಿ, ವರದಿಯಲ್ಲಿ ನೋಡುವಾಗ ಕೆಲವು ಪ್ರಾಜೆಕ್ಟ್‌ಗಳಿಗೆ ೮೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆದರೆ ಬಯಲು ಸೀಮೆ ಪ್ರದೇಶದ ಬಗ್ಗೆ ಚಿಂತನೆಯನ್ನೇ ಮಾಡಿಲ್ಲ. ವರ್ಷವರ್ಷವೂ ಬರಗಾಲಕ್ಕೆ ತುತ್ತಾಗತಕ್ಕಂತಹ ಪ್ರದೇಶದ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ೧೯೮೨ ಇಸವಿಯಿಂದ ಹರಿಜನೇತರರು ಅಕ್ರಮವಾಗಿ ಸಾಗುವಳಿ ಮಾಡಿರುವವರಿಗೆ ಅರ್ಜಿ ಹಾಕುವುದಕ್ಕೆ ಅನುಮತಿ ಕೊಡಬೇಕೆಂದು ಹೇಳಿದ್ದೇವು. ಇದರ ಬಗ್ಗೆ ಸರ್ಕಾರದ ನಿಲುವು ಏನು ! ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ತಕ್ಷಣ ಮಾಡಬೇಕು. ಇನ್ನು ನಮ್ಮ ಜಿಲ್ಲೆಯಲ್ಲಿ ಕೆ.ಜಿ.ಎಫ್. ನಲ್ಲಿ ಎರಡುವರೆ ಲಕ್ಷ ಜನರಿರತಕ್ಕಂತಹ ಸ್ಥಳ, ಅಲ್ಲಿ ಬಂಗಾರುಪೇಟೆಯನ್ನು ಪ್ರತ್ಯೇಕ ಮಾಡಿ ತಾಲ್ಲೂಕು ಕೇಂದ್ರವನ್ನಾಗಿ ಮಾಡಿ ತಹಶೀಲ್ದಾರ್‌ರನ್ನು ಹಾಕಬೇಕೆಂದು ಹೇಳಿದ್ದೇವು. ಇದರ ಬಗ್ಗೆ ಮಂತ್ರಿಯವರಿಂದ ಸ್ಪಷ್ಟನೆ ಬಯಸುತ್ತೇನೆ. ತಾಲ್ಲೂಕು ಆಫೀಸಿನಲ್ಲಿ ಸಾರ್ವಜನಿಕರು ಅರ್ಜಿಗಳನ್ನು ಕೊಟ್ಟಾಗ ನಿಧಾನ ಮಾಡುತ್ತಾರೆ. ತಾಲ್ಲೂಕು ಆಫೀಸುಗಳಿಗೆ ಜೆರಾಕ್ಸ್ ಮೀಷನ್‌ಗಳನ್ನು ಒದಗಿಸಿ ಬೇಗ ಇತ್ಯರ್ಥ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಯವರು ತಿಳಿಸಬೇಕೆಂದು ಹೇಳುತ್ತೇನೆ. ಇನ್ನು ರೆವಿನ್ಯೂ ಸೈಟುಗಳ ಬಗ್ಗೆ ಬೆಂಗಳೂರು ಮತ್ತು ಕೋಲಾರದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕನ್‌ವರ್‌ಷನ್ ಚಾರ್ಜೆಸ್‌ನ್ನು ವಿಪರೀತವಾಗಿ ಹೆಚ್ಚು ಮಾಡಿದ್ದೀರಿ, ಇದರಿಂದ ಬಡವರಿಗೆ ತೊಂದರೆಯಾಗಿದೆ. ಇದರ ಬಗ್ಗೆ ರಿಯಾಯಿತಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ. ಬಯಲು ಸೀಮೆಗೆ ಸಂಬಂಧಪಟ್ಟ ಹಾಗೆ ಒಣಬೇಸಾಯ ಅಭಿವೃದ್ಧಿ ಮಂಡಳಿ ಯೋಜನೆಯನ್ನು ರೂಪಿಸಿದ್ದೇವೆ. ಇದರ ಬಗ್ಗೆ ಬೇಗ ಕ್ರಮ ತೆಗೆದುಕೊಳ್ಳುತ್ತೇವೆ. ಲ್ಯಾಂಡ್ ಗ್ರ್ಯಾಂಟ್ ಕಮಿಟಿಗಳನ್ನು ಬೇಗ ಮಾಡುತ್ತೇನೆ. ಸ್ಟ್ಯಾಂಪ್ ಡ್ಯೂಟಿ ಬಗ್ಗೆ ಆಲೋಚನೆ ಮಾಡುತ್ತೇನೆ. ಮತ್ತೇ ೧೯೮೨ರಿಂದ ಹೊಸದಾಗಿ ಅಕ್ರಮ ಸಾಗುವಳಿ ಮಾಡಿರುವವರಿಂದ ಅರ್ಜಿ ತೆಗೆದುಕೊಳ್ಳುವುದರ ಬಗ್ಗೆಯೂ ಆಲೋಚನೆ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೧೯೭೨ರ ಸರ್ಕ್ಯೂಲರ್ ಪ್ರಕಾರ ೮೦ ಸಾವಿರ ಎಕರೆ ಭೂಮಿಯನ್ನು ಕೊಟ್ಟಿದ್ದೀರಿ. ಇದರಿಂದ ಬಹಳಷ್ಟು ಅನ್ಯಾಯವಾಗಿದೆ. ಹಂಗಾಮಿ ಸಾಗುವಳಿಯನ್ನು ಖಾಯಂ ಮಾಡುವುದರಿಂದ ದೊಡ್ಡ ಪ್ರಮಾಣದಲ್ಲಿ ಅನ್ಯಾಯವಾಗುತ್ತದೆ. ಇದನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳಿದ್ದೆ. ಇದರ ಬಗ್ಗೆ ಏನು ಹೇಳಿದ್ದೀರಿ. ರೀಜನಲ್ ಇಮ್‌ಬ್ಯಾಲೆನ್ಸ್ ಬಗ್ಗೆ ೭ ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೈದರಾಬಾದ್ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಒಂದು ಕಮಿಟಿಯವರು ವರದಿಯನ್ನು ಸಹ ಕೊಟ್ಟಿದ್ದರು, ಆ ಭಾಗದಲ್ಲಿ ಬರತಕ್ಕ ರಸ್ತೆಗಳು, ಶಾಲಾ ಕಟ್ಟಡಗಳು, ಇನ್ನಿತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಅಂಕಿ ಸಂಖ್ಯೆಗಳನ್ನು ತರಿಸಿ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ರಚನೆ ಮಾಡಬೇಕು ಅದಕ್ಕಾಗಿ ವಿಶಿಷ್ಟವಾದಂತಹ ಹಣವನ್ನು ಇಟ್ಟು ಆದ್ಯತೆ ಕೊಡಬೇಕೆಂದು ತೀರ್ಮಾನ ಮಾಡಲಾಗಿತ್ತು. ತಾವು ಅಧಿಕಾರಕ್ಕೆ ಬಂದ ಮೇಲೆ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತೇವೆಂದು ಹೇಳಿಕೊಂಡು ಬಂದಿರಿ. ಈಗಲಾದರೂ ಹೆಚ್ಚಿನ ಹಣವನ್ನು ಕೊಟ್ಟು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್‌ನ್ನು ಪುನರ್ ರಚಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೭ರ ಸರ್ಕ್ಯೂಲರ್ ಪ್ರಕಾರ ಅರ್ಜಿ ಕೊಡಲಿಕ್ಕೆ ಹೇಳಿದ್ದೇವೆ. ಕೆಲವರಿಗೆ ಜಮೀನು ಕೂಡ ಕೊಡಲಾಗಿದೆ. ಸ್ವಲ್ಪ ಅರ್ಜಿಗಳು ಉಳಿದಿವೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ಎಷ್ಟು ಅರ್ಜಿಗಳು ಉಳಿದಿವೆ. ? ೧೯೮೦ರಲ್ಲಿ ಪ್ರತಿ ಜಿಲ್ಲೆಯಿಂದ ಸಮಗ್ರವಾದ ವರದಿಯನ್ನು ತರಿಸಿಕೊಂಡು ಇಡಲಾಗಿತ್ತು. ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ

ದಾಖಲೆ ಇವೆ. ಅದನ್ನು ತರಿಸಿಕೊಂಡು ನೋಡಿ. ೧೯೮೦ನೇ ಇಸವಿಯಿಂದ ಅರ್ಜಿಗಳು ಬಂದಿದ್ದರೆ, ಅಂತಹ ಅರ್ಜಿಗಳನ್ನು ರೆಗ್ಯೂಲರೈಸ್ ಮಾಡಿ. ಸರ್ಕಾರದ ಆಜ್ಞೆ ಏನು ಇದೆ ಅದನ್ನು ಮುಂದೆ ಇಟ್ಟುಕೊಂಡು ವಿಲೇಜ್ ಅಕೌಂಟೆಂಟ್ ಮತ್ತು ತಹಶೀಲ್ದಾರ್ ಸೇರಿಕೊಂಡು ಹೊಸದಾಗಿ ರೇಕಾರ್ಡ್‌ಗಳನ್ನು ಕ್ರಿಯೇಟ್ ಮಾಡಿ ರೆಗ್ಯೂಲರೈಸ್ ಮಾಡುತ್ತಿದ್ದಾರೆ ಇಲ್ಲದಿದ್ದರೆ, ೮೦,೦೦೦ ಎಕರೆ ಜಮೀನು ಬರತಕ್ಕಂತಹ ಪ್ರಶ್ನೆ ಇರಲಿಲ್ಲ. ಸಂಬಂಧಪಟ್ಟ ಜಿಲ್ಲೆಗಳಿಂದ ಅಂಕಿ ಸಂಖ್ಯೆಗಳನ್ನು ತರಿಸಿಕೊಂಡು ಇತ್ಯರ್ಥ ಮಾಡಿ. ಈಗಾಗಲೇ ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ತೀರ್ಮಾನವಾದಂತಹ ಅನೇಕ ಕೇಸುಗಳು ಹೈಕೋರ್ಟಿಗೆ ಹೋಗಿ, ಅಲ್ಲಿಂದ ಮತ್ತೇ ಲ್ಯಾಂಡ್ ಟ್ರಿಬ್ಯುನಲ್‌ಗೆ ಬಂದು ತದ್ವಿರುದ್ಧವಾಗಿ ತೀರ್ಮಾನವಾಗಿದೆ, ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಕೊಟ್ಟಿರತಕ್ಕಂತಹ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ. ಹೈದರಾಬಾದ್ ಕರ್ನಾಟಕದ ಬಗ್ಗೆ ಹಿಂದೆ ಸಮಿತಿಯನ್ನು ಮಾಡಿದ್ದರೂ ಕೂಡಾ, ಹಣ ಕೊಟ್ಟಿರಲಿಲ್ಲ. ೨ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿದ್ದರೂ ಒಂದು ಕೋಟಿ ಕೊಡುತ್ತೇವೆಂದು ಹೇಳಿದ್ದರೂ ಹಣ ಬಿಡುಗಡೆ ಮಾಡಲಿಲ್ಲ. ಯಾವುದೇ ರೀತಿಯ ಕಾನೂನು ಬದ್ಧ ಅಧಿಕಾರ ಕೊಟ್ಟಿರಲಿಲ್ಲ. ನಾವು ಬಂದ ಮೇಲೆ ಕೇಂದ್ರ ಪ್ಲಾನಿಂಗ್ ಕಮಿಷನ್‌ಗೆ ಪತ್ರ ಬರೆದಿದ್ದೇವೆ. ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶವಾಗಿದ್ದು, ಆಂಧ್ರಪ್ರದೇಶದ ತೇಲಾಂಗಣ ಡೆವಲಪ್ ಬೋರ್ಡ್ ಮಾದರಿಯಲ್ಲಿ ಕಾನೂನು ಬದ್ಧ ಅಧಿಕಾರವನ್ನು ಕೊಟ್ಟು ೫೦ ಭಾಗದ ಹಣವನ್ನು ಕೇಂದ್ರ ಸರ್ಕಾರ ಮತ್ತು ೫೦ ಭಾಗದ ಹಣವನ್ನು ರಾಜ್ಯ ಸರ್ಕಾರ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಲಾಗಿದೆ. ಬಂಗಾಳದಲ್ಲಿಯೂ ಕೂಡ ಅದೇ ರೀತಿ ಮಾಡಿದ್ದಾರೆ. ಕರ್ನಾಟಕದ ಅತಿ ಹಿಂದುಳಿದಂತಹ ಭಾಗಕ್ಕೆ ಕೇಂದ್ರ ಸರ್ಕಾರ ನೆರವು ಕೊಡಬೇಕೆಂದು ಪತ್ರ ಬರೆದಿದ್ದೇವೆ. ಕೇಂದ್ರದ ಪ್ಲಾನಿಂಗ್ ಕಮಿಷನ್‌ರವರಿಂದ ಬಂದಂತಹ ಉತ್ತರ ಹೀಗಿದೆ.

> "Kindly refer to your letter dated 10th July 1985. Regarding additional assistance for the development of backward areas in Karnataka, the planning Commission have not approved central assistance for the 7th Five Year Plan. As such, it is difficult for me to hold out any promise for providing additional assistance to Karnataka for the development of backward areas. Nevertheless, I shall have the matter looked into carefully."

ಎಂದು ಪತ್ರ ಬರೆದಿರುವುದರ ಜೊತೆಗೆ ನಾನು ಡೆಲ್ಲಿಗೆ ಹೋದಾಗ ಖುದ್ದಾಗಿ ಭೇಟಿ ಮಾಡಿ ವಿಷಯ ಪ್ರಸ್ತಾಪ ಮಾಡಿದ್ದೇನೆ. ಆ ರೀತಿ ಒಂದು ವ್ಯವಸ್ಥೆಯಾಗುವುದರಿಂದ ಕರ್ನಾಟಕದಲ್ಲಿ ಹಿಂದುಳಿದ ಭಾಗವಾದ ಹೈದರಾಬಾದ್ ಕರ್ನಾಟಕದಲ್ಲಿ ಪ್ರಗತಿ ಪರವಾದ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ತೇಲಾಂಗಣ ಮಾದರಿಯಲ್ಲಿ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಹಾಯವಾಗುತ್ತದೆ.

ಶ್ರೀ ಕೆ. ಎಂ. ಕೃಷ್ಣರೆಡ್ಡಿ.—ಮಾನ್ಯ ಅಧ್ಯಕ್ಷರೇ, ರೈತನ ಜಮೀನಿನ ದಾಖಲೆಯನ್ನು ತೋರಿಸತಕ್ಕದ್ದು ರೆವಿನ್ಯೂ ಖಾತೆ. ಈ ಖಾತೆ ಎಷ್ಟು ಜನಕ್ಕೆ ಇನ್ನು ಆಗಿಲ್ಲ. ಖಾತೆಗಳನ್ನು ಮಾಡಲು ಸರ್ಕಾರದವರು ನಿರ್ದಿಷ್ಟವಾದ ಕಾಲವನ್ನು ಗೊತ್ತು ಮಾಡಿ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ಕೊಡಬೇಕೆಂದು ಹೇಳುತ್ತೇನೆ.

ರೆವಿನ್ಯೂ ದಾಖಲೆಗೆ ಸಂಬಂಧಪಟ್ಟ ಎಲ್ಲ ವಿವರಗಳನ್ನೊಳಗೊಂಡ ಪಟ್ಟಾ ಪುಸ್ತಕಗಳನ್ನು ಕೊಡುತ್ತೇವೆಂದು ಈಗಾಗಲೇ ಸರ್ಕಾರ ಹೇಳಿದೆ. ಯಾವಾಗ ಅದನ್ನು ಕೊಡುತ್ತೀರಿ ಎಂಬ ಬಗ್ಗೆ ಸಮಯವನ್ನು ನಿಗದಿ ಮಾಡಿ ಸದನದಲ್ಲಿ ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಪ್ರಾಮುಖ್ಯವಾದ ವಿಚಾರವೆಂದರೆ ಇಡೀ ಸಿವಿಲ್ ವ್ಯವಹಾರಗಳಿಗೆ ಆಗರವಾಗಿರತಕ್ಕಂಥ ರೆವಿನ್ಯೂ ಇಲಾಖೆಯಲ್ಲಿ ನಡೆಯುವ ರೆಕಾರ್ಡ್ ಟ್ಯಾಂಪರಿಂಗ್ ವಿಚಾರದಲ್ಲಿ ಹೇಳಬೇಕಾಗಿದೆ. ಟ್ಯಾಂಪರ್ ಮಾಡಿದ ಅಧಿಕಾರಿಗಳು

ಯಾರು ಎಂಬುದನ್ನು ಗುರುತಿಸತಕ್ಕುದು ಸುಲಭ. ಏಕೆಂದರೆ ಟ್ಯಾಂಪರ್ ಮಾಡಿರತಕ್ಕದ್ದು ದಾಖಲೆಯಲ್ಲಿ ಸಿಗುತ್ತದೆ. ಆ ಆಧಾರದ ಮೇಲೆ ಅವರನ್ನು ಶಿಕ್ಷಿಸತಕ್ಕ ವಿಧಾನ ಇಲ್ಲ. ರೆವಿನ್ಯೂ ಅಧಿಕಾರಿಗಳು ಟ್ಯಾಂಪರ್ ಮಾಡಿದರೆ ಒಂದು ಪಹಣಿಯನ್ನಾಗಲೀ, ಖಾತೆಯನ್ನಾಗಲೀ ಟ್ಯಾಂಪರ್ ಮಾಡಿದರೆ ರೆವಿನ್ಯೂ ಕೋರ್ಟಿನಲ್ಲಿ ಅಪೀಲ್ ಹೋಗಿ ಎಂದು ಹೇಳುತ್ತಾರೆ. ಏನೂ ತಪ್ಪಿಲ್ಲದ ರೈತ ಅನಾವಶ್ಯಕವಾಗಿ ಅಪೀಲ್ ಹೋಗಬೇಕು. ನಾನು ಸರ್ಕಾರದಲ್ಲಿ ಕೇಳುವುದಿಷ್ಟೆ. ಟ್ಯಾಂಪರಿಂಗ್ ಮಾಡಿರುವುದು ದಾಖಲೆಯಲ್ಲಿ ಸ್ಪಷ್ಟವಾಗಿ ಕಾಣುವುದರಿಂದ ಅದಕ್ಕೆ ಒಂದು ವಿಧವಾದ ಶಿಕ್ಷೆಯನ್ನು ನಿಗದಿಪಡಿಸಿ ತಕ್ಷಣ ಆ ಅಧಿಕಾರಿಯನ್ನು ವಜಾ ಮಾಡತಕ್ಕ ಯಾವುದಾದರೂ ಶಾಸನವನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಬಗ್ಗೆ ವಿವರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ತಡವಾಗಿ ಬಂದಿದ್ದಾರೆ. ನಾನು ಆಗಲೇ ಈ ವಿಚಾರ ಹೇಳಿದೆ. ಟ್ಯಾಂಪರ್ ವಿಚಾರದಲ್ಲಿ ಪೀನಲ್ ಪ್ರಾವಿಷನ್ ಮಾಡಿ ಕ್ರಮ ತೆಗೆದುಕೊಳ್ಳುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ ಎಂದು ಹೇಳಿದ್ದೇನೆ. ಪಾಸ್ ಬುಕ್ ಬಗ್ಗೆ ಕೇಳುತ್ತಿದ್ದಾರೆ. ರಾಷ್ಟ್ರ ಪತಿಗಳ ಅಂಕಿತವಾಗಿ ಬಂದಕೂಡಲೇ ನಿಗದಿಯಾದ ಅವಧಿಯಲ್ಲೇ ಅದನ್ನು ಕೊಡುತ್ತೇವೆ.

ಶ್ರೀ ಪಡಮುಕ್ಕಿ ರತ್ನಾಕರ್.—ಮಲೆನಾಡು ಪ್ರದೇಶದ ರೈತರ ಪ್ರಮುಖವಾಗಿರತಕ್ಕ ಸಮಸ್ಯೆ ಎಂದರೆ ತುಂಡು ಜಮೀನು ಕಾಯಿದೆಯು. ಈ ಕಾಯಿದೆ ಪ್ರಕಾರ ಕಡಿಮೆ ಜಮೀನುಗಳನ್ನು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದಾಖಲು ಮಾಡುವ ಹಾಗಿಲ್ಲ. ಇದರಿಂದ ವಿಭಕ್ತ ಕುಟುಂಬಗಳಿಗೆ ಆಗತಕ್ಕ ತೊಂದರೆ ಏನೆಂದರೆ ಅವರು ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲವನ್ನು ಪಡೆಯುವ ಹಾಗಿಲ್ಲ. ಜೊತೆಗೆ ಕ್ರಾಪ್ ಲೋನನ್ನು ಬ್ಯಾಂಕುಗಳಿಂದ ಪಡೆಯುವ ಹಾಗಿಲ್ಲ. ತಮ್ಮ ದಾಖಲೆಗಳು ಪಹಣಿಯಲ್ಲಿ ಬರದೇ ಇರುವುದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕೆಂದು ಕೇಳುತ್ತೇನೆ. ಬರಗಾಲ ಪ್ರದೇಶದಲ್ಲಿ ಅಧ್ಯಯನಕ್ಕೆ ಸಮಿತಿಗಳು ಬರುತ್ತವೆ. ಈ ಸಮಿತಿಯವರು ಅಧ್ಯಯನ ಮಾಡಿ ಪರಿಹಾರ ಕೊಡುತ್ತಾರೆ. ಆದರೆ ಮಲೆನಾಡು ಪ್ರದೇಶದಲ್ಲಿ ಅತಿವೃಷ್ಟಿಯಿಂದ ಆಗಿರುವ ಹಾನಿ, ನಷ್ಟದ ಬಗ್ಗೆ ಹೆಚ್ಚು ನಿಗಾ ವಹಿಸುತ್ತಿಲ್ಲ. ಸರ್ಕಾರ ಈ ಬಗ್ಗೆ ಆಸಕ್ತಿ ತೋರುತ್ತಿಲ್ಲ. ಇದು ಬಹಳ ದುರಾದೃಷ್ಟಕರ. ಅತಿವೃಷ್ಟಿ ಪ್ರದೇಶವಾದ ಮಲೆನಾಡು ರೈತರಿಗೆ ಆಗತಕ್ಕ ಹಾನಿ, ನಷ್ಟವನ್ನು ತುಂಬಲು ಪರಿಹಾರವನ್ನು ಬರಗಾಲ ಪ್ರದೇಶಗಳಿಗೆ ಕೊಡುವ ರೀತಿಯಲ್ಲಿ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗಾಗಲೇ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಫ್ರಾಗ್ಮೆಂಟೇಷನ್ ಆಕ್ಟ್ ಬಗ್ಗೆ ಅಮೆಂಡ್‌ಮೆಂಟ್ ಮಾಡಿದ್ದೇವೆ. ಯಾರಾದರೂ ತುಂಡು ಭೂಮಿ ಮಾರಾಟ ಮಾಡಬೇಕಾದರೆ ಪಕ್ಕದ ಜಮೀನಿನವರಿಗೆ ತಿಳಿಸಬೇಕು. ಅವರು ಬೇಡ ಎಂದರೆ ಸ್ವತಂತ್ರವಾಗಿ ಅಫಿಡವಿಟ್ ಹಾಕಿದರೆ ಸಾಕು. You need not wait for the decision of Tahsildare

ಶ್ರೀ ಪಟಮುಕ್ಕ ರತ್ನಾಕರ್.—ಅವರ ಜಮೀನಿಗೆ ಸಿಗತಕ್ಕ ನ್ಯಾಯವಾದ ಬೆಲೆ ಸಿಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಒಬ್ಬರಿಗೆ ಮಾರಾಟ ಮಾಡುವುದಕ್ಕೆ ನಿಗದಿ ಮಾಡಿಕೊಂಡಿರುತ್ತೀರಿ. ಅಷ್ಟು ಹಣಕ್ಕೆ ಪಕ್ಕದವನು ತೆಗೆದುಕೊಂಡರೆ ಸರಿ. ತೆಗೆದುಕೊಳ್ಳದಿದ್ದರೆ, By filing on affidavit intimating Tahildar of this, you are free- ಅದರ ಬಗ್ಗೆ ಅಮೆಂಡ್‌ಮೆಂಟ್ ಮಾಡಿದ್ದೇವೆ.ತೊಂದರೆಯಾಗುವುದಿಲ್ಲ, Amended section has come into force.

ಶ್ರೀ ಪಟಮುಕ್ಕಿ ರತ್ನಾಕರ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಫ್ರಾಗ್ಮೆಂಟೇಷನ್ ಆಕ್ಟನ್ನು ರದ್ದು ಮಾಡಿಲ್ಲ.

ಶ್ರೀ ಬಿ.ಜಿ. ಬಸವನಗೌಡ.—ಆದಷ್ಟು ಜಾಗ್ರತೆ ಫ್ರಾಗ್ಮೆಂಟೇಷನ್ ಆಕ್ಟ್ ಕಾರ್ಯಗತ ಮಾಡಿ.

SRI S. R BOMMAI.—Amended act is in force.

ಶ್ರೀ ಪಟಮುಕ್ಕ ರತ್ನಾಕರ್.—ಎಲ್ಲಕಡೆ ಅದನ್ನು ರದ್ದು ಮಾಡಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಏತಕ್ಕೆ ರದ್ದು ಮಾಡಿಲ್ಲ ಫ್ರಾಗ್ಮೆಂಟೇಷನ್ ಆಕ್ಟ್‌ನಿಂದ ತೊಂದರೆಯಾಗಿದೆ. ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಸಿಗುತ್ತಿಲ್ಲ, ಕ್ರಾಪ್‌ಲೋನ್ ಪಡೆಯುವಹಾಗಿಲ್ಲ,

ಶ್ರೀ ಎಸ್.ಆರ್. ಬೊಮ್ಮಾಯಿ.—ದಕ್ಷಿಣ ಕನ್ನಡಕ್ಕೆ ಆಕ್ಟ್‌ನಿಂದ ಎಗ್ಸೆಂಪ್ಟ್ ಮಾಡಿದ್ದೇವೆ. ಉಳಿದ ಕಡೆಗೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ತಿದ್ದುಪಡಿ ಮಾಡಿದ್ದೇವೆ. ಮಲೆನಾಡು ಮಾತ್ರವಲ್ಲ, ಬಯಲು ಸೀಮೆಯಲ್ಲೂ ಅದು ಬರುತ್ತದೆ. ಪಕ್ಕದವರನ್ನು ಕೇಳಬೇಕು. ಅವರು ಒಪ್ಪದಿದ್ದರೆ he should file an affidavit and then only he can sell it. ಭೂ ಅಭಿವೃದ್ಧಿ ಬ್ಯಾಂಕಿನಿಂದ ಸಾಲ ಸಿಗುವುದಕ್ಕೆ ಏನೂ ತೊಂದರೆ ಇಲ್ಲ.

ಉಪಾಧ್ಯಕ್ಷರು.—ಬೆಲ್ಲದ್ ಅವರೇ, ತಾವು ಕೇಳಿ. ಅವರು ಕಡೆಯಲ್ಲಿ ಕುಳಿತಿದ್ದಾರೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ.—ಅಧ್ಯಕ್ಷರೇ

ಉಪಾಧ್ಯಕ್ಷರು.—ಬೆಲ್ಲದ್ ಅವರನ್ನು ಕರೆದಿದ್ದೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಕೆ. ಎಂ. ಮುನಿಯಪ್ಪ.—ಅಧ್ಯಕ್ಷರೇ, ತಾವು ಈ ಕಡೆಯೂ ಗಮನ ಹರಿಸಬೇಕು. ಹೊಸಬರಿಗೆ ಅವಕಾಶ ಕೊಡಿ.

ಶ್ರೀ ಸಿ. ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೆ, ಈ ಇಲಾಖೆ ನಮ್ಮ ರಾಜ್ಯದ, ನಮ್ಮ ರಾಷ್ಟ್ರದ ಬಹುಸಂಖ್ಯಾಂತರಾದ ರೈತರ ಸೇವೆ ಮಾಡುವಂಥ ಮಹತ್ವವಾದ ಇಲಾಖೆ ಇದು. ಗ್ರಾಮೀಣ ಭಾಗದಲ್ಲಿರುವಂಥ ಜನರಿಗೆ ಸೇವೆ ಮಾಡುವಂಥದ್ದು. ಆದರೆ ಈ ಇಲಾಖೆ ಈ ಜನರಿಗೆ ಬಹಳಷ್ಟು ಹಿಂಸೆಯನ್ನು ಮಾಡುತ್ತಿದೆ. ಈಗಾಗಲೇ ಈ ಬಗ್ಗೆ ಅನೇಕ ಜನರು ಹೇಳಿದ್ದಾರೆ. ಗ್ರಾಮಲೆಕ್ಕಿಗರು ಪಹಣಿ ಮುಂತಾದ ರೆಕಾರ್ಡುಗಳನ್ನು ಇಡುವ ಬಗ್ಗೆ ಅನೇಕ ಯೋಜನೆಗಳನ್ನು ಸರ್ಕಾರ ಮಾಡುತ್ತಿದೆ. ಹಿಂದಿನಿಂದ ಅಧಿಕಾರಿಗಳಾಗಲೀ, ರಾಜಕೀಯದಲ್ಲಿರತಕ್ಕ ಜನರಾಗಲೀ ಇದನ್ನು ದುರುಪಯೋಗ ಮಾಡಿಕೊಂಡು ಬಂದಿದ್ದಾರೆ. ತಾಲ್ಲೂಕುಮಟ್ಟದಲ್ಲಿ ರೆಕಾರ್ಡ್‌ಗಳು ಸಿಗುವಂತೆ ವ್ಯವಸ್ಥೆ ಮಾಡಿರುವುದಾಗಿ ಮಾನ್ಯ ಮಂತ್ರಿಗಳು ಹೇಳಿದರು. ಆದರೆ ತಾಲ್ಲೂಕು ಮಟ್ಟಕ್ಕಿಂತ ಗ್ರಾಮ ಮಟ್ಟದಲ್ಲೇ ತಲಾಟಿ ಇರುವಂಥ ಸ್ಥಳದಲ್ಲೇ ಎಲ್ಲ ರೆಕಾರ್ಡುಗಳು ಸಿಗುವಂಥ ವ್ಯವಸ್ಥೆ ಮಾಡಬೇಕು. ಈಗಾಗಲೇ ಜನತೆಯ ಶೋಷಣೆ ಹೆಚ್ಚಾಗಿದ್ದು ತಾಲ್ಲೂಕುಮಟ್ಟದಲ್ಲಿ ಅವರು ಹೋಗುವ ವ್ಯವಸ್ಥೆಯನ್ನು ತಡೆಗಟ್ಟಬೇಕು. ಗ್ರಾಮೀಣ ಮಟ್ಟದಲ್ಲೇ ತಲಾಟಿ ಇರುವಂಥ ಸ್ಥಳದಲ್ಲೇ ಎಲ್ಲಾ ರೆಕಾರ್ಡುಗಳು ಸಿಗಬೇಕು. ಗ್ರಾಮೀಣ ಮಟ್ಟದಲ್ಲಿ ಹೆಡ್‌ಕ್ವಾರ್ಟರ್ಸ್ ನಿಗದಿ ಮಾಡಿ ಆ ಗ್ರಾಮಾಧಿಕಾರಿಗೆ ವಸತಿ ಸೌಲಭ್ಯ ನೀಡಬೇಕು. ಅದನ್ನು ಮಾಡಿದ್ದೀರಾ ? ಮೂರನೆಯದಾಗಿ ನಮ್ಮಲ್ಲಿರುವಂಥ ಫಲವತ್ತಾದ ಭೂಮಿಯನ್ನು ಏನೇನೋ ಕಾರಣಗಳಿಂದ ನಿವೇಶನಗಳಿಗೆ, ಕೈಗಾರಿಕೆಗಳಿಗೆ ಉಪಯೋಗ ಮಾಡುತ್ತಾ ಬರುತ್ತಿದ್ದಾರೆ. ಇದನ್ನು ತೀವ್ರವಾಗಿ ತಡೆಗಟ್ಟಬೇಕು. ಇದರಿಂದ ದೊಡ್ಡ ಹಾನಿಯಾಗುತ್ತಿದೆ. ಈ ದೃಷ್ಟಿಯಿಂದ ಫಲವತ್ತಾದ ಭೂಮಿಯನ್ನು ಯಾವುದೇ ಕಾರಣಕ್ಕೆ ವಶಪಡಿಸಿಕೊಳ್ಳದಂತೆ ಮಾಡಲು ಸರ್ಕಾರ ಏನು ಯೋಜನೆಗಳನ್ನು ಮಾಡುತ್ತಿದೆ. ಈ ಮೂರು ವಿಷಯಗಳಿಗೆ ಮಂತ್ರಿಗಳು ಸರಿಯಾದ ಉತ್ತರಗಳನ್ನು ಕೊಡುತ್ತಾರೆಂದು ಅಪೇಕ್ಷೆಪಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರೀ ತಾಲ್ಲೂಕುಮಟ್ಟದಲ್ಲಿ ಅಲ್ಲ, ಗ್ರಾಮಮಟ್ಟದಲ್ಲೂ ಕೂಡ ರೆಕಾರ್ಡ್‌ಗಳನ್ನು ಕೊಡುವುದರ ಬಗ್ಗೆ ಆಲೋಚನೆ ಮಾಡುತ್ತೇವೆಂದು ಹೇಳಿದ್ದೇನೆ. ಗ್ರಾಮಲೆಕ್ಕಿಗರ ಬಗ್ಗೆ ಹೇಳಿದ್ದಾರೆ. ಗ್ರಾಮದಲ್ಲಿಲ್ಲದಿದ್ದರೆ ಅವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅವರಿಗೆ ಶಿಕ್ಷೆ ಮಾಡುವ ವಿಚಾರದಲ್ಲಿ ನಿಯಮ ತಿದ್ದುಪಡಿ ಮಾಡುವ ಬಗ್ಗೆ ಹೇಳಿದ್ದೇನೆ. ಫಲವತ್ತಾದ ಭೂಮಿಯನ್ನು ವಶಪಡಿಸಿಕೊಳ್ಳಬಾರದು ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಫಲವತ್ತಾದ ಭೂಮಿಯನ್ನು ಕೈಗಾರಿಕೆಗೆ, ನಿವೇಶನಕ್ಕೆ ತೆಗೆದುಕೊಳ್ಳಕೂಡದು ಎಂಬುದು ಸರ್ಕಾರದ ನೀತಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮುಖ್ಯಮಂತ್ರಿಗಳು ಒಂದು ವಿಷಯದಲ್ಲಿ ಹೇಳಿಕೆ ಕೊಟ್ಟಿದ್ದರು. ಮಹಿಳೆಯರಿಗೂ ಆಸ್ತಿಯಲ್ಲಿ ಹಕ್ಕನ್ನು ಕೊಡುತ್ತೇವೆಂದು ಹೇಳಿದ್ದರು ಅದರ ಬಗ್ಗೆ ಮಂತ್ರಿಗಳು ಹೇಳಬೇಕು. ಭೂಸುಧಾರಣೆ ಪ್ರಕಾರ ಗೇಣಿದಾರರಿಂದ ೧೫ ವರ್ಷಗಳವರೆಗೆ ಜಮೀನು ತೆಗೆದುಕೊಳ್ಳಬಾರದು ಎಂದು ನಿಯಮ ಇದ್ದರೂ ಶ್ರೀಮಂತರು ಗೇಣಿದಾರರಿಂದ ಖರೀದಿ ಮಾಡಿದ್ದಾರೆ. ಅಂಥ ಜಮೀನುಗಳನ್ನು ನೇರವಾಗಿ ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ಯಾವ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ? ರಾಜ್ಯಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡಿ ಎಲ್ಲೆಲ್ಲಿ ಅವ್ಯವಹಾರ ನಡೆದಿದೆಯೋ

ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ? ಗೋಕಾಕ್ ಫಾಲ್ಸ್‌ನಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪವರ್ ಸ್ಟೇಷನ್ ಮಾಡಬೇಕೆಂದು ಹಿಂದೆಯೇ ಹೇಳಿದ್ದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಗೋಕಾಕ್ ಫಾಲ್ಸ್ ಎಡಭಾಗದಲ್ಲಿ ೩೦೦ ಮೆಗಾವಾಟ್ಸ್‌ನ ಜನರೇಟಿಂಗ್ ಸ್ಟೇಷನ್ ಆಗುವುದಕ್ಕೆ ಅವಕಾಶ ಇದೆ. ಅದನ್ನು ಮಾಡುತ್ತೀರಾ ಎಂಬುದನ್ನು ಹೇಳಬೇಕು. ಏಳನೇ ಯೋಜನೆಯಲ್ಲಿ ಸಂಕೇಶ್ವರ, ಹುಕ್ಕೇರಿ ನೀರು ಸರಬರಾಜು ಬಗ್ಗೆ ಕ್ರಮ ತೆಗೆದುಕೊಳ್ಳಲು ಕೇಂದ್ರ ಸರ್ಕಾರಕ್ಕೆ ಪ್ರೊಪೋಸಲ್ ಕಳುಹಿಸಿದ್ದೇವೆ ಎಂದು ಹೇಳಿದ್ದೀರಿ, ಅದರ ಬಗ್ಗೆ ಏನಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳಿಗೆ ಕೇಳುತ್ತೇನೆ,

ಶ್ರೀ ಎಸ್. ಆರ್. ಬೊಮ್ಮಾಯಿ.—ಮಹಿಳೆಯರಿಗೆ ಪಾಲು ಕೊಡುವ ಬಗ್ಗೆ ಸರ್ಕಾರ ಆಲೋಚನೆಯಲ್ಲಿದೆ. ರಾಜ್ಯ ಸರ್ಕಾರದ ಅಧಿಕಾರದ ಇತಿಮಿತಿಯಲ್ಲಿ ಆಲೋಚನೆ ಮಾಡುತ್ತಿದ್ದೇವೆ. ಎರಡನೇ ವಿಚಾರ ಟೆನೆನ್ಸಿ ಕಡೆಯಿಂದ ಬೇರೆ ಭೂಮಿ ಖರೀದಿ ಮಾಡುವ ಬಗ್ಗೆಯೂ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಇದರ ಬಗ್ಗೆ ಯಾವ ರೀತಿ ತೀರ್ಮಾನ ಮಾಡುವುದು ಕೂಡ ಪರಿಶೀಲನೆಯಲ್ಲಿವೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಹಲವಾರು ಸಲ ಹೇಳಿದರೂ ಕೂಡ ಅಧಿಕಾರಿಗಳು ನೇರವಾದ ಕಾರ್ಯಕ್ರಮ ತೆಗೆದುಕೊಂಡಿಲ್ಲ. ನೇರವಾಗಿ ಕ್ರಮ ತೆಗೆದುಕೊಳ್ಳದೇ ಹೋದರೆ, ಅಂತಹ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಪರ್ಟಿಕ್ಯುಲರ್ ಕೇಸ್ ಕೊಟ್ಟರೆ, ಅಸಿಸ್ಟೆಂಟ್ ಕಮಿಷನರ್ ಅವರು ಕ್ರಮ ತೆಗೆದುಕೊಳ್ಳುತ್ತಾರೆ. ಅವರಿಗೇ ಪವರ್ಸ್ ಇದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಎಷ್ಟೋ ಸಂದರ್ಭಗಳಲ್ಲೂ ಕ್ರಮ ತೆಗೆದುಕೊಂಡಿರುವುದಿಲ್ಲ. ಈಗ ಸಂಕೇಶ್ವರದ ವಿಚಾರ ನಿಮಗೂ ಗೊತ್ತಿದೆ, ನನಗೂ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬರೆದುಕೊಡಿ, ರೆಕಾರ್ಡ್ಸ್ ಆಫ್ ರೈಟ್ಸ್ ರಿಜಿಸ್ಟ್ರೇಷನ್ ಆಗಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಹೆಚ್. ಪಾಟೀಲ್.—ಅದು ತಮಗೂ ಗೊತ್ತಿದೆ ಎಂದು ಹೇಳಿದ್ದಾರೆ. ಈ ಭಾಷಣ ಮುಗಿದ ಮೇಲೆ, ಅದರ ವಿಚಾರದಲ್ಲಿ ಕ್ರಮ ತೆಗೆದುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೇನಾಮಿ ಟ್ರಾನ್ಸ್ಯಾಕ್ಷನ್ ಆಗಿದ್ದರೆ ಏನೂ ಮಾಡುವುದಕ್ಕೆ ಬರುವುದಿಲ್ಲ ಗೋಕಾಕ್ ಫಾಲ್ಸ್ ಯೋಜನೆ ಮಾಡುವ ಬಗ್ಗೆ ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ.—ಹೈದರಾಬಾದ್ ಕರ್ನಾಟಕ ಹೇಗೆ ಹಿಂದುಳಿದಿದೆಯೋ ಹಾಗೆಯೇ ನಮ್ಮ ಕೋಲಾರ ಜಿಲ್ಲೆಯೂ ಹಿಂದುಳಿದಿರುವುದು ಜಗಜ್ಜಾಹೀರಾದ ವಿಷಯವಾಗಿದೆ. ಪ್ರತಿ ವರ್ಷವೂ ಕೂಡಾ ಕ್ಷಾಮಕ್ಕೆ ಸಿಗುತ್ತಿದೆ. ಹಿಂದೆ ಇದ್ದ ಸರ್ಕಾರವೂ ಶಾಶ್ವತ ಯೋಜನೆ ಬಗ್ಗೆ ಪ್ರಯತ್ನ ಮಾಡಲಿಲ್ಲ. ಈ ಸರ್ಕಾರವಾದರೂ ಶಾಶ್ವತ ಕ್ಷಾಮ ಪರಿಹಾರದ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಬೇಕು. ಪಶ್ಚಿಮಕ್ಕೆ ಹರಿಯುತ್ತಕ್ಕ ಕಾವೇರಿ ನೀರನ್ನು ಪೂರ್ವಕ್ಕೆ ಹರಿಯುವಂತೆ ಯೋಜನೆ ಕೈಗೊಂಡು ಕೋಲಾರಕ್ಕೆ ನೀರು ತರುವ ಪ್ರಯತ್ನ ಮಾಡಬೇಕು. ಎರಡನೆಯದು ಮಲೆನಾಡಿನಲ್ಲಿ ಜಿಗಣೆಗಳು ರಕ್ತ ಹೀರುವಂತೆ, ಜಿಗಣಿ ಮತ್ತು ತಿಗಣೆಗಳು ನಮ್ಮ ದೇಶದಲ್ಲಿ ಇವೆ. ಅವು ಸರ್ವೇಯರ್ಸ್ ಮತ್ತು ವಿಲೇಜ್ ಅಕೌಂಟೆಂಟ್‌ಗಳು. ಈ ದೇಶದಲ್ಲಿ ಇವರಿಂದ ಉಳಿಗಾಲವಿಲ್ಲ. ಸರ್ವೆಯರುಗಳು ಇವತ್ತು ಸರ್ವೆ ಮಾಡಿಸುತ್ತಾರೆ, ಕಲ್ಲು ಹಾಕಿಸುತ್ತಾರೆ. ಮತ್ತೆ ನಾಳೆ ಒಬ್ಬರಿಗೆ ಸರ್ವೆ ಮಾಡಿಸಿ, ಕಲು ಹಾಕಿಸುತ್ತಾರೆ. ಈ ರೀತಿ ಸರ್ವೆಯರ್ಸ್ ವರ್ತಿಸುತ್ತಿದ್ದಾರೆ. ಇನ್ನು ವಿಲೇಜ್ ಅಕೌಂಟೆಂಟ್ಸ್ ಬಗ್ಗೆ, ಅವರು ಮಾಡಬಾರದ್ದೆನ್ನೆಲ್ಲಾ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರದ ಕ್ರಮ ಏನು ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈಗಾಗಲೇ ಹೇಳಿದ್ದೇನೆ. ಒಣ ಬೇಸಾಯದ ಅಭಿವೃದ್ಧಿಗಾಗಿ ಎರಡು ಸಾವಿರ ಯೋಜನೆಗಳನ್ನು ಯೋಜನಾ ಆಯೋಗದ ಮುಂದೆ ಇಟ್ಟಿದ್ದೇವೆ. ಆ ಬಗ್ಗೆ ಪ್ರಯತ್ನ ಮಾಡುತ್ತೇವೆ. ಇನ್ನು ವಿಲೇಜ್ ಅಕೌಂಟೆಂಟ್ಸ್ ಮತ್ತು ಸರ್ವೆಯರ್ಸ್ ಬಗ್ಗೆ ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು, ಸೂಕ್ತ ಬದಲಾವಣೆ ಮಾಡುವ ಯೋಚನೆಯಲ್ಲಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೦–೨೫ ಸೆಂಟ್ಸ್ ಪ್ರಕಾರ ಭೂಮಿಯನ್ನು ಅಕ್ರಮವಾಗಿ ಉಳುಮೆ ಮಾಡಿಕೊಂಡಿದ್ದಾರೆ. ಇವುಗಳನ್ನು ಸಕ್ರಮ ಮಾಡುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿದೆಯೋ? ಅದೇ ರೀತಿಯಲ್ಲಿ ನಮ್ಮ ಉಳ್ಳಾಳ ಕ್ಷೇತ್ರದಲ್ಲಿ ತೆರೆದಂಡೆಯಲ್ಲಿ ೪೦ ಮನೆಗಳ ಜನರು ನಿರಾಶ್ರಿತರಾಗಿದ್ದಾರೆ. ಅವರಿಗೆ ಜಾಗಕೊಡುವುದಕ್ಕೆ ನಮ್ಮ ಉಳ್ಳಾಳ ದಲ್ಲಿ ಇರತಕ್ಕ ಸರ್ವೆ ನಂ. ೧೫೭ರಲ್ಲಿ ೯ ಎಕರೆ ಜಾಗ ಇದೆ, ಅದರಲ್ಲಿ ಒಬ್ಬೊಬ್ಬರಿಗೆ ೫–೫ ಸೆಂಟ್ಸ್ ಕೊಡ ಬೇಕೆಂದು ಕಂದಾಯ ಇಲಾಖೆಯ ಕೆಲವರು ಹೇಳುತ್ತಿದ್ದಾರೆ. ಈ ಬಗ್ಗೆ ನೀವು ಏನು ಮಾಡುತ್ತೀರಿ? ಮತ್ತು ಇಲ್ಲಿ ಅಸೆಂಬ್ಲಿಯೂ ಸೇರಿ, ಅಲ್ಲಿ ಟ್ರಿಬ್ಯುನಲ್‌ಗೂ ಹಾಜರಾಗುವುದಕ್ಕಾಗುವುದಿಲ್ಲ. ಆದುದರಿಂದ ಟ್ರಿಬ್ಯುನಲ್‌ನ್ನು ಸ್ವಲ್ಪ ಮುಂದಕ್ಕೆ ಹಾಕುವ ಆದೇಶವನ್ನು ಕೊಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ನಿರಾಶ್ರಿತರಿಗೆ ಭೂಮಿ ಕೊಡುವ ಬಗ್ಗೆ ಹೇಳಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇವೆ ಟ್ರಿಬ್ಯುನಲ್ ಸಿಟಿಂಗ್ ಬಗ್ಗೆ ಈಗಾಗಲೇ ಹೇಳಿದ್ದೇನೆ, ಅದರ ಬಗ್ಗೆ ಅದಷ್ಟು ಆಲೋಚನೆ ಮಾಡುತ್ತೇನೆ.

ಶ್ರೀ ಎನ್. ಎಸ್. ಖೇಡ್.—ಮಾನ್ಯ ಅಧ್ಯಕ್ಷರೇ. ಒಂದು ಅಮೂಲ್ಯವಾದ ಸೂಚನೆಯನ್ನು ನಮ್ಮ ಯೋಜನಾ ಮಂತ್ರಿಗಳಿಗೆ ಕೊಡಲಿಕ್ಕೆ ಬಯಸುತ್ತೇನೆ. ಬಹುಶಃ ದಕ್ಷಿಣ ಕರ್ನಾಟಕವನ್ನು ಬಿಟ್ಟು ಬೇರೆ ರಾಜ್ಯಗಳಲ್ಲಿ ' ಸೋಲಾರ್ ಎನರ್ಜಿ'' ಪ್ಲಾನ್ ಮಾಡಿ ಕೇಂದ್ರಸರ್ಕಾರದಿಂದ ೨೦೦–೩೦೦ ಕೋಟಿ ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಅದರಂತೆ ನಾವೂ ಕೂಡ ಇದರ ಬಗ್ಗೆ ಕೇಂದ್ರಸರ್ಕಾರವನ್ನು ಒತ್ತಾಯಿಸಬೇಕು. ಇಂತಹ ಅಮೂಲ್ಯವಾದ ಯೋಜನೆಯನ್ನು ಮಾನ್ಯ ಮಂತ್ರಿಗಳು ಆಸ್ಥೆ ವಹಿಸಿ, ಕೇಂದ್ರ ಸರ್ಕಾರಕ್ಕೆ ಬರೆದು ನಮ್ಮ ರಾಜ್ಯಕ್ಕೂ ಮಂಜೂರ್ಮಾಡಿಸಿ, ನಮ್ಮ ರಾಜ್ಯ ಅಭಿವೃದ್ಧಿ ಆಗಲಿ ಎಂದು ಸೂಚಿಸುತ್ತೇನೆ.

ಶ್ರೀ ಎಸ್, ಆರ್. ಬೊಮ್ಮಾಯಿ.—ಸೋಲಾರ್ ಎನರ್ಜಿ ಪಾಸ್ ಮಾಡುವುದರಲ್ಲಿ, ನಮ್ಮ ರಾಷ್ಟ್ರದಲ್ಲಿ ಇದನ್ನು ಯಾರು ಮಾಡಿದ್ದಾರೋ ಗೊತ್ತಿಲ್ಲ. ಮಾನ್ಯ ಸದಸ್ಯರು ಸಲಹೆ ಕೊಟ್ಟಿದ್ದಾರೆ, ಪರಿಶೀಲನೆ ಮಾಡುತ್ತೇವೆ.

ಶ್ರೀ ಯು. ಭೂಪತಿ.—ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಲ್ಲಿ ಯೋಜನಾ ಕಾರ್ಯಕ್ರಮಗಳು ಕಾರ್ಯಗತ ಮಾಡುವುದರಲ್ಲಿ ಡಿಲೇಆಗುತ್ತಿದೆ. ನಿಗಧಿಪಡಿಸಿದ ಅವಧಿಯೊಳಗೆ ಯಾವ ಯೋಜನೆಗಳೂ ಮುಗಿಯುವುದಿಲ್ಲ. ನಿಗದಿಪಡಿಸಿದ ಯೋಜನೆಗಳು ಪೂರ್ಣವಾಗುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ? ನಂತರ ಈ ಲ್ಯಾಂಡ್‌ರಿಫಾರ್ಮ್ಸ್,ಬೇನಾಮಿ ಟ್ರಾನ್‌ಸಾಕ್ಷನ್ ಹೆಸರಿನಲ್ಲಿ ಇವತ್ತಿನ ದಿವಸ ಬಹಳಷ್ಟು ಜನ ಭೂಮಿಯನ್ನು ಇಟ್ಟು ಕೊಂಡಿದ್ದಾರೆ. ರೆಕಾರ್ಡ್‌ನಲ್ಲಿ ಒಬ್ಬರ ಹೆಸರೂ ಇಲ್ಲ. ಇದನ್ನು ಹೆಚ್ಚುವರಿ ಭೂಮಿ ಎಂದು ಮಾಡುವುದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಲ್ಯಾಂಡ್ ಅಕ್ವಿಸಿಷನ್ ಮಾಡುವಾಗ ೪ (೧), ೬ (೧) ರಂತೆ ನೋಟಿಫಿಕೇಷನ್ ಎಲ್ಲಾ ಪತ್ರಿಕೆಗಳಲ್ಲೂ ಅಡ್ವರ್‌ಟೈಸ್‌ಮೆಂಟ್ ಬರುತ್ತದೆ. ಈ ರೀತಿ ಅಡ್ವರ್‌ಟೈಸ್ ಮಾಡುವುದಕ್ಕೆ ನಾರಮ್ಸ್ ಇದೆ. ಈ ರೀತಿ ೧೯೮೪–೮೫ರಲ್ಲಿ ಕೊಟ್ಟ ಬಗ್ಗೆ ಖರ್ಚು ಏನಾಗಿದೆ ಎಂಬುದಕ್ಕೆ ಅಂಕಿಅಂಶಗಳನ್ನು ಕೊಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯಸದಸ್ಯರು ನಾನು ಉತ್ತರ ಕೊಡುವ ಕಾಲದಲ್ಲಿ ಹಾಜರಿದ್ದಿದ್ದರೆ, ನಾನು ಪುನಃ ಹೇಳುವ ಅವಶ್ಯಕತೆ ಇರಲಿಲ್ಲ. ನನ್ನ ಉತ್ತರದಲ್ಲಿ ಹೇಳಿದೆ. ಪ್ಲಾನ್ ಮಾಡುವುದರಲ್ಲಿ, ಏನೇನು ಕಾರ್ಯಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ನನ್ನ ಉತ್ತರದಲ್ಲಿ ಹೇಳಿದ್ದೇನೆ. ಇನ್ನು ಲ್ಯಾಂಡ್ ರಿಫಾರ್ಮ್ಸ್ ವಿಚಾರದಲ್ಲಿ ಸೆಕ್ಷನ್ ೬೩ ಪ್ರಕಾರ ಸಂಮೋಟೋ ಅಸಿಸ್ಟೆಂಟ್ ಕಮಿಷನರ್‌ಗೆ ಪವರ್ಸ್ ಇದೆ. ಈಗಾಗಲೇ ಅನೇಕ ಪ್ರಕರಣಗಳನ್ನು ಅವರು ಕೈಗೊಂಡಿದ್ದಾರೆ. ನಿಗದಿಯಾದ ಕೇಸ್ ಇದ್ದರೆ ಹೇಳಿ, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ೧೯೮೪ರಲ್ಲಿ ಇದರ ಬಗ್ಗೆ ಅಮೆಂಡ್‌ಮೆಂಟ್ ಮಾಡಿ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಪವರ್ಸ್ ಕೊಟ್ಟಿದ್ದೇವೆ. ಇನ್ನು ಅಡ್ವರ್‌ಟೈಸ್‌ಮೆಂಟ್ ಬಗ್ಗೆ ಕೇಂದ್ರಸರ್ಕಾರದ ಜೊತೆ ಮಾತನಾಡಿದ್ದೇನೆ ಕೇಂದ್ರದ ಕಾನೂನಿನ ಪ್ರಕಾರ ಎರಡು ಪತ್ರಿಕೆಗಳಿಗೆ ಅಡ್ವರ್‌ಟೈಸ ಮೆಂಟ್ ಕೊಡಬಹುದು. ಖರ್ಚು ಹೆಚ್ಚಾಗುವ ದೃಷ್ಟಿ ಯಿಂದ ಡೀಟೈಲ್ಸ್ ಕೊಡುವುದಕ್ಕೆ ಬದಲು, ಸಮ್ಮರಿಯನ್ನು ಮಾತ್ರ ಕೊಡುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ. ಇಷ್ಟು ಹಣ ಪತ್ರಿಕೆಗಳಿಗೆ ಖರ್ಚು ಮಾಡುವ ಅವಶ್ಯಕತೆ ಇಲ್ಲ. ನನ್ನ ಹತ್ತಿರ ಕೆಲವು

ಅರ್ಜಿಗಳು ಬಂದಿವೆ. ರಾಜ್ಯದಲ್ಲಿ ಪ್ರಚಲಿತವಾಗಿರುವ ಪತ್ರಿಕೆ, ಜಿಲ್ಲೆಯಲ್ಲಿ ಪ್ರಚಲಿತವಾಗಿರುವ ಪತ್ರಿಕೆ, ಹೀಗೆ ಆಯ್ಕೆ ಮಾಡಬೇಕು. ಇದರ ಬಗ್ಗೆ ವರದಿ ಏನಿದೆ ಅದನ್ನು ತರಿಸಿಕೊಂಡು ಸೂಕ್ತವಾಗಿ ಹಂಚುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಉಪಾಧ್ಯಕ್ಷರೇ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲ್ಲೂಕು ಕಬಿನಿ ಜಲಾಶಯಕ್ಕೆ ಮುಳುಗಡೆಯಾಗಿರುವ ಜಮೀನ್ದಾರರಿಗೆ, ಅವರಿಗೆ ಅದಕ್ಕೆ ಬದಲಾಗಿ ಜಮೀನೂ ಸಿಕ್ಕಿಲ್ಲ, ಇಲ್ಲವೇ ಅದಕ್ಕೆ ಯಾವುದೇ ತರಹದ ಪರಿಹಾರವೂ ಸಿಕ್ಕಿಲ್ಲ ಅವರು ಏನು ಜಮೀನು ಕಳೆದುಕೊಂಡಿದ್ದಾರೆ ಅವರಿಗೆ ಒಂದು ಸರ್ಟಿಫಿಕೇಟ್ ಕೊಟ್ಟು ೧೦–೧೫ ವರ್ಷವಾಗಿದ್ದರೂ ಸಹ ಅವರಿಗೆ ಈ ಬಗ್ಗೆ ಏನು ಪರಿಹಾರ ದೊರಕಬೇಕಾಗಿತ್ತೋ ಅದು ಇನ್ನೂ ದೊರಕಿಲ್ಲ. ಈಗ ಏನಾಗಿದೆ ಎಂದರೆ ಆ ಜಮೀನಿನ ಬಗ್ಗೆ ಯಾರಿಗೆ ಸರ್ಟಿಫಿಕೇಟ್ ಕೊಟ್ಟಿದ್ದೀರೋ ಅವರನ್ನು ಆ ಪ್ರದೇಶದಿಂದ ಓಡಿಸುತ್ತಿದ್ದಾರೆ. ಅಲ್ಲದೆ ಅವರ ಜಮೀನಿನಲ್ಲಿ ಬೇರೆಯವರು ಬಂದು ಕುಳಿತಿದ್ದಾರೆ ಅವರು ನಾವು ಈ ಜಮೀನನ್ನು ಬಿಡುವುದಿಲ್ಲ ಎಂದು ಹೇಳುತ್ತಾರೆ. ಅವರು ನೀವು ಕೊಟ್ಟಿರುವ ಸರ್ಟಿಫಿಕೇಟ್ ಇಟ್ಟುಕೊಂಡರೂ ಕೂಡ ಅವರ ಜಮೀನನ್ನು ಬೇರೆಯವರು ಮಾಡುತ್ತಾ ಇರುವುದರಿಂದ ಈ ಬಗ್ಗೆ ಕೋರ್ಟಿನಲ್ಲಿ ಇಬ್ಬರೂ ಹೋಗಿ ವ್ಯಾಜ್ಯ ಮಾಡುತ್ತಾ ಇರುವುದು ಹೆಚ್ಚಾಗಿದೆ. ಇದು ಬಗೆಹರಿಸಲಾರದ ಸಮಸ್ಯೆಯಾಗಿದೆ, ಈ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಾ ? ಎರಡನೆಯದಾಗಿ ಈ ಜಮೀನನ್ನು ಪರಭಾರೆ ಮಾಡತಕ್ಕಂಥಾ ವಿಚಾರದಲ್ಲಿ ಬಸವಲಿಂಗಪ್ಪನವರು ಏನು ಕನಸು ಕಾಣುತ್ತಾ ಇದ್ದರು, ಅದಕ್ಕೆ ಸ್ವಲ್ಪ ತೊಂದರೆಯಾಗಿದೆ. ಅಲ್ಲಿರುವ ಹರಿಜನರು, ಗಿರಿಜನರು ತಮ್ಮ ಜಮೀನನ್ನು ವಾಪಸ್ಸು ಪಡೆದುಕೊಳ್ಳಲು ಅರ್ಜಿ ಹಾಕಿದ್ದಾರಲ್ಲಾ ಆ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಾ ? ಈ ಜನತಾ ಸರ್ಕಾರ ಬಂದಮೇಲಂತೂ ಕೂಡ ಅವರಿಗೆ ಬಹಳ ಹಿಂಸೆ ಕೊಡುತ್ತಿದ್ದಾರೆ. ಈ ಬಗ್ಗೆ ತಾವೇನು ತೀರ್ಮಾನ ತೆಗೆದುಕೊಂಡಿದ್ದೀರಾ ಎನ್ನುವುದನ್ನು ಹೇಳಬೇಕು.

ಶ್ರೀ ಎಸ್. ಆರ್ ಬೊಮ್ಮಾಯಿ.—ಮಾನ್ಯ ಸದಸ್ಯರು ಕಬಿನಿ ಜಲಾಶಯದಲ್ಲಿ ಮುಳುಗಡೆಯಾಗಿರತಕ್ಕಂಥಾ ಜಮೀನುಗಳ ಬಗ್ಗೆ ಪರಿಹಾರ ಕೊಡುವ ಬಗ್ಗೆ ಬಗ್ಗೆ ಈಗ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದಷ್ಟು ಬೇಗ ಅವರಿಗೆ ಪರಿಹಾರ ಕೊಡಲಿಕ್ಕೆ ಆಜ್ಞೆ ಮಾಡುತ್ತೇನೆ. ಇನ್ನು ಮುಳುಗಡೆ ಪ್ರದೇಶದಲ್ಲಿ, ಇನ್ನೊಂದು ಭಾಗದಲ್ಲಿ ಇರತಕ್ಕಂಥಾ ಜಮೀನು ಯಾರಿಗೆ ಅಲಾಟ್ ಆಗಿದೆ, ಅದನ್ನು ಬೇರೆಯವರು ಅತಿಕ್ರಮಣ ಮಾಡಿರುವುದರ ಬಗ್ಗೆಯೂ ಇಬ್ಬರಲ್ಲೂ ವಿವಾದ ಉಂಟಾಗಿದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಇನ್ನು ಹರಿಜನ ಗಿರಿಜನರ ಭೂಮಿಯ ಪರಭಾರೆ ವಿಚಾರದಲ್ಲಿ ಹೇಳುವುದಾದರೆ ಅದರಲ್ಲಿ ಕೆಲವರಿಗೆ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಮೇಲೆ ಆ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಈ ವಿಚಾರದಲ್ಲಿ ಸುಪ್ರೀಂಕೋರ್ಟ್‌ನಿಂದ ಬಂದಂಥಾ ಒಂದು ತೀರ್ಮಾನದ ಪ್ರಕಾರ ಅದಕ್ಕೆ ತಿದ್ದುಪಡಿ ಮಾಡಿ ೧–೧–೧೯೭೯ ರಿಂದ ಈಚೆಗೆ ಪರಭಾರೆ ಆದಂಥ ಜಮೀನುಗಳನ್ನು ವಾಪಸ್ ಕೊಡಬೇಕು ಅನ್ನುವ ಒಂದು ಆಜ್ಞೆಯನ್ನು ಮಾಡಿದ್ದೇವೆ. ಈ ಬಗ್ಗೆ ಸುಪ್ರೀಂಕೋರ್ಟಿನಿಂದ ಆಜ್ಞೆ ಬಂದ ಮೇಲೆ ಅದರ ಬಗ್ಗೆ ಡೀಟೇಲ್ ವಿವರಣೆಯನ್ನು ಅಧಿಕಾರಿಗಳಿಗೆ ಕೊಟ್ಟಿದೆ. ಮಾನ್ಯ ಸದಸ್ಯರು ಎಲ್ಲಿ ತೊಂದರೆಯಾಗಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದರೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಎಸ್. ಬಾಗಲಕೋಟೆ.—ಸನ್ಮಾನ್ಯ ಉಪಾಧ್ಯಕ್ಷರೇ, ಬಿಜಾಪುರ ಜಿಲ್ಲೆ ಜಗತ್ತಿಗೆ ಪ್ರಸಿದ್ಧವಾದ ಬರಗಾಲ ಎನ್ನುವುದು ಗೊತ್ತಿದೆ. ಬರಗಾಲಕ್ಕೆ ಪ್ರಸಿದ್ಧವಾದ ಜಿಲ್ಲೆ ಅದು. ಈ ವರ್ಷದ ಬರಗಾಲದಲ್ಲಿ ಅಲ್ಲಿ ಸಾಕಷ್ಟು ಕೆಲಸಗಳು ಆಗಿದ್ದರೂ ಸಹ ಇನ್ನು ಕೆಲವು ಕಡೆಗಳಲ್ಲಿ ಹಾಗೆಯೇ ಇದೆ. ಸರ್ಕಾರವೂ ಸಹ ಆ ಜನರ ಬೇಡಿಕೆಗನುಗುಣವಾಗಿ ಇನ್ನೂ ಕೆಲವು ಕೆಲಸಗಳು ಪ್ರಾರಂಭವಾಗಬೇಕಾಗಿದೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದೇನೆಂದರೆ ಪ್ರತಿಯೊಂದು ಊರಿನಲ್ಲೂ, ಪ್ರತಿಯೊಂದು ಪಂಚಾಯತ್ ಮಟ್ಟದಲ್ಲೂ ಕೊನೆಯಪಕ್ಷ ಎರಡು ಕೆಲಸವನ್ನಾದರೂ ಸಹ ಪ್ರಾರಂಭ ಮಾಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಎರಡನೆಯದಾಗಿ ಅಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ತಮಗೆ ಹೇಳಬೇಕಾದರೆ ಅಲ್ಲಿ ಒಂದು ಬೋರ್‌ವೆಲ್ ಹಾಕಬೇಕಾದರೂ ಕೂಡ ಚೀಫ್ ಇಂಜಿನೀಯರ್, ಪಿ.ಹೆಚ್.ಇ. ಇಲಾಖೆಗೆ ಬರೆಯಬೇಕು. ಇಲ್ಲದೆ ಹೋದರೆ ಅವರ ಪರ್ಮಿಷನ್ ಇಲ್ಲದೆ ಅಲ್ಲಿ ಬಾವಿಯನ್ನು ತೋಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಉಪಾಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಡಬೇಕು.

ಮೂರನೆಯದಾಗಿ ಈಗ ದನಗಳ ಮೇವಿಗಾಗಿ ಒಂದು ಕೋಟಿ ರೂಪಾಯಿ ಕೊಟ್ಟಿದ್ದೀರಿ, ಅದು ನಮ್ಮ ಜಿಲ್ಲೆಗೆ ಸಾಕಾಗುತ್ತಾ ಇಲ್ಲ. ದಯವಿಟ್ಟು ಅದಕ್ಕಾಗಿ ಹಣ ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ನಮ್ಮ ಜಿಲ್ಲೆ ಯಾವಾಗಲೂ ಬರಗಾಲಕ್ಕೆ ತುತ್ತಾದಂಥ ಪ್ರದೇಶವಾಗಿರುವುದರಿಂದ ಆ ಜನಕ್ಕೆ ಇನ್ನೂ ಹೆಚ್ಚಿನ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್ ಬೊಮ್ಮಾಯಿ.—ಸ್ವಾಮಿ, ಬರಗಾಲದ ಪ್ರದೇಶಗಳಲ್ಲಿ ಹಣ ಖರ್ಚು ಮಾಡುವುದರ ಬಗ್ಗೆ ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಆದರೂ ಕೂಡ ಅಲ್ಲಿಯ ಜಿಲ್ಲಾಧಿಕಾರಿಗಳು ಅಲ್ಲಿಯ ಶಾಸಕರ ಸಭೆಯನ್ನು ಕರೆದು ಅವರು ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಾರೋ ಅದನ್ನು ತೆಗೆದುಕೊಳ್ಳುವಂತೆ ಅವರಿಗೆ ಸೂಚನೆ ಕೊಟ್ಟಿದ್ದೇವೆ. ಸ್ಕೇರ್ಸಿಟಿ ಏರಿಯಾದಲ್ಲಿ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೂ ಕೂಡ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಯಾವ ಸಲಹೆಗಳನ್ನು ಕೊಡುತ್ತಾರೋ ಅದನ್ನು ಅವರು ಗಣನೆಗೆ ತೆಗೆದುಕೊಳ್ಳುತ್ತಾರೆ. ಇನ್ನು ಮಾನ್ಯ ಸದಸ್ಯರು ಮೇವಿನ ವಿಚಾರದಲ್ಲಿ ಹೇಳಿದ್ದಾರೆ. ಈಗಾಗಲೇ ಅಲ್ಲಿ ಮೇವಿಗಾಗಿ ಒಂದು ಕೋಟಿ ರೂಪಾಯಿಗಳನ್ನು ಏನು ಕೊಟ್ಟಿದ್ದೇವೆ ಅದನ್ನೇ ಖರ್ಚು ಮಾಡುವುದಕ್ಕಾಗಿಲ್ಲ. ಮಾನ್ಯ ಸದಸ್ಯರು ಇದರ ಬಗ್ಗೆ ಏನಾದರೂ ಸಲಹೆ ಕೊಟ್ಟರೆ ಪಕ್ಕದ ರಾಜ್ಯದಿಂದಲಾದರೂ ತರಿಸಿ ಕೊಡುತ್ತೇವೆ. ಅವಶ್ಯಕತೆ ಇದ್ದಲ್ಲಿ ಅದಕ್ಕೆ ಬೇಕಾದರೆ ಇನ್ನೂ ಹೆಚ್ಚಿನ ಹಣ ಬೇಕಾದರೂ ಬಿಡುಗಡೆ ಮಾಡುತ್ತೇವೆ.

ಉಪಾಧ್ಯಕ್ಷರು.—ನಾನು ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇವೆ.
ಪ್ರಸ್ತಾವವೇನೆಂದರೆ,

"೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೪೯, ೪೩, ೫೦, ೫೧, ೫೨ ಮತ್ತು ೫೩ಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗಳನ್ನು ಮಂಜೂರು ಮಾಡಬೇಕು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ — ೪೯ ಭೂ ಕಂದಾಯ ಇತ್ಯಾದಿ

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂ ಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬,೫೪,೨೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೭,೧೦,೯೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

" ಅಭಿಯಾಚನೆ ಕ್ರಮಾಂಕ — ೪೩ ಯೋಜನಾ ಇಲಾಖೆಯ ಅಭಿಯಾಚನೆಗಳು.

" ರಾಜ್ಯಪಾಲರು ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯೋಜನಾ ಇಲಾಖೆಯ ಅಭಿಯಾಚನೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭,೮೦,೫೪,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫.೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ — ೫೦ ಮುದ್ರಾಂಕ (ಸ್ಟಾಂಪುಗಳು) ಮತ್ತು ನೋಂದಣಿ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುದ್ರಾಂಕ (ಸ್ಟಾಂಪು) ಗಳು ಮತ್ತು ನೋಂದಣಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩,೭೮.೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ — ೫೧ ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೈಸರ್ಗಿಕ ವಿಕೋಪಕ್ಕೆ ಪರಿಹಾರಕ್ಕೆ ಸಂದಾಯಮಾಡುವಲ್ಲಿ ಬರತಕ್ಕಂಥಾ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೦೦,೨೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨,೦೦.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ — ೫೨ ಪುನರ್ವಸತಿ ಯೋಜನೆಗಳು.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪುನರ್ವಸತಿ ಯೋಜನೆಗಳಿಗೆ ಸಂದಾಯಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೮,೬೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಅಭಿಯಾಚನೆ ಕ್ರಮಾಂಕ — ೫೩ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿ.

" ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮತೀಯ ಮತ್ತು ಧರ್ಮಾದಾಯ ಸಂಸ್ಥೆಗಳು ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೧೪,೩೩,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು."

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು.